ಕುರಿ ಸಾಕಣೆ

ಡಾ॥ ರಾಮರಾವ್ ಎಸ್ ಜ್ಯೋತಿ



1978

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 24

ಪ್ರಕಟಣೆ: 82

ಕುರಿ ಸಾಕಣೆ

ಡಾ। ರಾಮರಾವ್ ಎಸ್. ಜ್ಯೋತಿ

1978

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಕುರಿ ಸಾಕಣೆ—(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1978, ಪ್ರತಿಗಳು 1000

ಪುಟಗಳು Viii + 87 ಬೆಲೆ: ಸಾದಾ ಪ್ರತಿ ರೂ. 8-00

ಕ್ಯಾಲಿಕೊ ಪ್ರತಿ ರೂ. 13-00

ಪ್ರಧಾನ ಸಂಪಾದನೆ

ಪ್ರಾ। ವೀ. ಜ. ಹಿತ್ತಲಮನಿ

ಕನ್ನಡ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ

ತಾಂತ್ರಿಕಪರಿಶೀಲನೆ

ಡಾ। ಎ. ವಿ. ರೈ

ಪಶು ಸಂಗೋಪನೆ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ

ಕಲೆ

ಎಸ್. ಎನ್. ಶವರ್

ಮುದ್ರಣ

ರಜನಿ ಪ್ರಿಂಟರ್ಸ್

ಬೆಂಗಳೂರು–20

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅದರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಿರಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿ ಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದು ಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನು ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿ ಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆಮಾಡುವುದು ಸುಲಭಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾಲಯದಲ್ಲಿ ಅಲ್ಪಾವಧಿಯಲ್ಲಿ ಮುಕ್ಕಾಲು ಶತಕ್ಕಿಂತ ಹೆಚ್ಚು ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು-560 024
ದಿನಾಂಕ : 1-5-1978

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಮಾನವರಿಗೆ ಆಹಾರ ಮತ್ತು ಉಡುಗೆ ಒದಗಿಸುವಿಕೆಯಲ್ಲಿ ಕುರಿಗಳ ಪಾತ್ರ ಮಹತ್ವದ್ದಾಗಿದೆ. ಕುರಿಗಳ ಹಿಕ್ಕೆ ಹಾಗೂ ಮೂತ್ರಗಳು ಭೂಮಿಯ ಫಲವತ್ತನ್ನು ಕಾಯ್ದಿಡುವುದರಲ್ಲಿ ಹಾಗೂ ಬೆಳೆಗಳಿಗೆ ಪೋಷಕ ಆಹಾರಗಳನ್ನು ಒದಗಿಸುವುದರಲ್ಲಿ ಶ್ರೇಷ್ಠ ಸಾಧನಗಳಾಗಿವೆ. ವ್ಯವಸಾಯ, ಹಸು ಮತ್ತು ಎಮ್ಮೆ ಸಾಕಣೆಗಳಷ್ಟೇ ಕುರಿ ಸಾಕಣೆಯು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಚೀನಕಾಲದಿಂದಲೂ ಬೆಳೆದುಬಂದ ಉದ್ಯೋಗವಾಗಿದೆ. ವಿಶ್ವದ ಎಲ್ಲೆಡೆಯಲ್ಲೂ ಕುರಿಗಳ ಜೋಪಾಸನೆ ಕಂಡು ಬರುತ್ತಿರುವುದು ಈ ಉದ್ಯಮದ ಮಹತಿಯನ್ನು ಎತ್ತಿ ತೋರಿಸುತ್ತಿದೆ. ನಮ್ಮ ದೇಶದಲ್ಲಿ ಅನೇಕರು ಕುರಿ ಸಾಕಣೆಯನ್ನು ಜೀವನೋದ್ಯಮವಾಗಿ ಕೈಕೊಂಡಿದ್ದರೂ, ಅದು ಅವರಿಗೆ ಹೆಚ್ಚಿನ ಲಾಭವನ್ನು ಒದಗಿಸುತ್ತಿಲ್ಲ. ಇದಕ್ಕೆ ಕಾರಣ ಕುರಿಗಳ ಸಾಕುವಿಕೆಯಲ್ಲಿ ಸುಧಾರಿಸಿದ ಉಪಕ್ರಮಗಳನ್ನು ಅನುಸರಿಸದೆ ಇರುವುದು. ಕುರಿ ಸಾಕಣೆಗಾರರು ತಾವು ಅನುಸರಿಸುತ್ತಿರುವ ಕಾರ್ಯದ ಪ್ರಾಚೀನತೆ, ವಿವಿಧ ತಳಿಗಳ ಸಾಕಣೆಯ ಪದ್ಧತಿ, ಅಭಿವೃದ್ಧಿ ಹಾಗೂ ಜೋಪಾಸನೆ, ರೋಗರುಜಿನಗಳು ಇವೇ ಮೊದಲಾದ ಹಲವು ಸಂಗತಿಗಳನ್ನು ತಿಳಿದಿರುವುದು ಅವಶ್ಯವಿದೆ. ಈ ಕೆಲವು ವಿಷಯಗಳು ಈ ಚಿಕ್ಕ ಹೊತ್ತಗೆಯಲ್ಲಿವೆ.

ಪಶುಸಂಗೋಪನ ವಿದ್ಯಾರ್ಥಿಗಳು, ಬೋಧಕರು ಹಾಗೂ ಕುರಿ ಸಾಕಣೆಯಲ್ಲಿ ತೊಡಗಿದ ಸಾರ್ವಜನಿಕರು ಈ ಪುಸ್ತಕದಿಂದ ಪ್ರಯೋಜನ ಪಡೆಯಬಹುದಾಗಿದೆ. ಈ ಪುಸ್ತಕವನ್ನು ಅಚ್ಚಿಗೆ ಸಿದ್ಧಪಡಿಸುವ ಕಾರ್ಯದಲ್ಲಿ ನೆರವಾದ **ಶ್ರೀಮತಿ ಬಿ. ಜಯಮ್ಮ** ಹಾಗೂ ಕರಡೋದುವಿಕೆಯಲ್ಲಿ ಭಾಗವಹಿಸಿದ **ಶ್ರೀ ಬಿ. ಐ. ದೇವರಮನಿ** ಅವರಿಗೆ ಕೃತಜ್ಞತೆಗಳು.

ಚೈತ್ರಮಾಸ, ಕಾಳಯುಕ್ತನಾಮ ಸಂವತ್ಸರ
ಶಾಲಿವಾಹನ ಶಕ 1900

ಕನ್ನಡ ಅಧ್ಯಯನ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ
ಕಾರ್ಯದರ್ಶಿಗಳು

ಪರಿವಿಡಿ

ಕುಲಪತಿಗಳ ಹಾರೈಕೆ iii

ಸಂಪಾದಕರ ಮಾತು iv

ಪರಿವಿಡಿ v

ಅಧ್ಯಾಯ 1. ಕುರಿಗಳ ಪ್ರಾಚೀನ ಮತ್ತು ಅರ್ವಾಚೀನ ಚರಿತ್ರೆ 1

ಪ್ರಾಚೀನ ಕುರಿಗಳ ಚರಿತ್ರೆ; ಅರ್ವಾಚೀನ ಕುರಿಗಳ ಚರಿತ್ರೆ - ಮೆರಿನೋ ಕುರಿಗಳ ಇತಿಹಾಸ.

ಅಧ್ಯಾಯ 2. ಗ್ರೇಟ್ ಬ್ರಿಟನ್ನಿನ ಕುರಿಗಳು 12

1. ಉದ್ದ ಉಣ್ಣೆಯ ಜಾತಿಯ ಕುರಿಗಳು (1) ಲೈಸಿಸ್ಟರ್; (2) ಬಾರ್‌ಡರ್ ಲೈಸಿಸ್ಟರ್; (3) ಲಿಂಕನ್; (4) ಕಾಟ್ಸ್‌ವೊಲ್ಡ್; (5) ಸೌತ್‌ದೇವನ್; (6) ವೇನ್ಸ್‌ಲೇಡೇಲ್; (7) ಕೇಂಟ್ ಅಥವಾ ರೋಮ್ನಿಮಾರ್ಶ್; (8) ರಾಸ್ ಕಾಮನ್

2. ಗಿಡ್ಡ ಉಣ್ಣೆಯ ಜಾತಿಯ ಕುರಿಗಳು (1) ಸೌತ್‌ಡೌನ್ ಕುರಿಗಳು; (2) ಸಫೋಕ್ ಕುರಿಗಳು; (3) ಹಾಂಪ್‌ಶೈರ್ ಕುರಿಗಳು; (4) ಆಕ್ಸ್‌ಫೋರ್ಡ್‌ಡೌನ್; (5) ಡಾರ್‌ಸೆಟ್‌ಡೌನ್; (6) ಶ್ರಾಪ್‌ಶೈರ್; (7) ಡಾರ್‌ಸೆಟ್ ಕೊಂಬಿನ (ಡಾರ್‌ಸೆಟ್ ಹಾರನ್) ಕುರಿಗಳು; (8) ವೆಸ್ಟರನ್ ಅಥವಾ ವಿಲ್ಟ್‌ಶೈರ್ ಹಾರನ್ ಕುರಿಗಳು (9) ರೈಲ್ಯಾಂಡ್ ಕುರಿಗಳು; (10) ಕೆರಿಹಿಲ್ ಕುರಿಗಳು.

3. ಪರ್ವತ ಸೀಮೆಯ ಕುರಿಗಳು (1) ಸ್ಕಾಟ್ ಬ್ಲಾಕ್ (ಕಪ್ಪು ಮುಖದ) ಕುರಿಗಳು (2) ಸ್ವೇಲ್‌ಡೇಲ್ ಕುರಿಗಳು; (3) ಲಾಂಕ್ ಕುರಿಗಳು; (4) ಶೇವಿಯಟ್ ಕುರಿಗಳು; (5) ಹರ್ಡ್‌ವಿಕ್ ಕುರಿಗಳು; (6) ವೇಲ್ಸ್ ಬೆಟ್ಟದ ಕುರಿಗಳು; (7) ಎಕ್ಸ್‌ಮೋರ್ ಅಥವಾ ಹಾರನ್ ಅಥವಾ ಫೋರ್‌ಲಾಕ್ ಕುರಿಗಳು; ಪರ್ವತ ಸೀಮೆಯ ಕುರಿಗಳ ಉಣ್ಣೆಯ ನೂಲುವ ಗುಣಗಳು.

ಅಧ್ಯಾಯ 3. ಭಾರತದ ಕುರಿಗಳು 31

(1) ಹಿಮಾಲಯ ವಲಯದ ಕುರಿಗಳು; (2) ಪಶ್ಚಿಮ ವಲಯದ ಕುರಿಗಳು (3) ದಕ್ಷಿಣವಲಯದ ಕುರಿಗಳು.

ಅಧ್ಯಾಯ 4. ಕರ್ನಾಟಕದ ಕುರಿಗಳು 38

(1) ಡೆಕ್ಕನಿ; (2) ಬಳ್ಳಾರಿ; (3) ಹಾಸನ; (4) ಬನ್ನೂರು ಅಥವಾ ಮಂಡ್ಯ

ಅಧ್ಯಾಯ 5. ಕುರಿ ಸಾಕಣೆಕೆ 44

ಕರ್ನಾಟಕದಲ್ಲಿ ಕುರಿಸಾಕುವ ಪದ್ಧತಿಗಳು; ಹುಲ್ಲುಗಾವಲು; ಕುರಿಗಳಿಗೆ ವಸತಿಸೌಕರ್ಯ.

ಅಧ್ಯಾಯ 6. ಕುರಿ ತಳಿಗಳ ಅಭಿವೃದ್ಧಿ ಹಾಗೂ ಜೋಪಾಸನೆ 54

(1) ಆಯ್ದು ತಳಿ ಅಭಿವೃದ್ಧಿ (2) ಮಿಶ್ರತಳಿ ಅಭಿವೃದ್ಧಿ (3) ತಳಿ ಉತ್ತಮೀಕರಣ; ಬೀಜದ ಟಗರಿನ ಜೋಪಾಸನೆ; ಮರಿಗಳ ಜೋಪಾಸನೆ.

ಅಧ್ಯಾಯ 7. ಕುರಿಗಳ ರೋಗಗಳು 60

(1) ಕುರಿಗಳ ಮೈಲಿಬೇನೆ ಅಥವಾ ಬೊಬ್ಬೆರೋಗ; (2) ನರಡಿ ಅಥವಾ ಲದ್ದಿಬೇನೆ (ಅಂಥ್ರ್ಯಾಕ್ಸ್); (3) ಕರುಳಿನ ವಿಷಬೇನೆ; (4) ಕುರಿಗಳಿಗೆ ಹೊಟ್ಟೆಯಲ್ಲಿ ಸೇರಿಕೊಂಡು ರೋಗವನ್ನುಂಟುಮಾಡುವ ಪರಪುಷ್ಟ ಜಂತುಗಳು-- (1) ದುಂಡು ಜಂತುಗಳು; (2) ಚಪ್ಪಟೆ ಜಂತುಗಳು

ಅಧ್ಯಾಯ 8. ಕುರಿ ಸಾಕಣೆಗಾರರಿಗೆ ಕೆಲವು ಸೂಕ್ತ ಸಲಹೆಗಳು 71

ಅಧ್ಯಾಯ 9. ಉಣ್ಣೆ 73

ಉಣ್ಣೆಗಾಗಿ ಕುರಿಗಳ ಆಯ್ಕೆ; ಉಣ್ಣೆ ಕತ್ತರಿಸಿ ವಿಂಗಡಿಸುವಿಕೆ; ಉಣ್ಣೆ ಕೈಗಾರಿಕೆ; ಉಣ್ಣೆಯ ನಿರ್ಯಾತ ವ್ಯವಹಾರ.

ಆಧಾರ ಗ್ರಂಥಗಳು 79

ಪಾರಿಭಾಷಿಕ ಶಬ್ದಕೋಶ 81

ಕುರಿ ಸಾಕಣೆ

ಅಧ್ಯಾಯ 1

ಕುರಿಗಳ ಪ್ರಾಚೀನ ಮತ್ತು ಅರ್ವಾಚೀನ ಚರಿತ್ರೆ

ಪ್ರಾಚೀನ ಕುರಿಗಳ ಚರಿತ್ರೆ

ಮಾನವನು ಸಾಕಿದ ಸಾಕುಪ್ರಾಣಿಗಳಲ್ಲಿ ಮೊಟ್ಟಮೊದಲಿನದು ಕುರಿ. ಶಿಲಾ ಯುಗದ ಆದಿಭಾಗದಲ್ಲಿಯೇ ಕುರಿಯನ್ನು ಸಾಕುಪ್ರಾಣಿಯಾಗಿ ಬೆಳೆಸಲಾಯಿತು. ಸಾವಿರಾರು ವರ್ಷಗಳಿಂದ ಕುರಿಗಳು ಮಾನವನೊಂದಿಗೆ ಬದುಕಿ, ಬಾಳಿ, ಬೆಳೆದು ಬಂದಿವೆ. ಕ್ರಿ. ಪೂ. 5000–4000 ವರ್ಷಗಳ ಹಿಂದಿನ ಕಾಲದ ದೊರೆತಿರುವ ಈಜಿಪ್ಟಿನ ಸ್ಮಾರಕಗಳಲ್ಲಿ ಕುರಿಗಳ ಚಿತ್ರಗಳು ಕಂಡುಬಂದಿವೆ. ಏಷಿಯಾ ಮೈನರ್, ಚೀನ, ಕ್ರೀಟ್ ಮತ್ತು ಯುರೋಪಗಳಲ್ಲಿ ನಡೆಸಿದ ಭೂಗರ್ಭ ಸಂಶೋಧನೆಯಲ್ಲಿ ಕುರಿಗಳ ಅವಶೇಷಗಳು ದೊರೆತಿವೆ. ಬೈಬಲಿನಲ್ಲಿ ಕುರಿಗಳ ಉಲ್ಲೇಖವಿದೆ. ಮಾನವನ ಮತ್ತು ಕುರಿಗಳ ಸಂಬಂಧವು ಎಷ್ಟು ಪುರಾತನದ್ದು ಎಂಬುದು ಇವುಗಳಿಂದ ಸಹಜವಾಗಿ ತಿಳಿದುಬರುತ್ತದೆ. ಸಾಕುಪ್ರಾಣಿಗಳಲ್ಲಿ ನಾಯಿಯೊಂದನ್ನು ಬಿಟ್ಟರೆ, ಮತ್ತೆ ಬೇರೆ ಯಾವ ಪ್ರಾಣಿಯೂ ಕುರಿಗಳಂತೆ ಜಗತ್ತಿನಲ್ಲಿ ಬೇರೆ ಬೇರೆ ಭಾಗಗಳ ವಿವಿಧ ಹವಾಮಾನಗಳ ಪರಿಸ್ಥಿತಿಗೆ ಹೊಂದಿಕೊಂಡು ವಿಶ್ವವ್ಯಾಪಕವಾಗಿ ಹರಡಿಕೊಂಡು ಬೆಳೆದು ಬಂದಿಲ್ಲ. ಮೊಟ್ಟಮೊದಲಿಗೆ ಕುರಿಗಳು ಬಹಳ ಮೂಲ ಅವಸ್ಥೆಯಲ್ಲಿದ್ದವು. ಈ ಅವಧಿಯಲ್ಲಿಯ ಮತ್ತು ಅಭಿವೃದ್ಧಿ ಹೊಂದಿದ ಕುರಿಗಳ ಮೈಮೇಲೆ ಬೆಳೆಯುವ ಚಪ್ಪಟಿ ಒರಟಾದ ಕೂದಲುಗಳಿಂದ ಕೂಡಿರುತ್ತದೆ. ಇವುಗಳನ್ನು ಮಾನವನು ತನ್ನ ಅನುಕೂಲತೆ ಮತ್ತು ಉಪಯೋಗಕ್ಕೆ ಹೆಚ್ಚು ಅನುಗುಣವಾಗುವಂತೆ ಕುರಿಗಳನ್ನು ಆರಿಸಿ, ಕ್ರಮಬದ್ಧವಾಗಿ ಸಂವರ್ಧನೆ ಮಾಡಿ, ಪೋಷಿಸಿ, ಪಾಲನೆ ಮಾಡಿ, ಅವುಗಳನ್ನು ತನಗೆ ಬೇಕಾದ ಮಾಂಸ ಮತ್ತು ಉಣ್ಣೆಗಾಗಿ ಅಥವಾ ಹಾಲಿಗಾಗಿ ಅಭಿವೃದ್ಧಿಗೊಳಿಸಿ ಕೊಂಡಿದ್ದಾನೆ. ಹೀಗೆ ಸಾವಿರಾರು ವರ್ಷಗಳ ಪರಿಶ್ರಮದ ಫಲವೇ ನಾವು ಇಂದು ನೋಡುತ್ತಿರುವ ಉತ್ತಮ ಉಣ್ಣೆ ಮತ್ತು ಮಾಂಸದ ಜಾತಿಯ ಕುರಿಗಳು.

ಕುರಿಗಳು ಹೇಗೆ ವಿಕಾಸಗೊಂಡವು ಎಂಬ ವಿಷಯ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಈ ವಿಷಯ ಒಂದು ಒಗಟಾಗಿ ಉಳಿದಿದೆ. ಕುರಿಗಳು ತಮ್ಮ ಮರಿಗಳಿಗೆ ಹಾಲು ಉಣಿಸುವುದರಿಂದ ಅವು ಸಸ್ತನಿ ಪ್ರಾಣಿವರ್ಗಕ್ಕೆ ಸೇರಿವೆ. ಇವುಗಳ ಕಾಲುಗಳ ಗೊರಸುಗಳು ಸೀಳಾಗಿರುವುದರಿಂದಲೂ ಮತ್ತು ಇವು ಮೆಲುಕು ಹಾಕುವುದರಿಂದಲೂ ಕುರಿಗಳು ಮೆಲುಕು ಹಾಕುವ ಪ್ರಾಣಿವರ್ಗಕ್ಕೆ ಸೇರಿವೆ. ಇವುಗಳ ಕೊಂಬುಗಳು ಜಿಂಕೆಯ ಕೊಂಬುಗಳಂತೆ ಗಟ್ಟಿಯಾಗಿರದೆ ಮತ್ತು ವರ್ಷವರ್ಷಕ್ಕೆ ಉದುರಿಹೋಗಿ ಮತ್ತೆ ಪುನಃ ಕವಲುಕವಲಾಗಿ ಚಿಗಿತು ಬೆಳೆಯದೆ. ಪೊಳ್ಳಾಗಿದ್ದು ಬೆಳೆಯುತ್ತವೆ. ಆದರಿಂದ ಕುರಿಗಳನ್ನು 'ಬೋವಿಡಿ' ಪ್ರಾಣಿಗಳ ವರ್ಗಕ್ಕೆ ಸೇರಿಸಲಾಗಿದೆ.

ಪ್ರಾಣಿಶಾಸ್ತ್ರಜ್ಞರು ಈ ಮೂಲ ಕುರಿಗಳನ್ನು ಕೆಳಗಿನಂತೆ ಮೂರು ಭಾಗಗಳಾಗಿ ವರ್ಗೀಕರಣ ಮಾಡಿದ್ದಾರೆ :

1) **ಮಾಫ್‌ಲಾನ್** – ಇವು 'ಓವಿಸ್ ಮೂಸಿಮನ್' ಎಂಬ ಗುಂಪಿಗೆ ಸೇರಿದವು.

2) **ಯೂರಿಯಲ್** – ಇವು 'ಓವಿಸ್ ವಿಗನೀ' ಗುಂಪಿಗೆ ಸೇರಿದವುಗಳಾಗಿವೆ.

3) **ಏಷಿಯಾಟಿಕ್ ಅರ್‌ಗಲಿ** – ಇವು ಕಾಡುಕುರಿಗಳಾದ 'ಓವಿಸ್ ಅಮ್ಮಿಯನ್' ಗುಂಪಿಗೆ ಸೇರಿದವು. ಇವು ಎತ್ತರ ಪ್ರದೇಶದ ಕುರಿಗಳು.

ಅತಿ ಪ್ರಾಚೀನ ಕಾಲದ ಮತ್ತು ಅತಿ ದೊಡ್ಡ ಆಕಾರದ ಒಂದು ಕುರಿಯ ತಲೆ ಬುರುಡೆಯು ನಾರ್‌ಫೋಕ್‌ದ ತೀರ ಪ್ರದೇಶದಲ್ಲಿಯ ಭೂಗರ್ಭದಲ್ಲಿ ಸಿಕ್ಕಿದೆ. ಇದು ಸುಮಾರು 25 ಲಕ್ಷ ವರ್ಷಗಳ ಹಿಂದಿನದಿರಬಹುದು ಎಂದು ಪ್ರಾಚ್ಯವಸ್ತು ಸಂಶೋಧನಾಧಿಕಾರಿಗಳು ಹೇಳುತ್ತಾರೆ. ಇದೇ ಅತ್ಯಂತ ಹಳೆಯದು ಮತ್ತು ದೊಡ್ಡದು ಎಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇದರ ಕೊಂಬುಗಳು ಬಹಳ ದೊಡ್ಡವಾಗಿ ಅತಿ ಉದ್ದವಾಗಿರುತ್ತವೆ. ಕ್ರಿ. ಶ. 1880 ರಲ್ಲಿ ನ್ಯೂಟನ್ ಇದಕ್ಕೆ 'ಓವಿಸ್ ಸಾವಿನಿ' ಎಂದು ಹೆಸರು ಕೊಟ್ಟಿರುತ್ತಾನೆ. ಇದಾದ ನಂತರ ಡಾ॥ ಲೀಕೆ ಪೂರ್ವ ಆಫ್ರಿಕಾ ದೇಶದ ಭೂಗರ್ಭ ಉತ್ಖನನದಲ್ಲಿ ಕೆಲವು ಕುರಿಗಳ ಅವಶೇಷಗಳನ್ನು ಹುಡುಕಿ ತೆಗೆದಿದ್ದಾರೆ. ಇದರಲ್ಲಿ ಒಂದು ದೊಡ್ಡ ಕುರಿಯ ತಲೆಬುರುಡೆಯು ಕೊಂಬು ಸಹಿತ ಸಿಕ್ಕಿರುತ್ತದೆ. ಈ ರೀತಿ ಸಿಕ್ಕಿದ ಕೊಂಬಿನ ವ್ಯಾಸ 4 ಅಡಿಗಳಿಗಿಂತ ಹೆಚ್ಚಾಗಿತ್ತು ಮತ್ತು 12 ಅಡಿ ಉದ್ದವಾಗಿತ್ತು ಎಂದು ಹೇಳಲಾಗಿದೆ. ಇದರಿಂದ ಅಂದಿನ ಕುರಿಗಳು ಎಷ್ಟು ಬೃಹದಾಕಾರದವಾಗಿದ್ದವು ಎಂಬುದನ್ನು ಊಹಿಸಬಹುದು.

ಈ ಕಾಡುಕುರಿಗಳ ಮೂಲಸ್ಥಾನ ಮಧ್ಯಏಷಿಯಾದ ಪರ್ವತ ಸೀಮೆ. ಇಲ್ಲಿಂದ

ಮುಂದೆ ಅವು ಯೂರೋಪದ ಬೇರೆಬೇರೆ ಭಾಗಗಳಿಗೆ ಹರಡಿರಬಹುದು. ಭೂಮಧ್ಯ ಸಮುದ್ರದ ದ್ವೀಪ ಪ್ರದೇಶಗಳಲ್ಲಿ ಹೀಗೆ ಬೃಹದಾಕಾರದ ಕಾಡಾವಸ್ಥೆಯಲ್ಲಿರುವ ಮಾಫ್ಲಾನ್ ಜಾತಿಯ ಕುರಿಗಳ ಹಿಂಡು ಆಗಾಗ್ಗೆ ಕಾಣಿಸಿಕೊಂಡಿವೆ. ಮುಂದೆ ಈ ಕುರಿಗಳ ಹಿಂಡು ಅಲಾಸ್ಕಾದ ಮಾರ್ಗವಾಗಿ ಅಮೆರಿಕಾ ಖಂಡದ ಪ್ರದೇಶಗಳಿಗೆ ಹೋಗಿ ನೆಲೆಸಿರಬಹುದು ಎಂದು ಹೇಳಲಾಗಿದೆ. ಈ ಪರ್ವತ ಪ್ರದೇಶಗಳಲ್ಲಿ ದೊಡ್ಡ ಕೊಂಬಿನ ಬೃಹದಾಕಾರದ ಯೂರಿಯಲ್, ಏಷಿಯಾದ ಅರಗಲಿ ಮತ್ತು ಮಾಫ್ಲಾನ್ ಜಾತಿಯ ಕುರಿಗಳ ಹಿಂಡು ನೆಲಸಿವೆ. ಈ ಕಾಡುಕುರಿಗಳು ಇಂದಿನ ಸಾಕುಕುರಿಗಳಿಗಿಂತ ಗಾತ್ರದಲ್ಲಿ ಬಹು ದೊಡ್ಡವು, ಮೈಕಟ್ಟಿನಲ್ಲಿ ತೆಳುವು ಮತ್ತು ನೋಡಲು ಸುಂದರವಾಗಿ ಕಾಣಿಸುತ್ತಿದ್ದವು. ಅವುಗಳ ಕೊಂಬುಗಳು ಗಾತ್ರದಲ್ಲಿ ಹೆಚ್ಚು ದೊಡ್ಡವು. ಅವುಗಳ ಮೈಬಣ್ಣ ಕಂದು ಅಥವಾ ಬೂದಿಮಿಶ್ರಿತ ಕಪ್ಪು ಎಂದು ತಿಳಿದುಬಂದಿದೆ. ಹೆಣ್ಣುಕುರಿಗಳು ಚಳಿಗಾಲದಲ್ಲಿ ಬೆದೆಗೆ ಬರುತ್ತವೆ. ಈ ಕಾಲದಲ್ಲಿ ಹಿಂಡಿನಲ್ಲಿಯ ಟಗರುಗಳಲ್ಲಿ ಹಿಂಡಿನ ನಾಯಕತ್ವಕ್ಕಾಗಿ ಹೊಡೆದಾಟ ಪ್ರಾರಂಭವಾಗುವುದು. ಹೀಗಾಗಿ ಪ್ರತಿ ಹಿಂಡು ಒಡೆದು ಬೇರೆಬೇರೆ ಗುಂಪುಗಳಾಗುವುವು. ಪ್ರತಿಯೊಂದು ಟಗರು ತನ್ನ ಗುಂಪನ್ನು ಕಟ್ಟಿಕೊಂಡು ಅದರ ನಾಯಕತ್ವವನ್ನು ವಹಿಸಿಕೊಂಡು ಪ್ರತ್ಯೇಕವಾದ ತಮ್ಮ ಗುಂಪಿನೊಂದಿಗೆ ಜೀವನವನ್ನು ನಡೆಸುತ್ತದೆ. ಈ ಕಾಡುಕುರಿಗಳ ಮೈತುಪ್ಪಟದ ಮೇಲಿನ ಭಾಗ ನವಿರಾದ ಕೂದಲುಗಳಿಂದಲೂ ಅದರ ಕೆಳಗಿನ ಭಾಗವು ಉಣ್ಣೆಯಿಂದಲೂ ಕೂಡಿರುತ್ತದೆ. ಬೇಸಿಗೆಯ ಕಾಲದಲ್ಲಿ ಉಣ್ಣೆಯು ಸಣ್ಣದಾಗಿಯೂ, ಚಳಿಗಾಲದಲ್ಲಿ ಉದ್ದವಾಗಿ, ದಟ್ಟವಾಗಿ ಬೆಳೆದಿರುತ್ತದೆ. ಈ ಉಣ್ಣೆಯ ಗುಣವನ್ನು ಕಂಡುಕೊಂಡು ಅಂಥ ಕುರಿಗಳನ್ನು ಆರಿಸಿ, ಮುಂದೆ ಸಾಕು ಕುರಿಗಳಲ್ಲಿ ಅದನ್ನು ಬೆಳೆಸಿ ಅಭಿವೃದ್ಧಿಗೊಳಿಸಿ ಇಂದು ಉತ್ತಮ ಉಣ್ಣೆಯ ಕುರಿಗಳ ತಳಿಯನ್ನು ಅಭಿವೃದ್ಧಿಗೊಳಿಸಿಕೊಂಡು ಬೆಳೆಸಲಾಗಿದೆ.

ಅರ್ವಾಚೀನ ಕುರಿಗಳ ಚರಿತ್ರೆ-ಮೆರಿನೋ ಕುರಿಗಳ ಇತಿಹಾಸ

ಮೆರಿನೋ ಕುರಿಗಳು ಜಗತ್ತಿನಲ್ಲಿ ಸರ್ವೋತ್ಕೃಷ್ಟವಾದ ಉಣ್ಣೆಯ ಕುರಿಗಳೆಂದು ಪ್ರಖ್ಯಾತಿ ಪಡೆದಿವೆ. ಇವುಗಳನ್ನು ಉತ್ತಮ ಉಣ್ಣೆಯನ್ನು ಉತ್ಪಾದಿಸುವ ಒಂದು ಸಜೀವಿ ಯಂತ್ರವೆಂದು ಕರೆಯಬಹುದು. ಬೇರೆ ಯಾವ ಜಾತಿಯ ಕುರಿಗಳೂ ಇವುಗಳಷ್ಟು ಉತ್ತಮ ದರ್ಜೆಯ ಉಣ್ಣೆಯನ್ನು ಉತ್ಪಾದಿಸಲಾರವು. ಜಗತ್ತಿನಲ್ಲಿ ಉತ್ಪಾದನೆಯಾಗುವ 400 ಕೋಟಿ ಪೌಂಡು ಉಣ್ಣೆಯಲ್ಲಿ ಶೇಕಡಾ 40ರಷ್ಟು ಉಣ್ಣೆ ಮೆರಿನೋ ಕುರಿಗಳಿಂದ ಮತ್ತು ಶೇಕಡಾ 40ರಷ್ಟು ಉಣ್ಣೆಯು ಮೆರಿನೋ ಕುರಿಗಳಿಂದ ಹುಟ್ಟಿದ ಮಿಶ್ರ ತಳಿ ಅಥವಾ ಬೇರೆಬೇರೆ ಭಾಗದಲ್ಲಿಯ ಬ್ರಿಟಿಷ್ ಕುರಿಗಳಿಂದ ದೊರೆಯುತ್ತದೆ. ಉಳಿದ ಉಣ್ಣೆಯು ಒರಟಾದ ಕಂಬಳಿ ಮತ್ತು

ಒರಟು ಉಣ್ಣೆವಸ್ತ್ರಗಳನ್ನು ತಯಾರಿಸಲು ಉಪಯುಕ್ತವಾದ ಕುರಿಗಳ ಉಣ್ಣೆಯಿಂದ ಕೂಡಿರುತ್ತದೆ. ಅಂದಮೇಲೆ ಈ ಮೆರಿನೊ ಕುರಿಗಳು ಜಗತ್ತಿನಲ್ಲಿಯ ಉಣ್ಣೆಯ ಉತ್ಪಾದನೆ ಮತ್ತು ಉಣ್ಣೆಯ ಕೈಗಾರಿಕೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುತ್ತದೆ ಎಂಬುದು ನಿರ್ವಿವಾದದ ವಿಷಯ. ಈ ಕಾರಣದಿಂದ ಮೆರಿನೋ ಕುರಿಗಳನ್ನು ಬಂಗಾರದ ಕಾಲಿನ ಕುರಿಗಳು ಎಂದು ಕರೆಯಲಾಗಿದೆ.

ಮೆರಿನೋ ಜಾತಿಯ ಕುರಿಗಳ ಜನ್ಮಸ್ಥಳ ಸ್ಪೇನ್‌ದೇಶ. ಸ್ಪಾನಿಷ್ ಭಾಷೆಯಲ್ಲಿ 'ಮೆರಿನೋ' ಅಂದರೆ 'ಕುರಿಗಳ ಕಾಲುದಾರಿಯ ಮೇಲ್ವಿಚಾರಕ' ಎಂದು ಅರ್ಥ. ಕ್ರಿ.ಶ. 1500ರವರೆಗೆ ಮೆರಿನೋ ಕುರಿತು ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಕ್ರಿ. ಶ. 1500–1700ರ ಕಾಲಾವಧಿಯಲ್ಲಿ ಈ ಕುರಿಗಳ ಅಭಿವೃದ್ಧಿಯ ಕಾರ್ಯಗಳು ಹಾಗೂ ಚಟುವಟಿಕೆಗಳ ಬಗ್ಗೆ ಅನೇಕ ವಿವರಗಳು ತಿಳಿದುಬಂದಿವೆ. ಸ್ಪೇನ್ ದೇಶದಲ್ಲಿಯ ಈ ಕುರಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಗುಂಪಿನ ಕುರಿಗಳನ್ನು ಅವುಗಳು ಇದ್ದ ಸ್ಥಳದಲ್ಲಿಯೇ ನೆಲೆಯಾಗಿಟ್ಟುಕೊಂಡು ಸಾಕುತ್ತಿದ್ದರು. ಇವುಗಳನ್ನು 'ಎಸ್ಟಾಂಟ್ಸ್' ಎಂದು ಕರೆದರು. ಎರಡನೆಯ ಗುಂಪಿನ ಕುರಿಗಳನ್ನು ಒಂದೇ ಸ್ಥಳದಲ್ಲಿ ಸ್ಥಿರವಾಗಿ ನಿಲ್ಲದೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹುಲ್ಲು, ನೀರು ಹುಡುಕಿಕೊಂಡು ಮೇಯಿಸುತ್ತ ತಿರುಗಾಡುತ್ತಿದ್ದರು. ಇವುಗಳನ್ನು ಸಂಚಾರಿ ಕುರಿ 'ಟ್ರಾನ್ಸ್‌ಯೂಮೆಂಟ್ಸ್' ಎಂದು ಕರೆದರು. ಮೊದಲನೆಯ ಗುಂಪಿಗೆ ಸೇರಿದ ಕುರಿಗಳನ್ನು ರೈತರು ತಾವು ಇದ್ದ ಊರುಗಳಲ್ಲಿಯೇ ಇಟ್ಟುಕೊಂಡು ಸಾಕುತ್ತಿದ್ದರು. ಇಂತಹ ರೈತರ ಸಂಖ್ಯೆ ಮತ್ತು ಹಿಂಡಿನ ಕುರಿಗಳ ಸಂಖ್ಯೆ ಬಹಳ ಕಡಮೆಯಾಗಿತ್ತು. ಎರಡನೆಯ ಗುಂಪಿನಲ್ಲಿ ಆ ದೇಶದಲ್ಲಿನ ಮುಕ್ಕಾಲು ಪಾಲು ಕುರಿಗಳು ಇದ್ದವು. ಸ್ಪೇನ್ ದೇಶದಲ್ಲಿ ಅಂದಿನ ಕುರಿಸಾಕಣೆ ರಾಜರು ಶ್ರೀಮಂತರು ಮತ್ತು ಪಾದ್ರಿಗಳಿಗೆ ಮಾತ್ರ ಮೀಸಲಾಗಿದ್ದವು. ಈ ಎರಡೂ ಗುಂಪಿನ ಕುರಿಗಳಲ್ಲಿ ಅವುಗಳನ್ನು ಮೇಯಿಸುವ ಪದ್ಧತಿ ಮತ್ತು ಒಡೆತನದಲ್ಲಿ ವ್ಯತ್ಯಾಸವಿತ್ತೇ ಹೊರತು, ಮತ್ತೆ ಬೇರೆ ಯಾವ ರೀತಿಯಲ್ಲಿಯೂ ಹೆಚ್ಚಿನ ವ್ಯತ್ಯಾಸ ಇರಲಿಲ್ಲ. ಸ್ಪೇನಿನ ಹಳೆಯ ರಾಜಧಾನಿಯಾದ ಲೀಯಾನ್‌ನ ಉತ್ತರ ಭಾಗ, ಓಲ್ಡ್ ಕ್ಯಾಸಾಲ್ ಪ್ರದೇಶಗಳಾದ ಸೆಗೋವಿಯಾ ಮತ್ತು ಸೋರಿಯಾ ಭಾಗಗಳು ಮತ್ತು, ನ್ಯೂಕ್ಯಾಸಾಲ್‌ನ ಬ್ಯೂಟಿಯೋಗೋ ಜಿಲ್ಲೆಯಲ್ಲಿಯ ಕುರಿಗಳು ಹೆಚ್ಚಿನ ಅಭಿವೃದ್ಧಿ ಮತ್ತು ಪ್ರಗತಿ ಇತ್ತು. ಚಳಿಗಾಲ ಪ್ರಾರಂಭವಾದ ಕೂಡಲೇ ಬಯಲು ಪ್ರದೇಶಗಳಿಂದ ಏಸ್ಟ್ರಾಮೆನ್‌ಡ್ಯೂರ್ ಲಾಮಾಂಚೆ ಮತ್ತು ಅಂಡಲೂಸಿಯಾ ಮೊದಲಾದ ಪ್ರದೇಶಗಳಿಗೆ ಕುರಿಗಳ ಹಿಂಡನ್ನು ಮೇಯಿಸುವುದಕ್ಕಾಗಿ ಸಾಗಿಸಿಕೊಂಡು ಹೋಗುತ್ತಿದ್ದರು. ಚಳಿಗಾಲದ ನಂತರ ಮತ್ತು ಬೇಸಿಗೆಯ ಕಾಲದಲ್ಲಿ ತಮ್ಮ ಸ್ವಂತ ಊರುಗಳಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು. ಸ್ಪೇನ್ ದೇಶದಲ್ಲಿ ಈ ಪದ್ಧತಿ ಬಹುಕಾಲದವರೆಗೆ ಆಚರಣೆಯಲ್ಲಿತ್ತು. ಈ ಕಾರಣಕ್ಕಾಗಿ ಈ ಕುರಿಗಳ ಹಿಂಡನ್ನು 'ಸಂಚಾರಿ ಕುರಿಹಿಂಡು'ಗಳೆಂದು

ಕರೆಯಲಾಯಿತು. ಈ ಕುರಿಗಳ ಸಂಚಾರದ ಕಾಲಕ್ಕೆ ಅಲ್ಲಿ ಮೇಯುವುದರ ಸಲುವಾಗಿ ಇವುಗಳಿಗಾಗಿಯೇ ಹುಲ್ಲುಗಾವಲುಗಳನ್ನು ಕಾದಿಡಲಾಗುತ್ತಿತ್ತು. ಹೀಗೆ ಕಾದಿಟ್ಟ ಹುಲ್ಲುಗಾವಲುಗಳಲ್ಲಿ ಈ ಕುರಿಗಳು ಮೇಯಲು ಸರ್ಕಾರಕ್ಕೆ ಶುಲ್ಕರೂಪದಲ್ಲಿ ಸ್ವಲ್ಪ ಹಣವನ್ನು ಕೊಡಬೇಕಾಗಿತ್ತು. ಹೀಗೆ ಕುರಿಗಳ ಹಿಂಡುಗಳು ಗುಳೇಹೋಗುವಾಗ ಹೆದ್ದಾರಿಯ ಎರಡೂ ಭಾಗಗಳಲ್ಲಿ ಉದ್ದವಾದ ಮತ್ತು ಅಗಲವಾದ ಹುಲ್ಲಿನಿಂದ ಬೆಳೆ ಬೆಳೆದುನಿಂತ ಪ್ರದೇಶಗಳು ಇವುಗಳು ಮೇಯುವುದರ ಸಲುವಾಗಿಯೇ ಕಾದಿರಿಸಲ್ಪಟ್ಟಿರುತ್ತಿದ್ದವು. ಹೀಗಾಗಿ ಈ ಕುರಿಗಳ ಹಿಂಡು ಶ್ರೇಷ್ಠ ಪರಂಪರೆ, ಉತ್ತಮ ಹಿತಕರವಾದ ಪರಿಸರ, ರಸವತ್ತಾದ ಮತ್ತು ಪೌಷ್ಟಿಕ ಆಹಾರವನ್ನು ಪಡೆದು, ಉತ್ತಮವಾಗಿ ಬೆಳೆದು, ಶ್ರೇಷ್ಠ ತರಗತಿಯ ಉಣ್ಣೆಯನ್ನು ಉತ್ಪಾದಿಸುತ್ತಿದ್ದವು.

ಸ್ಪೇನ್ ದೇಶದಲ್ಲಿ ರಾಜರು ಮತ್ತು ಶ್ರೀಮಂತರ ಒಂದು ಸಮಿತಿಯ ನಿಯಂತ್ರಣಕ್ಕೆ ಕುರಿಗಳ ಸಂಗೋಪನೆ ಮತ್ತು ಉಣ್ಣೆಯ ಉತ್ಪಾದನೆ ಒಳಪಟ್ಟಿತ್ತು. ಕುರಿಗಳ ಉಣ್ಣೆ ಕೈಗಾರಿಕೆ ಮತ್ತು ಅವುಗಳು ಮೇಯುವ ಹುಲ್ಲುಗಾವಲುಗಳ ಅಭಿವೃದ್ಧಿಯ ಕಾರ್ಯಗಳು ಈ ಸಮಿತಿಯ ಆಧೀನದಲ್ಲಿದ್ದವು. ಯಾರೂ ಮೆರಿನೋ ಕುರಿಗಳನ್ನು ಸ್ಪೇನ್ ದೇಶದಿಂದ ಹೊರಕ್ಕೆ ತೆಗೆದುಕೊಂಡು ಹೋಗದಂತೆ ಈ ಸಮಿತಿಯು ನಿರ್ಬಂಧ ವಿಧಿಸಿತ್ತು. ಯಾರಾದರೂ ಈ ಕುರಿಗಳನ್ನು ಸ್ಪೇನ್ ದೇಶದಿಂದ ಹೊರಗೆ ಕಳುಹಿಸಿದಲ್ಲಿ ಅಂತಹವರಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸುತ್ತಿತ್ತು. ಆದರೆ ರಾಜರಿಗೆ ಮಾತ್ರ ಈ ನಿರ್ಬಂಧ ಅನ್ವಯಿಸುತ್ತಿರಲಿಲ್ಲ. ರಾಜರಿಗೆ ಈ ಕುರಿಗಳನ್ನು ಸ್ಪೇನ್‌ನಿಂದ ಹೊರಗೆ ರಫ್ತು ಮಾಡಲು ಸ್ನೇಹಿತರಿಗೆ ಅಥವಾ ಬಂಧುಗಳಿಗೆ ಕಾಣಿಕೆಯಾಗಿ ಕೊಡಲು ವಿಶೇಷ ಅಧಿಕಾರವಿತ್ತು. ರಾಜರು ಈ ಅಧಿಕಾರಬಲದಿಂದ ಕುರಿಗಳನ್ನು ತನಗೆ ಬೇಕಾದವರಿಗೆ ಆಗಾಗ್ಗೆ ಕೊಡುತ್ತಿದ್ದರು. ಇದೂ ಅಲ್ಲದೆ ಆಗಿನ ಕಾಲದಲ್ಲಿ ಉಣ್ಣೆ ಒಂದು ಹಣ ಗಳಿಸುವ ಮುಖ್ಯ ವಸ್ತುವಾಗಿದದ್ದುರಿಂದ ಈ ಕುರಿಗಳ ಕಳ್ಳಸಾಗಾಣಿಕೆಯ ವ್ಯಾಪಾರ ನಡೆದೇ ಇತ್ತು. ಹೀಗಾಗಿ ಮೆರಿನೋ ಕುರಿಗಳು ತಮ್ಮ ಮಾತೃಭೂಮಿಯಾದ ಸ್ಪೇನ್ ದೇಶದಿಂದ ಪರದೇಶಗಳಿಗೆ ಹೋಗಿ ನೆಲೆಸುವಂತಾದವು. ಹೀಗೆ ಬೇರೆಬೇರೆ ದೇಶಗಳಿಗೆ ಹೋದ ಈ ಮೆರಿನೋ ಕುರಿಗಳಿಂದ ಹುಟ್ಟಿದ ಕುರಿಗಳಿಗೆ ಆಯಾ ದೇಶದವರು ತಮ್ಮ ದೇಶದ ಮೆರಿನೋ ಕುರಿಗಳೆಂದು ನಾಮಕರಣ ಮಾಡಿದರು. ಈ ರೀತಿ ಉದ್ಭವಿಸಿದ ಕುರಿತಳಿಗಳ ವಿವರಗಳು ಕೆಳಗಿನಂತಿವೆ :

1) **ಸಾಕ್ಸನ್ ಮೆರಿನೋ:** ಕ್ರಿ.ಶ.1765ರಲ್ಲಿ ಸ್ಪೇನಿನ ರಾಜನು ತನ್ನ ಹಿಂಡಿನಲ್ಲಿ ಉತ್ತಮವಾದ 300 ಕುರಿಗಳನ್ನು ತನ್ನ ಆಪ್ತ ಸಂಬಂಧಿಕ ಸಾಕ್ಸೋನಿಯಾದ ಮೇಯರನಿಗೆ ಕಾಣಿಕೆಯಾಗಿ ಕೊಟ್ಟನು. ಈ ಕುರಿಗಳನ್ನು ಸಾಕ್ಸೋನಿಯಾದ ಎಲೆಕ್ಟರನು ತನ್ನ ದೇಶಕ್ಕೆ ತೆಗೆದುಕೊಂಡುಹೋಗಿ ಅಲ್ಲಿ ಅವುಗಳನ್ನು ತಮ್ಮ ಕುರಿಗಳೊಂದಿಗೆ

ಜೊತೆಗೂಡಿಸಿ ತಳಿಸಂವರ್ಧನೆ ಮಾಡಿ ಹಿಂಡನ್ನು ಅಭಿವೃದ್ಧಿಗೊಳಿಸಿಕೊಂಡನು. ಈ ರೀತಿ ಅಭಿವೃದ್ಧಿಪಡಿಸಿದ ಕುರಿಗಳನ್ನು 'ಸಾಕ್ಸನ್ ಮೆರಿನೋ ಕುರಿಗಳು' ಎಂದು ಕರೆದನು. ಸಾಕ್ಸನ್‌ಮೆರಿನೋ ಕುರಿಗಳು ಕೆಲವು ಕಾಲಾನಂತರ ಅಭಿವೃದ್ಧಿಗೊಂಡು ಜಗತ್ತಿನಲ್ಲಿಯೇ ಅತಿ ಉತ್ತಮವಾದ ಉಣ್ಣೆಯ ತಳಿಕುರಿಗಳೆಂದು ಪ್ರಸಿದ್ಧಿ ಪಡೆದವು.

2) ರಾಂಬ್ಯೂವ ಮೆರಿನೋ: ಫ್ರಾನ್ಸ್ ದೇಶದ ರಾಜನಾದ 16ನೇ ಲೂಯಿಸನು ಕ್ರಿ. ಶ. 1783ರಲ್ಲಿ ಕುರಿಗಳ ಸುಧಾರಣೆಯಲ್ಲಿ ಬಹಳ ಆಸಕ್ತಿ ವಹಿಸಿದ್ದನು. ಇವನು ಸ್ಪೇನ್ ರಾಜನ ಒಪ್ಪಿಗೆಯನ್ನು ಪಡೆದು ಗಿಲ್‌ಬರ್ಟ್‌ನನ್ನು ಸ್ಪೇನ್ ದೇಶಕ್ಕೆ ಕುರಿಗಳನ್ನು ಆರಿಸಿ ತರುವುದಕ್ಕಾಗಿ ಕಳುಹಿಸಿದನು. ಗಿಲ್‌ಬರ್ಟ್‌ನು ಸ್ಪೇನ್‌ದೇಶದಿಂದ ಉತ್ತಮವಾದ 334 ಮೆರಿನೋ ಜಾತಿಯ ಕುರಿ, 42 ಟಗರು ಮತ್ತು 7 ಕಸಿಮಾಡಿದ ಟಗರುಗಳನ್ನು ಫ್ರಾನ್ಸ್ ದೇಶಕ್ಕೆ ತೆಗೆದುಕೊಂಡು ಬಂದನು. ಈ ಕುರಿಗಳನ್ನು ಫ್ರಾನ್ಸ್‌ನಲ್ಲಿಯ ರ್‍ಯಾಂಬ್ಯೂವ ಫಾರ್ಮ್‌ದಲ್ಲಿಟ್ಟು ಸಾಕಿ,ಸಂವರ್ಧನೆಮಾಡಿ ಮುಂದೆ ಹಿಂಡು ಬೆಳೆಸಲಾಯಿತು. ಸ್ಪೇನ್‌ನಿಂದ ತಂದ ಈ ಮೆರಿನೋ ಕುರಿಗಳೊಂದಿಗೆ ತಮ್ಮಲ್ಲಿಯ ಬೇರೆ ಜಾತಿಯ ಕುರಿಗಳನ್ನು ಜೊತೆಗೂಡಿಸಿ ಬಹಳ ಉತ್ತಮವಾದ ಹೊಸ ತಳಿಯ ಕುರಿಗಳನ್ನು ಉತ್ಪಾದಿಸಿದರು. ಈ ಹೊಸ ತಳಿಯ ಕುರಿಗಳಿಗೆ 'ರಾಂಬ್ಯೂವ ಕುರಿ'ಗಳೆಂದು ಕರೆದರು. ಈ ತಳಿಯ ಪೀಳಿಗೆಯ ಸಂತಾನವು ಇವತ್ತಿಗೂ ರಾಂಬ್ಯೂವ ಫಾರ್ಮ್‌ದಲ್ಲಿ ಇವೆ.

ರಾಂಬ್ಯೂವ ತಳಿಯ ಕುರಿಗಳು ಫ್ರಾನ್ಸ್‌ದೇಶದ ಅತ್ಯಂತ ಉತ್ತಮ ಹೆಸರಾದ ಕುರಿಗಳು. ಈ ಕುರಿಗಳಲ್ಲಿ ಕಂಡುಬರುವ ಗುಣವಿಶೇಷಣಗಳೆಂದರೆ–ದೊಡ್ಡಗಾತ್ರ, ಉತ್ತಮಗುಣದ ಮಾಂಸ ಹಾಗೂ ಅತಿ ಉತ್ತಮ ದರ್ಜೆಯ ಉಣ್ಣೆ. ಈ ಕುರಿಗಳು ಹೆಚ್ಚು ಪ್ರಜೋತ್ಪಾದಕ ಶಕ್ತಿಯಿಂದ ಕೂಡಿರುತ್ತವೆ. ಕುರಿಗಳು ಬಹುಬೇಗನೆ ಬೆದೆಗೆ ಬರುತ್ತವೆ. ಇವು ಮಾಂಸ ಮತ್ತು ಉಣ್ಣೆ ಎರಡರ ಉತ್ಪತ್ತಿಗೂ ಪ್ರಯೋಜನಕಾರಿಯಾದ ಕುರಿಗಳು. ಈಗ ಉತ್ತರ ಅಮೇರಿಕದಲ್ಲಿ ಈ ಕುರಿಗಳನ್ನು ಸಾಕುತ್ತಾರೆ.

3) ಇಂಗ್ಲಂಡದಲ್ಲಿ ಮೆರಿನೋ: ಇಂಗ್ಲಂಡದ ರಾಜನಾದ ಮೂರನೆಯ ಜಾರ್ಜನು ಕೆಲವು ಸ್ಪೇನ್ ಮೆರಿನೋ ಕುರಿಗಳನ್ನು ತಂದು ಇಂಗ್ಲೀಷ್ ಜಾತಿಯ ಕುರಿಗಳನ್ನು ಸುಧಾರಿಸಲು ಪ್ರಯತ್ನಿಸಿದನು. ಆದರೆ ಈ ಮೆರಿನೋ ಕುರಿಗಳು ಇಂಗ್ಲಂಡದಲ್ಲಿ ಹೆಚ್ಚು ಪೆಚ್ಚು ಹೆಸರು ಗಳಿಸಲಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಇಂಗ್ಲಂಡದ ಹವಾಮಾನ ಈ ಮೆರಿನೋ ಕುರಿಗಳಿಗೆ ಸರಿಹೋಗದೇ ಇದ್ದುದೇ ಆಗಿದೆ. ಆದ್ದರಿಂದ ಈ ಕುರಿಗಳ ಏಳಿಗೆಯು ಸರಿಯಾಗಿ ಆಗಲಿಲ್ಲ. ಇಂಗ್ಲಂಡದಲ್ಲಿ ಹೆಚ್ಚಾಗಿ ಸ್ವಾಭಾವಿಕವಾಗಿ ಕುರಿಗಳನ್ನು ತಂತಿಬೇಲಿಯಿಂದ ಸುತ್ತುವರಿಸಲ್ಪಟ್ಟ ಹುಲ್ಲುಗಾವಲುಗಳಲ್ಲಿ ಮೇಯಿಸುವುದು ರೂಢಿಯಲ್ಲಿತ್ತು. ಸ್ವತಂತ್ರವಾಗಿ ಸಂಚರಿಸುವ ಈ ಮೆರಿನೋ ಕುರಿ

ಬಂಧಿತವಾಗಿಟ್ಟು ಸಾಕುವ ಪದ್ಧತಿ ಒಗ್ಗದ್ದರಿಂದ ಅವುಗಳ ಏಳಿಗೆಯು ಸಮರ್ಪಕವಾಗಿ ಆಗದೆ ಹೋಯಿತು. ಹೀಗಾಗಿ ಅಲ್ಲಿ ಮೆರಿನೋ ಕುರಿಗಳು ಜನಪ್ರಿಯವಾಗಲಿಲ್ಲ.

4) ಜರ್ಮನಿಯಲ್ಲಿ ಸಾಕ್ಸೋನ್ ಮೆರಿನೋ : ಸಾಕ್ಸೊನಿ ಎಂಬವನು ಮೆರಿನೋ ಕುರಿಗಳನ್ನು ಜರ್ಮನಿಯಲ್ಲಿ ಬಹಳ ಮುತುವರ್ಜಿಯಿಂದ ಸಾಕಲು ಪ್ರಾರಂಭಿಸಿದನು. ಅಂತೆಯೇ ಈ ಕುರಿಗಳಿಗೆ 'ಸಾಕ್ಸೋನಿ ಮೆರಿನೋ ಕುರಿ'ಗಳೆಂದು ಹೆಸರು ಬಂದಿದೆ. ಇವುಗಳು ಸ್ಥಳೀಯ ಕುರಿಗಳಿಗಿಂತ ಉತ್ತಮ ದರ್ಜೆಯ ಉಣ್ಣೆಯನ್ನು ಕೊಡುತ್ತಿದ್ದವು. ಇದರ ಜೊತೆಗೆ ಸಾಕ್ಸೋನ್ ಕುರಿಗಳು ಅತ್ಯುತ್ತಮ ಗುಣದ ಮಾಂಸವನ್ನು ಕೊಡುತ್ತಿದ್ದವು. ಸಾಕ್ಸೋನ್ ಕುರಿಗಳನ್ನು ಕ್ರಮಬದ್ಧವಾಗಿ ಸಾಕಿ ಸಂಗೋಪನೆ ಮಾಡಿದ್ದರಿಂದ ಜರ್ಮನ್ ದೇಶದಲ್ಲಿ ಇವುಗಳು ತನ್ನ ಮೂಲ ಸ್ಥಳಕ್ಕಿಂತ ಉತ್ತಮ ಫಲಿತಾಂಶಗಳನ್ನು ಕೊಟ್ಟವು. ಜಗತ್ತಿನಲ್ಲಿ ಹಿಂದೆಂದೂ ಕಾಣಬರದ ಉತ್ತಮ ಉಣ್ಣೆಯನ್ನು ಜರ್ಮನ್ನರು ಉತ್ಪಾದಿಸಿದರು. ಈ ಸಾಕ್ಸೋನ್ ಮೆರಿನೋ ಉತ್ತಮ ಉಣ್ಣೆಯ ಕುರಿಗಳೆಂದು ಹೆಸರುಗಳಿಸಿದಾಗ್ಯೂ ಅಂದಿನ ಅಲ್ಲಿಯ ಸಂವರ್ಧನಾ ಪದ್ಧತಿಯ ದೋಷದಿಂದ ಈ ಕುರಿಗಳು ಮೂಲ ಮೆರಿನೋ ಕುರಿಗಳ ದೇಹಾರೋಗ್ಯ ಸ್ಥಿತಿ ಮತ್ತು ಆಕಾರಗಳಿಗೆ ಎರವಾಗಬೇಕಾದವು.

5) ರಷ್ಯಾದಲ್ಲಿ ಮೆರಿನೋ: ರಷ್ಯಾದೇಶದ ಮೂಲ ಕುರಿಗಳು ಬಹಳ ಒರಟು ಉಣ್ಣೆಯನ್ನು ಕೊಡುತ್ತಿದ್ದವು. ಈ ಉಣ್ಣೆ ಕೇವಲ ರತ್ನಗಂಬಳಿಗೆ ಉಪಯೋಗವಾಗುತ್ತಿತ್ತು. ಆದ್ದರಿಂದ ಕ್ರಿ.ಶ. 1929ರಿಂದ 1934ರ ನಡುವಣ 5 ವರ್ಷಗಳ ಕಾಲದಲ್ಲಿ 7500 ಮೆರಿನೋ ಕುರಿಗಳನ್ನು ಉತ್ತರ ಕಾಕೇಸಿಯಸ್‌ನ ಭಾಗಗಳಿಗೆ ತರಲಾಯಿತು. ನಂತರ ಇವುಗಳನ್ನು ಸ್ಥಳೀಯ ಕುರಿಗಳೊಡನೆ ತಳಿಸಂವರ್ಧನೆ ಮಾಡಿ ತಳಿ ಸುಧಾರಣೆ ಮಾಡಲಾಯಿತು. ಈ ಕ್ರಮದಿಂದ ಉದ್ಭವಿಸಿದ ಕುರಿಗಳಲ್ಲಿ ಕಂಡು ಬಂದ ದೋಷವನ್ನು ಬೇಗನೆ ಮನಗಾಣಲಾಯಿತು. ಇವುಗಳಲ್ಲಿ ಕಂಡುಬಂದ ಮುಖ್ಯ ದೋಷವೆಂದರೆ ಬಹುಮಡಿಕೆ ಚರ್ಮದ ಮೇಲಿನ ಉಣ್ಣೆಯನ್ನು ಕತ್ತರಿಸುವುದಕ್ಕೆ ಉಂಟಾದ ತೊಂದರೆ. ಇವುಗಳ ಉಣ್ಣೆಯಲ್ಲಿ ಮುಕ್ಕಾಲು ತೂಕದಷ್ಟು ಭಾಗ ನೆಣ ಮತ್ತು ಬೆವರು ಇರುತ್ತಿತ್ತು. ಅಲ್ಲದೆ ಈ ಮಡಿಕೆಗಳಿಂದ ಕಾಡು ನೊಣಗಳು ಶರೀರದಲ್ಲಿ ಸೇರಿಕೊಳ್ಳಲು ಅನುಕೂಲವಾಗಿ ಉಣ್ಣೆಗೆ ಬಹಳ ಹಾನಿಯಾಯಿತು. ಆದುದರಿಂದ ಇವುಗಳನ್ನು ಆಯ್ಕೆ (ಸಿಲೆಕ್ಷನ್) ಪದ್ಧತಿಯಿಂದ ತಳಿಸಂವರ್ಧನೆ ಮಾಡಿ ತಳಿಸುಧಾರಣೆ ಮಾಡಿಕೊಳ್ಳಲಾಯಿತು. ಇವುಗಳಿಗೆ ಹುಟ್ಟಿದ ತಳಿಯ ಕುರಿಗಳನ್ನು 'ಮೆರಿನೋ ಸ್ಟಾವ್ರೋಪೋಲಸಕಾಯ ಮತ್ತು ಕಾಕೇಸಿಯಸ್' ಕುರಿಗಳೆಂದು ಕರೆಯಲಾಯಿತು.

6) ಅಮೇರಿಕದಲ್ಲಿ ಮೆರಿನೋ : ಕ್ರಿ. ಶ. 1810 ರಲ್ಲಿ ಕರ್ನಲ್ ಹಂಫ್ರಿ ಅಮೇರಿಕದಲ್ಲಿ ಮೆರಿನೋ ಕುರಿಗಳನ್ನು ಸಾಕಲು ಪ್ರಾರಂಭಿಸಿದನು. ಅಮೇರಿಕಾದಲ್ಲಿ ಉಣ್ಣೆಯ ತೂಕ, ಉದ್ದಳತೆ ಮತ್ತು ಸೂಕ್ಷ್ಮತೆಗೆ ಬಹಳ ಮಹತ್ವವನ್ನು ಮತ್ತು ಹೆಚ್ಚು ಗಮನವನ್ನು ಕೊಡಲಾಯಿತು. ಮುಖ್ಯವಾಗಿ ಈ ಉದ್ದೇಶಗಳನ್ನು ಸಾಧಿಸುವುದಕ್ಕಾಗಿಯೇ ತಳಿ ಸಂವರ್ಧನೆಯನ್ನು ಪ್ರಾರಂಭಿಸಿದ್ದರಿಂದ ಅಲ್ಲಿ ಸಣ್ಣ ಗಾತ್ರದ ಉಣ್ಣೆಯು ನಯವಾಗಿ ದಟ್ಟವಾಗಿ ಬಹಳ ಮಡಿಕೆಗಳಿಂದ ಕೂಡಿದ ಮತ್ತು ಹೆಚ್ಚು ಕೊಬ್ಬು, ತುಪ್ಪಟಗಳಿಂದ ಕೂಡಿದ ಕುರಿಗಳು ವಿಕಾಸಗೊಂಡವು. ಈ ಕುರಿಗಳನ್ನು 'ವರ್‌ಮೊಂಟ್ ಮೆರಿನೋ ಕುರಿಗಳು' ಎಂದು ಕರೆಯಲಾಯಿತು. ಈ ಸುಧಾರಣೆಯಾದ ತಳಿಗಳಲ್ಲಿ ಮೂರು ಪ್ರಕಾರದ ಕುರಿಗಳು ಉತ್ಪನ್ನವಾದವು. ಅವುಗಳನ್ನು **A,B,C** ಜಾತಿಯ ಕುರಿಗಳೆಂದು ವಿಂಗಡಿಸಲಾಯಿತು.

7) ನ್ಯೂಜಿಲಂಡದಲ್ಲಿ ಮೆರಿನೋ : ಇವು ನ್ಯೂಜಿಲಂಡದಲ್ಲಿ ಕ್ರಿ. ಶ. 1834 ರಲ್ಲಿ ಮೊದಲು ಸಾಕಿ, ಸ್ಥಾಪಿಸಿದ ಮೆರಿನೋ ಕುರಿಗಳು. ಈ ಮೆರಿನೋ ಕುರಿಗಳು ಉಣ್ಣೆಗೆ ಬ್ರಾಡ್‌ಫೋರ್ಡ್ ಮತ್ತು ಲೀವರ್‌ಪೂಲ್‌ನಲ್ಲಿ ಉತ್ತಮ ಮಾರುಕಟ್ಟೆಗಳಾಗಿದ್ದವು. ಬ್ರಾಡ್‌ಫೊರ್ಡ್‌ದಲ್ಲಿ ಒಂದು ಉಣ್ಣೆಯ ಕೈಗಾರಿಕಾ ಸಂಶೋಧನೆಯ ಸಂಸ್ಥೆಯಿದೆ. ಲೀವರ್‌ಪೂಲ್ ಉಣ್ಣೆಯ ಒಂದು ದೊಡ್ಡ ವ್ಯಾಪಾರ ಕೇಂದ್ರ. ನ್ಯೂಜಿಲಂಡದ ಉತ್ತರ ಭಾಗದಲ್ಲಿ ಹೆಚ್ಚು ಮಳೆ ಬೀಳುವುದರಿಂದ ಅಲ್ಲಿಯ ಭೂಮಿ ಸದಾ ಜೌಗಿನಿಂದ ಕೂಡಿರುತ್ತದೆ. ಇಂತಹ ಜೌಗು ಪರಿಸ್ಥಿತಿಯು ಮೆರಿನೋ ಕುರಿಗಳಿಗೆ ಹೊಂದಿಕೊಳ್ಳಲಿಲ್ಲ. ಜೌಗು ಕಡಮೆ ಇರುವ ಈ ದೇಶದ ಕೆಲವು ಪ್ರದೇಶಗಳಲ್ಲಿ ಮೆರಿನೋ ಕುರಿಗಳ ವೃದ್ಧಿ ಸ್ವಲ್ಪಮಟ್ಟಿಗೆ ಆಯಿತು. ಕ್ರಿ. ಶ. 1880ರ ವರೆಗೆ ಉಣ್ಣೆ ಮತ್ತು ಟ್ಯಾಲೋ (ಸತ್ತ ಕುರಿಗಳಿಂದ ತೆಗೆದ ಕೊಬ್ಬು) ಬಹಳವಾಗಿ ಇಲ್ಲಿಂದ ಪರದೇಶಗಳಿಗೆ ರಫ್ತು ಆಗುತ್ತಿತ್ತು. ಉತ್ತಮ ದರ್ಜೆಯ ಮಾಂಸವನ್ನು ಕೊಡುತ್ತಿದ್ದ ಮೆರಿನೋ ಕುರಿಗಳನ್ನು ಮಾಂಸಕ್ಕಾಗಿ ಹೆಚ್ಚಾಗಿ ಉಪಯೋಗಿಸಲು ಪ್ರಾರಂಭಿಸಿದ್ದರಿಂದ ಈ ತಳಿಯ ಕುರಿಗಳ ಇಳಿಮುಖವಾಯಿತು. ಈ ಸಮಸ್ಯೆಯನ್ನು ಬಗೆಹರಿಸಲು 'ರೋಮ್ನಿಮಾರ್ಶ್' ಎಂಬ ಬೇರೊಂದು ತಳಿ ಕುರಿಗಳನ್ನು ಅಧಿಕ ಸಂಖ್ಯೆಯಲ್ಲಿ ಸಂಗೋಪಿಸಲಾಯಿತು. ನ್ಯೂಜಿಲಂಡದಲ್ಲಿ ಉತ್ಪಾದನೆಯಾಗುತ್ತಿದ್ದ ಒಟ್ಟು ಉಣ್ಣೆಯಲ್ಲಿ ಮೆರಿನೋ ಕುರಿಗಳ ಉಣ್ಣೆಯ ಪಾಲು ಶೇಕಡಾ ಮೂರಕ್ಕೆ ಇಳಿಯಿತು. ನಂತರ ಈ ಕುರಿಗಳನ್ನು ಉದ್ದ ಉಣ್ಣೆಯ ಜಾತಿಯ ಕುರಿಗಳೊಂದಿಗೆ ಸಂಕರಣ ಮಾಡಿ ಒಂದು ಹೊಸ ತಳಿಯ ಕುರಿಯನ್ನು ರೂಪಿಸಲಾಯಿತು. ಈ ಹೊಸ ತಳಿಯ ಕುರಿಗಳನ್ನು ಕಾರಿಡೇಲ್ ತಳಿ ಎಂದು ಕರೆಯಲಾಯಿತು.

8) ದಕ್ಷಿಣ ಆಫ್ರಿಕದಲ್ಲಿ ಮೆರಿನೋ : ದಕ್ಷಿಣ ಆಫ್ರಿಕದ ಹವಾ

ಮಾನ, ವಾತಾವರಣ ಮತ್ತು ಪರಿಸರ ಕುರಿಗಳ ಬೆಳವಣಿಗೆಗೆ ಬಹಳ ಹಿತಕರವಾಗಿದೆ. ಈ ಅನುಕೂಲಕರ ವಾತಾವರಣ ಉತ್ತಮವಾಗಿ ಬೆಳೆಯಲು ಬಹು ಸಹಾಯಕ ವಾಯಿತು. ಮೆರಿನೋ ಕುರಿ ಸಾಕಣೆಗೆ ಆಸ್ಟ್ರೇಲಿಯಾ ಪ್ರಥಮ ಸ್ಥಾನವನ್ನು ಗಳಿಸಿದರೆ ಎರಡನೆಯ ಸ್ಥಾನ ದಕ್ಷಿಣ ಆಫ್ರಿಕಕ್ಕೆ ದೊರೆಯುತ್ತದೆ. ದಕ್ಷಿಣ ಆಫ್ರಿಕದ ಸ್ಥಳೀಯ ಕುರಿಗಳು ದಪ್ಪ ಬಾಲವನ್ನು ಹೊಂದಿವೆ. ಇಲ್ಲಿಯ ಸ್ಥಳೀಯ ಕುರಿಗಳು ದಪ್ಪ ಬಾಲದ ಕುರಿಗಳು. ಇಲ್ಲಿ ಕುರಿ ಸಾಕುವ ಉದ್ಯೋಗ ಒಂದು ಪ್ರಮುಖ ಉದ್ಯೋಗ. ಇಲ್ಲಿ ಸಾಕುತ್ತಿರುವ ಕುರಿಗಳಲ್ಲಿ ಶೇಕಡಾ 86ರಷ್ಟು ಮೆರಿನೋ ಕುರಿಗಳು ಇವೆ. ಸ್ಪೇನ್, ಸಾಕ್ಸೋನಿ, ಜರ್ಮನಿ ಮತ್ತು ಆಸ್ಟ್ರೇಲಿಯಾ ಮುಂತಾದ ದೇಶಗಳಿಂದ ಇಲ್ಲಿಗೆ ಮೆರಿನೋ ಕುರಿಗಳನ್ನು ತಂದು ಸಾಕಲಾಗುತ್ತಿದೆ. ಇಲ್ಲಿಯ ಮೆರಿನೋ ಕುರಿಗಳನ್ನು 'ಪೆಪಿನ್ ಮೆರಿನೋ ಕುರಿ'ಗಳೆಂದು ಕರೆಯುತ್ತಾರೆ.

9) ಆಸ್ಟ್ರೇಲಿಯಾ ದೇಶದ ಮೆರಿನೋ: ಆಸ್ಟ್ರೇಲಿಯಾ ದೇಶದ ಸಂಪದಭಿವೃದ್ಧಿಯ ಕಾರ್ಯಗಳಲ್ಲಿ ಕುರಿ ಮತ್ತು ಉಣ್ಣೆ ಕೈಗಾರಿಕೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿರುತ್ತವೆ. ಆಸ್ಟ್ರೇಲಿಯಾ ದೇಶವೆಂದರೆ ಉತ್ತಮ ಉಣ್ಣೆ ಮತ್ತು ಕುರಿಗಳಿಗೆ ಹೆಸರಾದ ದೇಶ. ಅತ್ಯುತ್ತಮ ಉಣ್ಣೆಯ ದೇಶವೆಂದರೆ ಆಸ್ಟ್ರೇಲಿಯಾ ದೇಶ. ಹೀಗೆ ಆಸ್ಟ್ರೇಲಿಯಾ ಮತ್ತು ಉತ್ತಮ ಉಣ್ಣೆ ಈ ಎರಡೂ ಶಬ್ದಗಳು ಒಂದಕ್ಕೊಂದು ಪೂರಕವಾಗಿ ಒಂದರಲ್ಲೊಂದು ಸಮಾವೇಶಗೊಂಡಿರುತ್ತವೆ. ಒಂದು ಇನ್ನೊಂದರ ಕೀರ್ತಿಯ ಪ್ರತೀಕವಾಗಿದೆ. ಕ್ರಿ.ಶ.1788 ರಲ್ಲಿ ಮೊಟ್ಟಮೊದಲು ಕ್ಯಾಪ್ಟನ್ ಫಿಲಿಪ್‌ನು ಗುಡ್‌ಹೋಪ್ ಭೂಶಿರದಿಂದ ನೂರು ಕುರಿಗಳನ್ನು ಕೊಂಡು ಆಸ್ಟ್ರೇಲಿಯಾ ದೇಶಕ್ಕೆ ತೆಗೆದುಕೊಂಡು ಬಂದನು. ಈ ಕುರಿಗಳು ಆಸ್ಟ್ರೇಲಿಯಾಕ್ಕೆ ಬಂದ ಮೇಲೆ ಸ್ವಲ್ಪ ದಿವಸಗಳಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಸತ್ತು ಹೋದವು. ಪುನಃ ಗುಡ್‌ಹೋಪ್ ಭೂಶಿರದಿಂದಲೂ ಮತ್ತು ಕಲ್ಕತ್ತದಿಂದಲೂ ಕೆಲವು ಕುರಿಗಳನ್ನು ತರಲಾಯಿತು. ಒಟ್ಟಿನಲ್ಲಿ ಕ್ರಿ. ಶ. 1792ರ ಕೊನೆಯ ಭಾಗದಲ್ಲಿ ಅಸ್ಟ್ರೇಲಿಯಾದ ಕುರಿಗಳ ಸಂಖ್ಯೆ ಕೇವಲ 150 ಮಾತ್ರ ಆಗಿತ್ತು. ಕ್ರಿ.ಶ.1796 ಕ್ಕೆ ಕುರಿಗಳ ಸಂಖ್ಯೆ 1531ಕ್ಕೆ ಹೆಚ್ಚಿತ್ತು. ಆದರೆ ಈ ಕುರಿಗಳು ಉತ್ತಮ ಉಣ್ಣೆಯನ್ನು ಕೊಡುವ ಕುರಿಗಳಾಗಿರಲಿಲ್ಲ. ಪ್ರಾರಂಭದಲ್ಲಿ ಕೇವಲ ಮಾಂಸಕ್ಕಾಗಿ ಮಾತ್ರ ಈ ಕುರಿಗಳನ್ನು ಸಾಕಲಾಯಿತು. ಕ್ರಿ.ಶ. 1797ರಲ್ಲಿ ಸ್ಪೇನ್ ದೇಶದ ರಾಜನು ಡಚ್ ಸರಕಾರಕ್ಕೆ ಕೆಲವು ಉತ್ತಮವಾದ ಸ್ಪೇನ್ ಮೆರಿನೋ ಕುರಿಗಳನ್ನು ಬಹುಮಾನವಾಗಿ ಕೊಟ್ಟನು. ಇವುಗಳಿಂದ ಉದ್ಭವಿಸಿದ ಪೀಳಿಗೆಯ ಕುರಿಗಳನ್ನು ಕ್ರಿ.ಶ.1797ರಲ್ಲಿ ನಾವಿಕ ಅಧಿಕಾರಿಗಳಾದ ಕ್ಯಾಪ್ಟನ್ ವಾಟರ್‌ಹೌಸ್ ಮತ್ತು ಕ್ಯಾಪ್ಟನ್ ಕೆಂಟ್‌ರು ಈ ಕುರಿಗಳನ್ನು ಕೇಪ್ ಆಫ್ ಗುಡ್‌ಹೋಪ್‌ದಲ್ಲಿ ಖರೀದಿ ಮಾಡಿ ಆಸ್ಟ್ರೇಲಿಯಾ ದೇಶಕ್ಕೆ ತೆಗೆದುಕೊಂಡು ಬಂದರು. ಇವುಗಳು ಅಷ್ಟು

ಪ್ರಗತಿಯನ್ನು ತೋರಿಸಲಿಲ್ಲ. ಮುಂದೆ ಕ್ಯಾಪ್ಟನ್ ಜಾನ್ ಮ್ಯಾಕ್ ಆರ್ಥರ್, ರೆವರೆಂಡ್ ಸ್ಯಾಮುಯಲ್, ಮಾರ್ಸಡನ್, ವಿಲಿಯಂ ಕಾಕ್ಸ್ ಮೊದಲಾದವರು ಸೇರಿಕೊಂಡು ಮೆರಿನೋ ಕುರಿಗಳನ್ನು ಉಣ್ಣೆಯ ಉತ್ಪಾದನೆಯ ಸಲುವಾಗಿ ಕೊಂಡುತಂದು ಸಾಕಲು ಪ್ರಾರಂಭಿಸಿದರು. ಈ ಪ್ರಕಾರ ಆಸ್ಟ್ರೇಲಿಯಾದಲ್ಲಿ ಮೆರಿನೋ ಉಣ್ಣೆಯ ಉತ್ಪಾದನೆ ಹಾಗೂ ಉಣ್ಣೆಯ ಕೈಗಾರಿಕಾ ಉದ್ಯೋಗ ಚಿಕ್ಕದಾಗಿ ಪ್ರಾರಂಭವಾಯಿತು. ನಂತರ ಈ ಉದ್ಯೋಗ ಸ್ಥಿರವಾಗಿ ಬರುಬರುತ್ತ ಹೆಮ್ಮರವಾಗಿ ಬೆಳೆದು ಇಂದು ಆಸ್ಟ್ರೇಲಿಯಾ ದೇಶವು ಜಗತ್ತಿನಲ್ಲಿಯೇ ಉಣ್ಣೆಗೆ ಒಂದು ಪ್ರಮುಖ ದೇಶವಾಗಿದೆ.

ಕ್ರಿ. ಶ. 1880ರಲ್ಲಿ ಮೊದಲ ಬಾರಿಗೆ ಮ್ಯಾಕ್ ಆರ್ಥರ್ ಆಸ್ಟ್ರೇಲಿಯಾದಲ್ಲಿ ಉತ್ಪಾದಿಸಿದ 8 ಮಾದರಿಯ ಉಣ್ಣೆಗಳನ್ನು ಇಂಗ್ಲೆಂಡಿನಲ್ಲಿಯ ರಾಯಲ್ ಸೊಸೈಟಿಯ ಅಧ್ಯಕ್ಷ ಸರ್ ಜೋಸೆಫ್ ಬ್ಯಾಂಕ್ಸ್ ಅವರಿಗೆ ಪರೀಕ್ಷೆಗಾಗಿ ಕಳುಹಿಸಿದನು. ಈ 8 ಮಾದರಿಯ ಉಣ್ಣೆಗಳಲ್ಲಿ ಎರಡು ಮಾತ್ರ ಮೆರಿನೋ ಜಾತಿಯ ಕುರಿಗಳ ಉಣ್ಣೆ; ಉಳಿದ 6 ಉಣ್ಣೆಯ ಮಾದರಿಗಳು ಬೇರೆಬೇರೆ ಜಾತಿಯ ಕುರಿಯವುಗಳಾಗಿದ್ದವು. ಈ ಎಲ್ಲ ಉಣ್ಣೆಗಳು ಉತ್ತಮ ಉಣ್ಣೆಗಳೆಂದು ತೀರ್ಮಾನಿಸಲಾಯಿತು. ಕ್ರಿ. ಶ. 1881 ರಲ್ಲಿ ಮ್ಯಾಕ್ ಆರ್ಥರ್ ಇಂಗ್ಲಂಡಿನಲ್ಲಿ ಸ್ಪೇನ್ ದೇಶದ ಉಣ್ಣೆಗೆ ಸಮನಾಗಿರುವ ಆಸ್ಟ್ರೇಲಿಯಾದಲ್ಲಿ ಉತ್ಪಾದಿಸಿದ ಕುರಿಗಳ ಉಣ್ಣೆಯನ್ನು ಪ್ರಥಮ ಬಾರಿ ನೋಡಿದನು. ಇದೇ ಮೊದಲಬಾರಿ ಆಸ್ಟ್ರೇಲಿಯಾದಿಂದ ಇಂಗ್ಲಂಡಿಗೆ ಉಣ್ಣೆ ರಫ್ತಾದದ್ದು. ಇದಕ್ಕಾಗಿ ಇಂಗ್ಲಂಡಿನಲ್ಲಿ ಮ್ಯಾಕ್ ಆರ್ಥರ್‌ರಿಗೆ ಒಂದು ಸುವರ್ಣ ಪದಕವನ್ನು ಕೊಡಲಾಯಿತು. ಕ್ರಿ. ಶ. 1821ರಲ್ಲಿ ಜಾನ್‌ಮ್ಯಾಕ್ ಆರ್ಥರ್ ಅವರು ತಮ್ಮ ಒಂದು ಕುರಿಯಿಂದ ಉತ್ಪಾದನೆಯಾದ ಉಣ್ಣೆಯ ತೂಕವು 2 ಪೌಂಡು ಮತ್ತು 7 ಔನ್ಸ್‌ನಷ್ಟು ಇತ್ತು ಎಂದು ಬರೆದಿರುತ್ತಾರೆ. ಇದು ಬಹುಮಟ್ಟಿಗೆ ತೊಳೆದ ಉಣ್ಣೆಯ ತೂಕವಿರಬಹುದು; ತೊಳೆಯದ ಉಣ್ಣೆಯ ತೂಕವು 4 ಪೌಂಡಿನಷ್ಟು ಇತ್ತು. ಕುರಿಗಳ ಸುಧಾರಣೆ ಮುಂದುವರಿದು ಇಂದು 12 ಪೌಂಡಿನಷ್ಟು ಉಣ್ಣೆಯು ಒಂದು ಕುರಿಯಿಂದ ಉತ್ಪಾದನೆಯಾಗುತ್ತದೆ. ಉತ್ತಮ ಟಗರು 35 ರಿಂದ 40 ಪೌಂಡು ಉಣ್ಣೆಯನ್ನು ಕೊಡುವಷ್ಟು ಸುಧಾರಣೆಯಾಗಿದೆ. ಆಸ್ಟ್ರೇಲಿಯಾದ ಮೆರಿನೋ ಕುರಿಗಳ ಅಭಿವೃದ್ಧಿಯ ಕಾರ್ಯವನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಹಂತ ಕ್ರಿ. ಶ. 1900ರವರೆಗೆ ಮತ್ತು ಎರಡನೆಯ ಹಂತ ಕ್ರಿ.ಶ. 1900ರಿಂದ ಮುಂದಿನದು. ಮೊದಲನೆಯ ಹಂತದಲ್ಲಿ ಕ್ರಿ. ಶ. 1900ಕ್ಕೂ ಪೂರ್ವದಲ್ಲಿ ಸಾಕ್ಸನ್ ಮೆರಿನೋ ಕುರಿಗಳು ಪ್ರಾಬಲ್ಯ ಹೊಂದಿದ್ದವು. ಆದರೆ ಕ್ರಿ. ಶ. 1900ರ ನಂತರ ಪೇಪಿನ್ಸ್, ಮುರ್ರೆ ಮೊದಲಾದ ಕುರಿಗಾರರು ಸೇರಿಕೊಂಡು ತಮ್ಮ ಸ್ಥಳಗಳಿಗೆ ಹೆಚ್ಚು ಅನುಕೂಲವಾಗುವಂಥ ಕುರಿಗಳನ್ನು ಸಾಕಿ ಸಂವರ್ಧನೆ ಮಾಡಲು ಪ್ರಾರಂಭಿಸಿದರು. ಮೊದಲನೆಯ ಹಂತದಲ್ಲಿ

ಸಾಕ್ಸನ್ ಮೆರಿನೋ ಜಾತಿಯ ಕುರಿಗಳಿಂದ ಹುಟ್ಟಿದ ತಳಿಯಕುರಿಗಳಲ್ಲಿ ಉಣ್ಣೆಯು ಭಾರವಾಗಿಯೂ ಮತ್ತು ಹೆಚ್ಚು ಜಿಡ್ಡಿನಿಂದಲೂ, ಹೆಚ್ಚು ಮಡಿಕೆಗಳಿಂದಲೂ ಕೂಡಿತ್ತು. ಇಂಥ ಉಣ್ಣೆಯನ್ನು ಕತ್ತರಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಹೆಚ್ಚು ಜಿಡ್ಡಿನಿಂದ ಕೂಡಿದ್ದರಿಂದ ಪ್ರಯೋಜನಕ್ಕೆ ಬಾರದಂತಾಯಿತು. ಹೆಚ್ಚು ಮಡಿಕೆಗಳಿದ್ದದ್ದರಿಂದ ಕುರಿಗಳಿಗೆ ಕಾಡುಕೋಣಗಳ ಕಾಟ ವಿಪರೀತವಾಗಿ ಅಪಾರ ಹಾನಿಯಾಯಿತು. ಕ್ರಿ.ಶ. 1900ರ ನಂತರ ಈ ಕುರಿಗಳಲ್ಲಿ ದೋಷಗಳನ್ನು ನಿವಾರಿಸುವುದಕ್ಕಾಗಿ ಪೆಪಿನ್ ಬಂಧುಗಳು 'ಪೆಪಿನ್ ಮೆರಿನೋ' ಎಂಬ ಹೊಸ ತಳಿಯ ಕುರಿಗಳನ್ನು ರೂಪಿಸಿದರು. ಇವುಗಳ ಉಣ್ಣೆಯು ಉತ್ತಮ ತರಗತಿಯ ಉಣ್ಣೆಯಾಗಿತ್ತು. ಈ ಹೊಸ ತಳಿಗೆ 'ವಂಗನೆಲ್ಲಾ' ಎಂಬ ಹೆಸರು ಕೊಡಲಾಯಿತು. ಇವುಗಳು ಕಡಮೆ ಮಡಿಕೆಗಳುಳ್ಳವುಗಳಾಗಿರುತ್ತವೆ. ಈಗ ಈ ಕುರಿಗಳಿಗೆ ಕುತ್ತಿಗೆಯ ಮೇಲೆ 3 ಮಡಿಕೆಗಳಿರುವುದನ್ನು ಸಾಮಾನ್ಯವಾಗಿ ಒಪ್ಪಲಾಗಿದೆ. ಈ ಕುರಿಗಳಿಂದಲೇ ಆಸ್ಟ್ರೇಲಿಯಾದ ಕುರಿಗಳ ಸುಧಾರಣೆಯಾಯಿತು. ಬರುಬರುತ್ತ ಸ್ಪೇನ್, ಸಾಕ್ಸೋನಿ, ಜರ್ಮನಿ, ಅಮೇರಿಕಾ ದೇಶಗಳಿಂದ ಕುರಿಗಳ ಹಿಂಡನ್ನು ತಂದು ಆಸ್ಟ್ರೇಲಿಯಾದ ಕುರಿಗಳ ಅಭಿವೃದ್ಧಿಯಾಗಿ ಇಂದು ಜಗತ್ತಿನ ಉಣ್ಣೆ ಮತ್ತು ಮಾಂಸ ಪೂರೈಸುವ ದೇಶಗಳಲ್ಲಿ ಆಸ್ಟ್ರೇಲಿಯಾ ಒಂದು ಪ್ರಮುಖ ದೇಶವಾಗಿದೆ.

ಆಸ್ಟ್ರೇಲಿಯಾ ದೇಶದ ಮೆರಿನೋ ಕುರಿಗಳ ವಿಶೇಷ ಗುಣಗಳೆಂದರೆ ಉಣ್ಣೆ, ಕೊಂಬು ಮತ್ತು ಖುರಗಳು(ಗೊರಸು)ಬಿಳುಪು. ಕೂದಲುರಹಿತವಾದ ಮೂಗಿನ ಭಾಗವು ಮಾಂಸಭರಿತವಾಗಿ ಕಿತ್ತಳೆ ವರ್ಣ; ಸಾಮಾನ್ಯವಾಗಿ ಬಿಳುಪಾಗಿರುವುದಿಲ್ಲ. ಕಣ್ಣುಗಳು ತಿಳಿ ಬೂದು ಬಣ್ಣ. ಟಗರುಗಳ ಕೊಂಬುಗಳು ಚೆನ್ನಾಗಿ ಬೆಳೆದು, ಒಳಮುಗ್ಗಲಿಗೆ ಮುರಿಗೆ ಮುರಿಗೆಯಾಗಿರಬೇಕು. ಕುರಿಗಳಲ್ಲಿ ಹೆಚ್ಚಿನವು ಕೊಂಬುಗಳಿಲ್ಲದ್ದವು. ಕೊಂಬುಗಳು ಇದ್ದರೂ ಅವಕ್ಕೆ ಯಾವ ಮಹತ್ವವೂ ಇಲ್ಲ. ಬೆನ್ನಿನ ಮೇಲೆ ಕೈಯಾಡಿಸಿದರೆ ಮಾಂಸ ತೆಳುವಾಗಿರುವುದರ ಅರಿವಾಗುತ್ತದೆ. ಬೆನ್ನಿನ ಮುಂದಿನ ಭಾಗ ಇಣೆಯ ಹತ್ತಿರ ಸ್ವಲ್ಪ ಎತ್ತರವಾಗಿರುತ್ತದೆ. ಬೆನ್ನೆಲುಬು ಚೂಪಾಗಿರುತ್ತದೆ. ಕಣ್ಣು ಮತ್ತು ಮೂಗಿನ ಭಾಗಗಳನ್ನು ಬಿಟ್ಟು ಶರೀರವೆಲ್ಲ ಸಾಕಷ್ಟು ಉಣ್ಣೆಯಿಂದ ಆವರಿಸಿರುತ್ತದೆ. ಮುಖದ ಮೇಲೆ ಅಂದರೆ, ಕಪಾಳದ ಮೇಲೆ ರೇಶಿಮೆಯಂಥ ನುಣುಪಾದ ಕೂದಲುಗಳಿರುತ್ತವೆ. ಒತ್ತಾಗಿ, ದಟ್ಟವಾಗಿರುವ ಉಣ್ಣೆಯ ದರ್ಜೆ ಉತ್ತಮವಾಗಿರುತ್ತದೆ.

ಅಧ್ಯಾಯ 2

ಗ್ರೇಟ್ ಬ್ರಿಟನ್ನಿನ ಕುರಿಗಳು

ಮೊಟ್ಟಮೊದಲಿಗೆ ಪರ್ವತ ಪ್ರದೇಶಗಳಲ್ಲಿ ಮೂಲಸ್ಥಿತಿಯಲ್ಲಿದ್ದ ಕುರಿಗಳನ್ನು ಪೋಷಿಸಿ, ಪಾಲನೆ ಮಾಡಿ, ಕ್ರಮಬದ್ಧವಾಗಿ ಸಂವರ್ಧನೆಮಾಡಿ, ಅಭಿವೃದ್ಧಿಗೊಳಿಸಿ ಉತ್ತಮ ಉಣ್ಣೆಯ ತಳಿಯ ಜಾತಿಯ ಕುರಿಗಳನ್ನು ಉತ್ಪಾದಿಸಿದ ಶ್ರೇಯಸ್ಸು ಬ್ರಿಟಿಷ್ ಜನರಿಗೆ ಸಲ್ಲುತ್ತದೆ. ಭೌಗೋಲಿಕವಾಗಿ ಹಾಗೂ ಕುರಿಗಳ ಗುಣಗಳಿಗನುಗುಣವಾಗಿ ಗ್ರೇಟ್ ಬ್ರಿಟನ್ನಿನ ಕುರಿಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು:

1) ಉದ್ದ ಉಣ್ಣೆಯ ಜಾತಿಯ ಕುರಿಗಳು.

2) ಗಿಡ್ಡ ಉಣ್ಣೆಯ ಜಾತಿಯ ಕುರಿಗಳು.

3) ಪರ್ವತ ಸೀಮೆಯ ಕುರಿಗಳು.

1) ಉದ್ದ ಉಣ್ಣೆಯ ಜಾತಿಯ ಕುರಿಗಳು : ಇವು ಆಕಾರದಲ್ಲಿ ಮತ್ತು ಮೈಕಟ್ಟಿನಲ್ಲಿ ದೊಡ್ಡವು. ಮುಖ ಮತ್ತು ಕಾಲುಗಳು ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಇವುಗಳಿಗೆ ಕೋಡುಗಳು ಇರುವುದಿಲ್ಲ. ಇದರ ತುಪ್ಪಟ ಉದ್ದ, ಹೊಳಪು, ಮೈಮೇಲೆ ಬಹಳ ದಟ್ಟವಾಗಿ ಬೆಳೆದಿರುವ ಉಣ್ಣೆಯಿಂದ ಕೂಡಿರುತ್ತದೆ. ಇದರ ಚರ್ಮ ಗುಲಾಬಿ ಬಣ್ಣದ್ದಾಗಿರುತ್ತದೆ. ಇದರ ಉಣ್ಣೆಯ ತಂತುಗಳು (ಎಳೆಗಳು) 7 ಅಥವಾ 8 ರಿಂದ ಹಿಡಿದು 18 ಅಥವಾ 20 ಅಂಗುಲಗಳವರೆಗೆ ಉದ್ದವಾಗಿರುತ್ತವೆ ಮತ್ತು ಅವುಗಳ ವ್ಯಾಸ (ಅಡ್ಡಳತೆ) 0.045ರಿಂದ 0.050 ಮಿಲಿಮೀಟರ್‌ನಷ್ಟು ದಪ್ಪ ಇರುತ್ತದೆ. ಉಣ್ಣೆ ಸಾಮಾನ್ಯವಾಗಿ ಶುದ್ಧಬಿಳುಪು ಬಣ್ಣದ್ದು. ಕಪ್ಪುಮಿಶ್ರಿತ ಬಣ್ಣದ ಉಣ್ಣೆ ಕಡಮೆ ಎಂದು ಹೇಳಬಹುದು. ಈ ಕುರಿಗಳ ತೊಡೆಗಳ ಮಾಂಸಖಂಡಗಳು ಹೆಚ್ಚು ಉಬ್ಬಿರುವುದಿಲ್ಲ. ಇದರ ಮಾಂಸ ಮಧ್ಯಮ ದರ್ಜೆಯದು. ಹೆಚ್ಚು ರುಚಿಕರವಾಗಿರುವುದಿಲ್ಲ ಮತ್ತು ಅಧಿಕ ಕೊಬ್ಬಿನಿಂದ ಕೂಡಿಕೊಂಡಿರುತ್ತದೆ. ಸ್ಪೇನ್,

ಒಂದುಕಾಲದಲ್ಲಿ ಗಿಡ್ಡ ಉತ್ತಮ ಉಣ್ಣೆಯ ಕುರಿಗಳಿಗೆ ಹೆಸರಾಗಿದ್ದಂತೆ ಇಂಗ್ಲಂಡ್ ಒರಟಾದ ಹೊಳಪಿನಿಂದ ಕೂಡಿದ ಉಣ್ಣೆಗೆ ಮತ್ತು ಉಣ್ಣೆಯ ಕೈಗಾರಿಕಾ ಅಭಿವೃದ್ಧಿಗೆ ಹೆಸರಾದ ದೇಶ. ಈ ಉದ್ದ ಉಣ್ಣೆಯ ಜಾತಿಯ ಕುರಿಗಳನ್ನು ಸಾರವತ್ತಾದ, ಸಮ ಪಾತಳಿಯ ಪ್ರದೇಶಗಳಾದ ಲೈಸಿಸ್ಟರ್, ಲಿಂಕನ್ ಶೈರ್ ಮತ್ತು ಕಾಟ್ಸ್‌ವೋಲ್ಡ ಪರ್ವತ ಪ್ರದೇಶಗಳಲ್ಲಿ ಸಂವರ್ಧನೆಮಾಡಿ ಸಾಕಿ, ಬೆಳೆಸುತ್ತಾರೆ. ಇವುಗಳನ್ನು ಕೇವಲ ಉಣ್ಣೆಗಾಗಿಯೇ ಬೆಳೆಸಲಾಯಿತು. ಹೀಗಾಗಿ ಇವು ಉತ್ತಮದರ್ಜೆಯ ಮಾಂಸವನ್ನು ಕೊಡುವ ಕುರಿಗಳಾಗಿಲ್ಲ. ಈ ಉದ್ದ ಉಣ್ಣೆಯ ಜಾತಿ ಕುರಿಗಳು ಸಾಮಾನ್ಯವಾಗಿ ತಡವಾಗಿ ಬೆದೆಗೆ ಬರುತ್ತವೆ.

ಉದ್ದ ಉಣ್ಣೆ ಜಾತಿಯ ಕುರಿಗಳ ಕೆಲವು ತಳಿಗಳು ಈ ಕೆಳಗಿನಂತಿರುತ್ತವೆ:

1) ಲೈಸಿಸ್ಟರ್
2) ಬಾರ್‌ಡರ್ ಲೈಸಿಸ್ಟರ್
3) ಲಿಂಕನ್
4) ಕಾಟ್ಸ್‌ವೋಲ್ಡ
5) ಸೌತ್‌ದೇವನ್
6) ದೇವನ್ ಲಾಂಗ್‌ವೂಲ್
7) ದೇವನ್ ಕ್ಲೋಸ್‌ವೂಲ್
8) ವೆನ್ಸ್‌ಲೇ ಡೇಲ್
9) ಕೆಂಟ್ ಅಥವಾ ರೋಮ್ನೆಮಾರ್ಶ್
10) ರಾಸ್‌ಕಾಮನ್

1) **ಲೈಸಿಸ್ಟರ್ :** ಲೈಸಿಸ್ಟರ್ ಜಾತಿಯ ಕುರಿಗಳು ಉದ್ದ ಉಣ್ಣೆಯ ಜಾತಿಯ ಕುರಿಗಳಲ್ಲಿ ಬಹಳ ಶುದ್ಧವಾದ ತಳಿ ಕುರಿಗಳಾಗಿವೆ. ಈ ಕುರಿಗಳು ಲೈಸಿಸ್ಟರ್ ಕುರಿಗಳೆಂದು ಕರೆಯಲಾಗಿದೆ. ಈ ಜಾತಿ ಕುರಿಗಳು ಬಹಳ ಹಿಂದಿನ ಕಾಲದ ಕುರಿಗಳು. ಸುಧಾರಣೆಯಾದ ಕುರಿಗಳಲ್ಲಿ ಇವೇ ಮೊದಲನೆಯ ಜಾತಿಕುರಿಗಳೆಂದು ಹೇಳಲಾಗಿದೆ. ಇವುಗಳ ಸುಧಾರಣೆ ಕೀರ್ತಿ ಡಿಶ್ಲೆಹಾಲ್‌ನಲ್ಲಿಯ ಪಶುಪಾಲಕ ರಾಬರ್ಟ್ ಬೇಕ್‌ವೇಲ್‌ಗೆ ಸಲ್ಲುತ್ತದೆ. ಈತನು ಬ್ರಿಟನ್ ದೇಶದವನು. ಕ್ರಿ. ಶ. 725ರಲ್ಲಿ ಒಂದು ರೈತ ಕುಟುಂಬದಲ್ಲಿ ಲೈಸಿಸ್ಟರ್ ಡಿಶ್ಲೆ ಎಂಬ ಊರಲ್ಲಿ ಹುಟ್ಟಿದನು. ಇವನ ತಳಿಸಂವರ್ಧನೆಯ ತತ್ವವೆಂದರೆ, ಕುರಿಗಳ ಗುಣವನ್ನು ಅವುಗಳಿಗೆ ಹುಟ್ಟಿದ ಪೀಳಿಗೆಯಿಂದ ಅಳೆಯುವಿಕೆ.

ಇವನ ತಳಿಸಂವರ್ಧನೆ ತತ್ವ ಆಗಿತ್ತು. ಇವನು ತನ್ನ ಹಿಂಡಿನಲ್ಲಿದ್ದ ಟಗರು ಮರಿಗಳನ್ನು ಬೇರೆ ರೈತರಿಗೆ ಕೊಟ್ಟು, ತನಗೆ ಬೇಕಾದಾಗ ಮತ್ತೆ ಪಡೆಯುವ ಕರಾರಿನ ಮೇಲೆ ಕೊಡುತ್ತಿದ್ದನು. ಹೀಗೆ ಕೊಟ್ಟ ಟಗರುಗಳಿಗೆ ಹುಟ್ಟಿದ ಕುರಿಮರಿಗಳನ್ನು ಅನುವಂಶಿಕ ದೃಷ್ಟಿಯಿಂದ ಪರಿಶೀಲಿಸುತ್ತಿದ್ದನು. ಅವು ಉತ್ತಮವಾದ ಕುರಿಗಳೆಂದು ಕಂಡುಬಂದಲ್ಲಿ ತಾನು ಕೊಟ್ಟ ಟಗರುಗಳನ್ನು ಪುನಃ ತಂದು ತನ್ನ ಹಿಂಡಿನ ಕುರಿಗಳಲ್ಲಿ ಸೇರಿಸಿ ತಳಿ ಸಂವರ್ಧನೆಗಾಗಿ ಉಪಯೋಗಿಸುತ್ತಿದ್ದನು. ಈ ಕುರಿಗಳೇ ಮುಂದೆ ಅನೇಕ ಉದ್ದ ಉಣ್ಣೆಯ ಕುರಿಗಳ ತಳಿಸಂವರ್ಧನೆಗೆ ತಳಪಾಯವಾದವು. ರಾಬರ್ಟ್ ಬೇಕ್‌ವೆಲ್ ಈ ಕುರಿಗಳ ಸುಧಾರಣೆಯನ್ನು ಹೊಸ ಸಂಗೋಪನಾ ಪದ್ಧತಿಯಿಂದ ಸಾಧಿಸಿದನು. ಮೊಟ್ಟಮೊದಲಿಗೆ ಇವು ಉದ್ದಕಾಲಿನ, ಕೃಶವಾದ ಮತ್ತು ಮಾಂಸದ ಕುರಿಗಳ ಯಾವ ಉತ್ತಮ ಗುಣಗಳು ಇಲ್ಲದ ಕುರಿಗಳಾಗಿದ್ದವು. ಆಗಿನ ಕಾಲದ ಕುರಿಗಳಿಗಿಂತಲೂ ಸಣ್ಣ ವಾದರೂ ಹೆಚ್ಚಿನ ಪ್ರಮಾಣ ಮತ್ತು ಉದ್ದ ಉಣ್ಣೆ ಗಟ್ಟಿ ಮೈಕಟ್ಟುಳ್ಳ ಮತ್ತು ಪುಷ್ಟ ವಾಗಿ ಬೆಳೆಯುವ ಗುಣವುಳ್ಳ ಕುರಿಗಳನ್ನು ಅಭಿವೃದ್ಧಿಪಡಿಸುವುದು ರಾಬರ್ಟ್ ಬೇಕ್ ವೆಲ್‌ನ ಗುರಿಯಾಗಿತ್ತು. ಇವನು ಈ ಕುರಿಗಳಲ್ಲಿ ಉತ್ತಮವಾದ ಕುರಿಗಳನ್ನು ಮಾತ್ರ ಆರಿಸಿ, ಇವುಗಳ ಸಂಕರಮಾಡಿ, ಸಂಗೋಪನೆಗೈದು ಮುಂದಿನ ಪೀಳಿಗೆಯನ್ನು ಬೆಳೆಸಿದನು. ಹೀಗೆ ಹುಟ್ಟಿದ ಪೀಳಿಗೆಯಲ್ಲಿ ಉತ್ತಮವಾದವುಗಳನ್ನು ಮಾತ್ರ ಆರಿಸಿ ಅವುಗಳೊಳಗೆ ಮತ್ತೆ ಸಂಕರಗೊಳಿಸಿ ಮುಂದಿನ ತಳಿಶುದ್ಧತೆ ಹಿಂಡನ್ನು ಬೆಳಸಿಕೊಂಡನು. ಈ ಸಂಕರ ಕಾರ್ಯವನ್ನು ರಾಬರ್ಟ್ ಬೇಕವೆಲ್‌ನು ಕ್ರಿ.ಶ. 1755-1775ರವರೆಗೆ ತಪ್ಪದೇ ಕ್ರಮಬದ್ಧವಾಗಿ ಶ್ರಮವಹಿಸಿ ನಡೆಸಿದನು. ಇದರ ಪರಿಣಾಮವಾಗಿ ಇವನು ಒಂದು ಹೊಸ ಸುಧಾರಿಸಿದ ಕುರಿಯ ಪೀಳಿಗೆಯನ್ನೇ ಕೊಡಿಸಿದನು. ಈ ಉತ್ತಮ ಕಾರ್ಯದಿಂದಾಗಿ ಬೇಕ್‌ವೆಲ್‌ನ ಹೆಸರು ಲೈಸಿಸ್ಟರ್ ಕುರಿಗಳೊಂದಿಗೆ ಸಮಾವೇಶ ಗೊಂಡಿರುವುದಲ್ಲದೆ ಅಲ್ಲಿಯ ಮನೆಮಾತಾಗಿದೆ. ಈ ರೀತಿ ಹೊಸದಾಗಿ ರೂಪಗೊಂಡ ಪೀಳಿಗೆಯ ಕುರಿಗಳು ಗಿಡ್ಡ ಕಾಲುಗಳು ಮಟ್ಟಸವಾದ ಶರೀರ, ಅಗಲ ಬೆನ್ನಿನ ಮತ್ತು ಬೇಗನೆ ಬೆದೆಗೆ ಬರುವ ಮತ್ತು ಕೊಬ್ಬಿನಿಂದ ಕೂಡಿದ ಕುರಿಗಳಾಗಿದ್ದವು.

ಕ್ರಿ. ಶ. 1790ರಲ್ಲಿ ಬೇಕ್‌ವೆಲ್‌ನು ಕುರಿ ತಳಿ ಅಭಿವೃದ್ಧಿಕಾರ್ಯಕ್ಕಾಗಿ 12 ಜನರಿಂದ ಕೂಡಿದ ಡಿಶ್ಲೆ ಸಹಕಾರ ಸಂಘವನ್ನು ಸ್ಥಾಪಿಸಿದನು. ಈ ಸಂಘದ 5 ನಿಯ-ಮಗಳನ್ನು ಕೆಳಗೆ ಕಾಣಿಸಿದೆ:

I) ಸಹಕಾರ ಸಂಘಕ್ಕೆ ಸೇರಿದ 12 ಸದಸ್ಯರಲ್ಲಿ ಇದ್ದ ಟಗರುಗಳನ್ನು ಮಾತ್ರ ತಳಿವೃದ್ಧಿಕಾರ್ಯಕ್ಕೆ ಉಪಯೋಗಿಸಬೇಕು.

II) ಸದಸ್ಯರಲ್ಲಿರುವ ಟಗರುಗಳನ್ನು ಇತರ ಕುರಿ ಸಂವರ್ಧನೆಗೆ ನೀಡುವಾಗ

III) ಸದಸ್ಯರು ಒಂದು ವರ್ಷದಲ್ಲಿ 30ಕ್ಕಿಂತ ಹೆಚ್ಚು ಟಗರುಗಳನ್ನು ಇತರರಿಗೆ ತಳಿಸಂವರ್ಧನೆಗೆ ಕೊಡಬಾರದು.

IV) ಸಂಘ ಸದಸ್ಯರಿಗಲ್ಲದೆ ಮತ್ತೆ ಬೇರೆಯವರಿಗೆ ಕುರಿಗಳನ್ನಾಗಲಿ ಅಥವಾ ಟಗರುಗಳನ್ನಾಗಲಿ ಮಾರಕೂಡದು. ಇಡೀ ಹಿಂಡನ್ನೇ ಮಾರುವಾಗ ಈ ನಿಯಮವನ್ನು ಪಾಲಿಸಬೇಕಾಗಿಲ್ಲ.

V) ಸದಸ್ಯ ತನ್ನ ಟಗರುಗಳಿಗೆ ಯಾವ ಕಾಲದಲ್ಲಿಯೂ ಹಸಿಹುಲ್ಲು, ತಪ್ಪಲು ಪಲ್ಯ, ತರಕಾರಿ, ಒಣಗಿದ ಹುಲ್ಲು ಅಲ್ಲದೆ ಬೇರೆ ಯಾವ ಮೇವನ್ನೂ ಕೊಡಬಾರದು.

ಮೊದಲು ರೂಪಿಸಿದ ಹೊಸ ಪೀಳಿಗೆಯಲ್ಲಿಯೂ ಸಹ ಕೆಲವು ನ್ಯೂನತೆಗಳು ಉಳಿದುಕೊಂಡೇ ಬಂದವು. ಮುಂದಿನ ತಳಿಶಾಸ್ತ್ರವಿಜ್ಞಾನಿಗಳು ತಮ್ಮ ಸಂಶೋಧನೆಯ ಕ್ರಮಗಳಿಂದ ಈ ದೋಷಗಳನ್ನು ಉತ್ತಮಪಡಿಸಿದ ಕಾರಣ ಇಂದು ಸಾಕಣೆಯಲ್ಲಿರುವ ಉತ್ತಮ ಉದ್ದ ಎಳೆಯ ಉಣ್ಣೆಯ ಜಾತಿಯ ಕುರಿಗಳು ಹೊರಬಂದಿವೆ. ಈ ಹೊಸ ಸಂಗೋಪನಾಪದ್ಧತಿಯನ್ನು ಜಗತ್ತಿನ ಬೇರೆ ಕುರಿಪಾಲಕರೂ ಸಹ ಅನುಕರಿಸತೊಡಗಿದರು. ಈ ಕ್ರಮಗಳಿಂದಾಗಿ ಶ್ರೇಷ್ಠ ಜಾತಿಯ ಕುರಿಗಳ ಸಂವೃದ್ಧಿಯಾಗಲು ಕಾರಣವಾಯಿತು. ರಾಬರ್ಟ್ ಬೇಕ್‌ವೆಲ್‌ನೇ ಆಧುನಿಕ ಉಣ್ಣೆಯ ಕುರಿ ತಳಿಅಭಿವೃದ್ಧಿಯ ಜನಕನೆಂದು ಹೇಳಬಹುದು. ಇವನು ಅನುಸರಿಸಿದ ಪದ್ಧತಿ ಕೇವಲ ಲೈಸಿಸ್ಟರ್ ಜಾತಿಯ ಕುರಿಗಳಿಗೆ ಮಾತ್ರ ಸೀಮಿತಗೊಂಡಿತ್ತು. ಈ ಕುರಿಗಳಲ್ಲಿ ಆಗಿನ ಕಾಲದಲ್ಲಿ ಹೇಳಿಕೊಳ್ಳುವಷ್ಟು ಪ್ರಗತಿ ಕಂಡುಬರದಿದ್ದರೂ ರಾಬರ್ಟ್ ಬೇಕ್‌ವೆಲ್ ಅನುಸರಿಸಿದ ಪದ್ಧತಿ ಬೇರೆ ಕುರುಬರಿಗೆ ಮಾರ್ಗದರ್ಶನವಾಯಿತು. ಇಂದು ಬೇಕ್‌ವೆಲ್‌ನ ಹೆಸರು ಮರೆತುಹೋಗಿದ್ದರೂ ಅವನು ಹಾಕಿಕೊಟ್ಟ ಪಶುಸಂಗೋಪನಾಪದ್ಧತಿಯ ಮಾರ್ಗ ಇಂದಿಗೂ ಸಹ ಎಲ್ಲಕಡೆ ರೂಢಿಯಲ್ಲಿ ಸಾಗಿ ಬಂದಿದೆ. ಅವನು ತೋರಿಸಿಕೊಟ್ಟ ತಳಿ ಅಭಿವೃದ್ಧಿಯ ಮಾರ್ಗಗಳನ್ನು ಕೆಳಗೆ ಕಾಣಿಸಿದೆ :

I) ಒಂದೇ ಜಾತಿಗೆ ಸೇರಿದ ಉತ್ತಮ ಗುಣಗಳಿಂದ ಕೂಡಿದ ಕರುಗಳನ್ನು ಆರಿಸಿ, ಅವುಗಳನ್ನು ಒಂದಕ್ಕೊಂದು ಸಂಯೋಗ ಮಾಡಿಸಿ, ಮುಂದಿನ ಪೀಳಿಗೆಯ ತಳಿ ಉತ್ಪಾದಿಸುವುದು. ಇದು ಆಯ್ದ ತಳಿವೃದ್ಧಿ (ಸಿಲೆಕ್ಟಿವ್ ಬ್ರೀಡಿಂಗ್).

II) ಬೇರೆಬೇರೆ ಎರಡು ಪ್ರತ್ಯೇಕ ಜಾತಿಯ ಕುರಿಗಳ ಸಂಕರಣದಿಂದ (ಅಂದರೆ ಎರಡು ಪ್ರತ್ಯೇಕ ಸ್ಥಿರವಾದ ಜಾತಿಗಳ) ಮಿಶ್ರತಳಿ ಉತ್ಪಾದನೆ ಮಾಡುವುದು. ಇದನ್ನು ಮಿಶ್ರತಳಿ ವೃದ್ಧಿ (ಕ್ರಾಸ್ ಬ್ರೀಡಿಂಗ್) ಎಂದು ಕರೆಯುವರು.

III) ಕಡಮೆ ಉತ್ತಮ ಗುಣಗಳಿರುವ, ಉತ್ತಮ ಉಣ್ಣೆಯ ಗುಣವನ್ನು ಹೊಂದಿರದ ಕುರಿಗಳನ್ನು ಹಿಂಡಿನಿಂದ ತೆಗೆದುಬಿಡುವುದು.

IV) ಪೌಷ್ಟಿಕ ಆಹಾರ ಪೂರೈಕೆ ಸುಧಾರಿಸಿದ ಹುಲ್ಲುಗಾವಲುಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ರೋಗಗಳಿಂದ ಸಂರಕ್ಷಣೆಮಾಡುವುದು. 18ನೇ ಶತಮಾನದಲ್ಲಿ ಯೂರೋಪ್ ದೇಶದ ಪಶುಪಾಲಕರು ಹೆಚ್ಚು ಸಂಖ್ಯೆಯಲ್ಲಿ ಈ ಪದ್ಧತಿಯನ್ನು ಕಾರ್ಯರೂಪಕ್ಕೆ ತಂದರು. ಆದರೆ ಕುರಿಯ ತಳಿಅಭಿವೃದ್ಧಿಯಲ್ಲಿ ಇದರ ಪರಿಣಾಮ 19ನೇ ಶತಮಾನದಲ್ಲಿ ಉಣ್ಣೆ ಮತ್ತು ಮಾಂಸಗಳ ದರ್ಜೆ ಹೆಚ್ಚಳ ಕಂಡುಬರುತ್ತದೆ.

ಲೈಸಿಸ್ಟರ್ ಈ ಕುರಿಗಳು ಆಕಾರದಲ್ಲಿ ಮಧ್ಯಮ ತರಗತಿಯ ಕುರಿಗಳು. ಇವು ಲಿಂಕನ್ ಮತ್ತು ಕಾಟ್ಸ್‌ವೋಲ್ಡ್ ಕುರಿಗಳಿಗಿಂತ ಸಣ್ಣವು. ಇವುಗಳ ತಲೆ ಬೆಣೆಯ ಆಕಾರದಂತಿರುತ್ತದೆ. ಮೂಗು ಉದ್ದವಾಗಿ ನೆಟ್ಟಗೆ ಎದ್ದು ನಿಂತಿರುತ್ತದೆ. ಕಿವಿ ಮತ್ತು ಮುಖ ಉಕ್ಕಿನಂತಹ ನೀಲ ಛಾಯೆ. ಇದು ಬಿಳಿಯ ಕೂದಲುಗಳಿಂದ ತುಂಬಿರುತ್ತದೆ. ಕೆಲವು ಕುರಿಗಳಲ್ಲಿ ಮುಖದಮೇಲೆ ಕಪ್ಪುಮಚ್ಚೆಗಳು ಕಂಡುಬರುತ್ತವೆ. ಮೂಗಿನ ಹೊಳ್ಳೆಗಳು ಕಪ್ಪಾಗಿರುತ್ತವೆ. ಹಣೆಯ ಮೇಲಿನ ಉಣ್ಣೆ ದಟ್ಟವಾಗಿ ಬೆಳೆದಿರುತ್ತದೆ. ಕಿವಿಗಳು ತೆಳು ಮತ್ತು ಉದ್ದ. ಮೈತುಂಬ ದಟ್ಟವಾಗಿ ಉದ್ದವಾದ ಹೊಳಪಿನಿಂದ ಕೂಡಿದ ಉಣ್ಣೆ ಬೆಳೆದಿರುತ್ತದೆ. ಕಸಿಮಾಡಿದ (ಬೀಜತೆಗೆದ) ಟಗರು ಒಂದು ಕತ್ತರಿಗೆ 14ಪೌಂಡು ಮತ್ತು ಕುರಿಗಳು 9ರಿಂದ 10ಪೌಂಡುಗಳವರೆಗೆ ಉಣ್ಣೆಯನ್ನು ಕೊಡುತ್ತವೆ. ಈ ಜಾತಿಯ ಕುರಿಗಳು ವೋಲ್ಡ್ ಮತ್ತು ಡರ್‌ಹ್ಯಾಮ್ ಜಿಲ್ಲೆಗಳಲ್ಲಿ ಹೆಚ್ಚಿನ ಸಾಕಣೆಯಲ್ಲಿವೆ. ಈ ಜಾತಿಯ ಕುರಿಗಳು ನ್ಯೂಜಿಲಂಡ್, ಟಾಸ್ಮೇನಿಯಾ, ಆಸ್ಟ್ರೇಲಿಯಾ ದೇಶದ ಜನಪ್ರಿಯತೆಯನ ಗಳಿಸಿವೆ. ಟಗರು 225 ಪೌಂಡಿನಿಂದ 250 ಪೌಂಡು ತೂಕ ಇರುತ್ತದೆ. ಕುರಿ 17 ರಿಂದ 225 ಪೌಂಡು ತೂಕ ಇರುತ್ತದೆ. ಇವುಗಳ ಉಣ್ಣೆ 40 ಕೌಂಟ್ ನೂಲಿನ ಗು ದಿಂದ ಕೂಡಿರುತ್ತದೆ.

2) ಬಾರ್‌ಡರ್ ಲೈಸಿಸ್ಟರ್ : ಇವು ಇಂಗ್ಲಿಷ್ ಲೈಸಿಸ್ಟರ್ ಮತ ಶೇವಿಯಟ್ ಕುರಿಗಳಿಂದ ಉದ್ಭವಿಸಿದ ಒಂದು ಉಪಶಾಖೆಯ ಕುರಿಗಳು. ಬೇಕ್‌ವೆಲ್ ಶಿಷ್ಯನಾದ ಕಲ್ಲೀಸ್ ಇವುಗಳಲ್ಲಿ ಉತ್ತಮವಾದ ಕುರಿಗಳನ್ನು ಆರಿಸಿ, ಸಂಕರ ಮಾಡಿ ಈ ತಳಿಯ ಕುರಿಗಳನ್ನು ಅಭಿವೃದ್ಧಿಗೊಳಿಸಿದನು. ಇದರ ಪರಿಣಾಮವಾಗಿ ಈ ಬಾ ಡರ್ ಲೈಸಿಸ್ಟರ್ ಕುರಿಗಳು ಹುಟ್ಟಿದವು ಎಂದು ಹೇಳುತ್ತಾರೆ. ಕೊಬ್ಬಿನಿಂದ ಕೂಡಿ ಈ ಕುರಿಗಳು ಬೇಗನೇ ಬೆಳೆದು ಶೀಘ್ರವಾಗಿ ಬೆದೆಗೆ ಬರುತ್ತವೆ. ಕ್ರಿ. ಶ. 186 ರಲ್ಲಿಯೇ ಇದನ್ನು ಶುದ್ಧ ತಳಿ ಉತ್ತಮ ಜಾತಿಯ ಕುರಿಗಳೆಂದು ಪರಿಗಣಿಸಲಾಗಿ ಈ ಜಾತಿ ಕುರಿಗಳ ಕಾಲುಗಳು ಇಂಗ್ಲಿಷ್ ಲೈಸಿಸ್ಟರ್ ಕುರಿಗಳಿಗಿಂತ ಉದ್ದವಾ

ಮತ್ತು ತೆಳುವಾಗಿರುತ್ತವೆ. ಮುಖ ಮತ್ತು ಕಾಲುಗಳು ಬಿಳುಪಾಗಿರುತ್ತವೆ. ತಲೆಯ ಮೇಲೆ ಉಣ್ಣೆ ಬೆಳೆದಿರುವುದಿಲ್ಲ. ಮೂಗು ಉದ್ದ, ತುದಿ ಚೂಪು, ಗಿಳಿಯ ಮೂಗಿನಂತಿರುತ್ತದೆ. ಕುತ್ತಿಗೆ ಉದ್ದವಾಗಿರುತ್ತದೆ. ತಲೆ ಮೇಲಕ್ಕೆ ಹೆಡೆಯಂತೆ ಎತ್ತಿಕೊಂಡಿರುತ್ತದೆ. ಕಿವಿಗಳು ಸಹ ಮೇಲಕ್ಕೆ ನೆಟ್ಟಗೆ ಎದ್ದುನಿಂತಿರುತ್ತವೆ. ಇದರ ಉಣ್ಣೆ ಗುಣ, ಇಂಗ್ಲಿಷ್ ಲೈಸಿಸ್ಟರ್ ಕುರಿಗಳ ಉಣ್ಣೆಗೆ ಸಮನಾಗಿರುತ್ತದೆ. ಇವುಗಳ ತಲೆ ಬಹಳ ಸಣ್ಣ ಗಾತ್ರದವುಗಳಾಗಿರುವುದರಿಂದ ಇವುಗಳನ್ನು ಪರ್ವತಪ್ರದೇಶಗಳಲ್ಲಿ ಸಣ್ಣ ಹುಟ್ಟಿನ ಕುರಿಗಳನ್ನು ಕಟ್ಟಿಸಲು ಹೆಚ್ಚಾಗಿ ಉಪಯೋಗಿಸುತ್ತಾರೆ. ಏಕೆಂದರೆ ದೊಡ್ಡದಾದ ಮತ್ತು ದಪ್ಪವಾದ ತಲೆಯ ಟಗರನ್ನು ಈ ಕೆಲಸಕ್ಕೆ ಉಪಯೋಗಿಸಿದಲ್ಲಿ ಪರ್ವತಸೀಮೆಯ ಸಣ್ಣಹುಟ್ಟಿನ ಕುರಿಗಳಿಗೆ ಮುಂದೆ ಮರಿಹಾಕುವ ಕಾಲಕ್ಕೆ ಬಹಳ ತೊಂದರೆಯಾಗುತ್ತದೆ. ಕಾರಣ ಈ ಸಣ್ಣ ತಲೆಯ ಬಾರ್‌ಡರ್ ಲೈಸಿಸ್ಟರ್ ಟಗರುಗಳನ್ನು ಹೆಚ್ಚಾಗಿ ಪರ್ವತ ಸೀಮೆಯ ಕುರಿಗಳಾದ ಶೇವಿಯಟ್ ಅಥವಾ ಕಪ್ಪುಮುಖದ ಕುರಿಗಳನ್ನು ಕಟ್ಟಿಸಲು ಸಾಕುತ್ತಾರೆ. ಈ ಕುರಿಗಳ ಮುಖ್ಯ ಸಂವರ್ಧನಾ ಕೇಂದ್ರಗಳು ಸ್ಕಾಟ್‌ಲಂಡಿನ ನಾರ್‌ದಂಬರ್‌ಲಂಡ್ ಮತ್ತು ಸೌತ್‌ಈಸ್ಟರ್‌ನಲ್ಲಿವೆ. ಈ ಕುರಿಗಳನ್ನು ಆಸ್ಟ್ರೇಲಿಯಾ ಮತ್ತು ನ್ಯೂಜಿಲಂಡ್‌ಗಳಲ್ಲಿ ಕುರಿಪಾಲಕರು ಹೆಚ್ಚಾಗಿ ಇಚ್ಛಿಸುತ್ತಾರೆ. ಈ ತಳಿಯ ಕುರಿ 200 ರಿಂದ 240 ಪೌಂಡು, ಟಗರು 350 ರಿಂದ 400 ಪೌಂಡು ತೂಕವಿರುತ್ತವೆ. ಕುರಿ 8 ರಿಂದ 12 ಪೌಂಡು, ಟಗರು 12 ರಿಂದ 20 ಪೌಂಡು ಉಣ್ಣೆಯನ್ನು ಕೊಡುತ್ತವೆ.

3) **ಲಿಂಕನ್** : ಇಂಗ್ಲಂಡಿನಲ್ಲಿರುವ ಲಿಂಕನ್‌ಶೈರ್ ಪ್ರದೇಶದಲ್ಲಿ ಈ ಜಾತಿಯ ಕುರಿಗಳು ಹೆಚ್ಚಿನ ಸಾಕಣೆಯಲ್ಲಿವೆ. ಈ ತಳಿ ಬಹಳ ಹಿಂದಿನ ಕಾಲದ ಕುರಿಗಳು. ಲಿಂಕನ್ ಜಾತಿಯ ಕುರಿಗಳು ಇಂಗ್ಲಂಡಿನ ಬ್ರಿಟಿಷ್ ಕುರಿಗಳಲ್ಲಿಯೇ ದೊಡ್ಡಹುಟ್ಟಿನ ಗಾತ್ರದ ಮತ್ತು ಭಾರವಾದ ಕುರಿಗಳು. ಇವು ತಡವಾಗಿ ಬೆದೆಗೆ ಬರುತ್ತವೆ. ಲಿಂಕನ್ ಜಾತಿ ಕುರಿಯು ಉತ್ತಮ ದರ್ಜೆಯ ಮಾಂಸವನ್ನು ಕೊಡುವುದಿಲ್ಲ. ಇವುಗಳ ತುಪ್ಪಟವು ಉದ್ದ ಮತ್ತು ದಟ್ಟವಾಗಿ ಬೆಳೆದುಕೊಂಡಿರುವ ಉಣ್ಣೆಯಿಂದ ಇದರ ಮೈ ತುಂಬಿಕೊಂಡಿರುತ್ತದೆ. ಈ ಜಾತಿಯ ಟಗರು 300 ರಿಂದ 400 ಪೌಂಡು ತೂಕ ಇರುತ್ತವೆ. ಇವುಗಳ ಮುಖ ಮತ್ತು ಕಿವಿಗಳು ಬಿಳಿಯ ಬಣ್ಣ. ಹಣೆಯ ಮೇಲೆ ಉದ್ದ ಮತ್ತು ದಪ್ಪವಾದ ಗೊಂಡೆ ಆಕಾರದ ಉಣ್ಣೆ ಬೆಳೆದುಕೊಂಡಿರುತ್ತದೆ. ಇದರ ಮೈಮೇಲಿನ ಉಣ್ಣೆ 20 ಅಂಗುಲ ಉದ್ದವಿರುತ್ತದೆ. ಈ ಕುರಿಗಳ ಉಣ್ಣೆ ಎಳೆಗಳು ಲೈಸಿಸ್ಟರ್ ಕುರಿ ಉಣ್ಣೆ ಎಳೆಗಳಿಗಿಂತ ಗಟ್ಟಿಯಾಗಿರುತ್ತದೆ. ಇವುಗಳ ಉಣ್ಣೆ 44ರಿಂದ 36 ಕೌಂಟ್ಸ್ ನೇಗೆಯ ಗುಣವನ್ನು ಪಡೆದಿದೆ. ಈ ಜಾತಿಯ ಒಂದು ಟಗರು 42 ಪೌಂಡು ಉಣ್ಣೆಯನ್ನು ಕೊಟ್ಟು ಜಗತ್ತಿನಲ್ಲಿಯ ಕುರಿಗಳಲ್ಲೆಲ್ಲ ಅತಿ ಹೆಚ್ಚಿನ ತೂಕದ ಉಣ್ಣೆಯನ್ನು ಕೊಟ್ಟಿರುವ ದಾಖಲೆ ಸ್ಥಾಪಿಸಿದೆ. ಒಂದು ವರ್ಷ ವಯಸ್ಸಿನ ಲಿಂಕನ್ ಜಾತಿಯ

ಟಗರು 32 ಪೌಂಡು ಉಣ್ಣೆಯನ್ನು ಕೊಟ್ಟು ಜಗತ್ತಿನಲ್ಲಿ ತನ್ನ ವಿಕ್ರಮವನ್ನು ಸ್ಥಾಪಿಸಿದೆ. ಸಾಮಾನ್ಯವಾಗಿ ಟಗರುಗಳು 20 ರಿಂದ 30 ಪೌಂಡಿನಷ್ಟು ಮತ್ತು ಕುರಿಗಳು 12 ರಿಂದ 16 ಪೌಂಡುಗಳವರೆಗೆ ಉಣ್ಣೆಯನ್ನು ಕೊಡುತ್ತವೆ. ಈ ಕುರಿಗಳಿಗೆ ಮೇಯಲು ಹುಲುಸಾದ ಹುಲ್ಲನ್ನು ಒದಗಿಸಲು ಫಲವತ್ತಾದ ಹುಲ್ಲುಗಾವಲುಗಳು ಬೇಕು. ಇವುಗಳಿಗೆ ಬೇರೆ ಕುರಿಗಳಿಗಿಂತ ಹೆಚ್ಚು ಆಹಾರ ಬೇಕು. ಮೆರಿನೋ ಜಾತಿಯ ಕುರಿಗಳೊಂದಿಗೆ ಸಂಕರಮಾಡಿಸಿ ಉತ್ತಮ ಮಿಶ್ರತಳಿ ಕುರಿಗಳ ವೃದ್ಧಿಮಾಡಲು ಇವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಲಿಂಕನ್‌ಶೈರ್ ಮತ್ತು ಯಾರ್ಕ್‌ಶೈರ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚಾಗಿ ಈ ಜಾತಿಯ ಸಾಕಣೆಯಿದೆ. ಈ ಸಂವರ್ಧನೆಯ ಪರಿಣಾಮವಾಗಿ ಕಾರಿಡೇಲ್ ಮತ್ತು ಪೋಲ್‌ವರ್ತ್ ಕುರಿಗಳು ಉದ್ಭವಿಸಿವೆ. ಲಿಂಕನ್ ಕುರಿಗಳು ಶೀಘ್ರ ಬೆಳೆದು ಹೆಚ್ಚು ತೂಕದ ಗಾತ್ರಕ್ಕೆ ಬರುತ್ತವೆ ಎಂಬುದನ್ನು ಶರೀರ ಬೆಳವಣಿಗೆ ಸ್ಮಿತ್‌ಫೀಲ್ಡ್ ಕ್ಲಬ್ಬಿನ ಈ ಕೆಳಗಿನ ಅಂಕಿಸಂಖ್ಯೆಗಳನ್ನು ಉಲ್ಲೇಖಿಸಬಹುದು.

ವರ್ಷ	ವಿವರ	ಒಟ್ಟು ತೂಕ (ಪೌಂಡುಗಳಲ್ಲಿ)	ಒಂದು ಕುರಿಯ ಸರಾಸರಿ ತೂಕ (ಪೌಂಡುಗಳಲ್ಲಿ)
1887	3ವರ್ಷದ 3ಲಿಂಕನ್ ಕುರಿಗಳು	1188	396
1906	22 ತಿಂಗಳು ಕಸಿಮಾಡಿದ 3ಲಿಂಕನ್ ಟಗರು	1142	380
1910	$9\frac{3}{4}$ ತಿಂಗಳ 3ಲಿಂಕನ್ ಮರಿಗಳು	752	250

4) ಕಾಟ್ಸ್‌ವೋಲ್ಡ್ : ಗುಡ್ಡಗಾಡು ಪ್ರದೇಶಗಳಾದ ಆಕ್ಸ್‌ಫರ್ಡ್‌ಶೈರ್, ಗ್ಲೌಸಿಸ್ಟರ್‌ಶೈರ್‌ನ ಸುತ್ತಮುತ್ತಲಿನ ಪ್ರದೇಶಗಳೇ ಈ ಜಾತಿಯ ಕುರಿಗಳ ಸಾಮಾನ್ಯ ಮೂಲಸ್ಥಾನ. ಇಲ್ಲಿ ಬಹಳ ಪ್ರಾಚೀನ ಕಾಲದಿಂದ ಈ ಜಾತಿ ಬಾಳಿ ಬೆಳೆದುಕೊಂಡು ಬಂದಿವೆ. 18ನೇ ಶತಮಾನದ ಕೊನೆಯಲ್ಲಿ ಮತ್ತು 19ನೇ ಶತಮಾನದ ಪ್ರಾರಂಭ ಕಾಲಕ್ಕೆ ಈ ಕುರಿಗಳನ್ನು ಇಂಗ್ಲಿಷ್ ಲೈಸಿಸ್ಟರ್ ಟಗರುಗಳೊಂದಿಗೆ ಸಂವರ್ಧನೆಮಾಡಿ ತಳಿ ಅಭಿವೃದ್ಧಿಗೊಳಿಸಲಾಯಿತು. ಇದರಿಂದ ಈ ಕುರಿಗಳಲ್ಲಿ ಹೆಚ್ಚಿನ ಸುಧಾರಣೆಯಾಯಿತು.

ಕಾಟ್ಸ್‌ವೋಲ್ಡ್ ಕುರಿಗಳು ಲಿಂಕನ್ ಕುರಿಗಳಂತೆ ಎತ್ತರ ನಿಲುವಿನ ಕುರಿಗಳು. ಆದರೆ ಇವುಗಳು ಲಿಂಕನ್ ಕುರಿಗಳಷ್ಟು ಗಾತ್ರದವಲ್ಲ. ಕುತ್ತಿಗೆ ಉದ್ದ, ತಲೆ ಮೇಲಕ್ಕೆ ಎದ್ದುನಿಂತಿರುವಂತೆ ಕಾಣುತ್ತದೆ. ಮುಖದ ಬಣ್ಣ ಬಿಳುಪು, ಮೂಗು ಸಣ್ಣ,

ಮೂಗಿನಹೊಳ್ಳೆಗಳು ಕಪ್ಪಾಗಿರುತ್ತವೆ. ಉಣ್ಣೆ ಉದ್ದ, ವಿರಳವಾಗಿ ಮತ್ತು ಒರಟಾಗಿ ಬೆಳೆದಿರುತ್ತದೆ. ಒಂದು ಕುರಿಯು 10 ಪೌಂಡಿನಷ್ಟು ಉಣ್ಣೆಯನ್ನು ಕೊಡುತ್ತದೆ. ಇವು ಗುಡ್ಡಗಾಡಿನ ಪ್ರದೇಶಗಳಲ್ಲಿಯ ಕುರಿಗಳಾದುದರಿಂದ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಸ್ವಾಭಾವಿಕವಾಗಿ ಕಷ್ಟಸಹಿಷ್ಣತೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆದಿರುತ್ತವೆ. ಇವು ಬಹಳ ಚುರುಕಾದ ಚಪಲ ಪ್ರಾಣಿ. ಉತ್ತರ ಅಮೇರಿಕಾದಲ್ಲಿ ಈ ಜಾತಿಯ ಕುರಿಗಳನ್ನು ಅಲ್ಲಿಯ ಮೆರಿನೋ ಜಾತಿಯ ಕುರಿಗಳೊಂದಿಗೆ ಸಂಭೋಗ ಮಾಡಿಸಿ ಜಾತಿ ಅಭಿವೃದ್ಧಿಪಡಿಸಲು ಉಪಯೋಗಿಸುತ್ತಾರೆ. ಟಗರುಗಳು 300 ಪೌಂಡು ತೂಕವಿರುತ್ತವೆ.

5) **ಸೌತ್ ದೇವನ್ :** ದೇವನ್ ಪ್ರದೇಶದ ದಕ್ಷಿಣ ಭಾಗ ಮತ್ತು ಕಾರನ್ ವಾಲ್ ಪ್ರದೇಶಗಳು ಈ ಕುರಿಗಳ ಮುಖ್ಯ ಮೂಲಸ್ಥಾನ. ಈ ಜಾತಿಯ ಕುರಿಗಳು ಗಾತ್ರದಲ್ಲಿ ದೊಡ್ಡವು ಮತ್ತು ಸಡಿಲವಾದ ಮೈಕಟ್ಟಿನಿಂದ ಕೂಡಿರುತ್ತವೆ. ಎಲುಬುಗಳು ಬಹಳ ಗಟ್ಟಿ ಮತ್ತು ದಪ್ಪನಾಗಿರುತ್ತವೆ. ಮೈಮೇಲೆ ದಟ್ಟವಾದ ಉಣ್ಣೆಯು ಬೆಳೆದಿರುತ್ತದೆ. ಇವು ಬಹಳ ದೃಢವಾದ ಜಾತಿಯ ಕುರಿಗಳು. ಉಣ್ಣೆಯ ಉತ್ಪಾದನೆಯಲ್ಲಿ ಇವು ಸ್ವಲ್ಪ ಹೆಚ್ಚು ಕಡಮೆ ಲಿಂಕನ್ ಜಾತಿಯ ಕುರಿಗಳನ್ನು ಹೋಲುತ್ತವೆ. ಆದರೆ ಸೌತ್‌ದೇವನ್ ಉಣ್ಣೆಯು ಲಿಂಕನ್ ಜಾತಿಕುರಿಗಳ ಉಣ್ಣೆಯಷ್ಟು ಶ್ರೇಷ್ಠ ದರ್ಜೆಯದಲ್ಲ. ಈ ಜಾತಿ ಮರಿಗಳು ಬೇಗನೆ ಬೆಳೆಗೆ ಬರುತ್ತವೆ. ಈ ಜಾತಿ ಕುರಿಮರಿಗಳ ಮಾಂಸ ಶ್ರೇಷ್ಠ ದರ್ಜೆಯದು ಎಂದು ಹೆಸರುಗೊಂಡಿದೆ. ಸೌತ್‌ದೇವನ್ ಜಾತಿಯ ಕುರಿಗಳನ್ನು ಉಣ್ಣೆಯ ಆಧಾರದ ಮೇಲೆ ಕೆಳಕಂಡಂತೆ ಎರಡು ವಿಧವಾಗಿ ವಿಂಗಡಿಸಿದೆ :

I) **ನೀಳ ಉಣ್ಣೆಯ ಕುರಿಗಳು :** ಇವು ದೇವನ್ ಮತ್ತು ಸಾಮರ್‌ಸೆಟ್ ಭಾಗಗಳಲ್ಲಿ ಹೆಚ್ಚು ಸಾಕಣೆಯಲ್ಲಿರುವ ಕುರಿಗಳು. ಇವುಗಳ ಮರಿಗಳು ಬಹಳ ಶೀಘ್ರವಾಗಿ ಬೆಳೆಯುತ್ತವೆ. ಈ ಜಾತಿಯ ಕುರಿಯಲ್ಲಿ ತುಪ್ಪಟ ಹೆಚ್ಚು ದಟ್ಟವಾಗಿ ಬೆಳೆದಿರುತ್ತದೆ.

II) **ದಟ್ಟ ಉಣ್ಣೆಯ ಕುರಿಗಳು :** ಇವು ದೇವನ್ ಉದ್ದಉಣ್ಣೆಯ ಮತ್ತು ಎಕ್ಸ್‌ಮೂರ್, ಹಾರ್ನ್ ಜಾತಿಯ ಕುರಿಗಳ ಮಿಶ್ರಣದಿಂದ ಹುಟ್ಟಿದ ಮಿಶ್ರ ತಳಿಯ ಕುರಿಗಳು.

6) **ವೆನ್ಸ್‌ಲೇಡೇಲ್ :** ಈ ಕುರಿಗಳ ಉಣ್ಣೆ ಉದ್ದವಾಗಿ, ನಯವಾಗಿ, ಮೃದುವಾಗಿ ಮತ್ತು ಬಹಳ ಹೊಳಪಾಗಿರುತ್ತದೆ. ಇವು ಬಹಳ ಶುದ್ಧ, ಶುಭ್ರ ಉಣ್ಣೆಯನ್ನು ಕೊಡುತ್ತವೆ. ಇವು ಬಹಳ ಚುರುಕಾದ ಮತ್ತು ಕಷ್ಟಸಹಿಷ್ಣತೆಯ

ಪ್ರಾಣಿಗಳು. ಉದ್ದ ಉಣ್ಣೆ ಜಾತಿಯ ಎಲ್ಲ ಕುರಿಗಳಿಗಿಂತ ಇವುಗಳ ಮಾಂಸ ಉತ್ತಮ ಗುಣವುಳ್ಳದ್ದಾಗಿರುತ್ತದೆ. ಯಾರ್ಕ್‌ಶೈರ್, ಉತ್ತರ ಇಂಗ್ಲಂಡ್ ಮತ್ತು ಸ್ಕಾಟ್ಲೆಂಡಿನ ನೈರುತ್ಯ ಪ್ರದೇಶಗಳು ಈ ಜಾತಿಯ ಕುರಿಗಳ ಮೂಲಸ್ಥಾನ. ಈ ಜಾತಿಯ ಟಗರುಗಳನ್ನು ಹೆಚ್ಚಾಗಿ ಕಪ್ಪುಮುಖದಿಂದ ಕೂಡಿದ ಪರ್ವತ ಕುರಿಗಳೊಂದಿಗೆ ಸಂವರ್ಧನೆಗಾಗಿ ಉಪಯೋಗಿಸುತ್ತಾರೆ. ಇವೆರಡರ ಸಂಭೋಗದಿಂದ ಹುಟ್ಟಿದ ಪರ್ವತ ಮಿಶ್ರತಳಿ ಕುರಿಗಳನ್ನು ಯಾರ್ಕ್‌ಶೈರ್‌ನಲ್ಲಿ 'ಮಶ್‌ಹಾಮ್ ಕುರಿ'ಗಳೆಂದೂ ಸ್ಕಾಟ್ಲೆಂಡಿನಲ್ಲಿ 'ಯಾರ್ಕ್‌ಶೈರ್ ಮಿಶ್ರತಳಿ ಕುರಿ'ಗಳೆಂದು ಕರೆಯುತ್ತಾರೆ. ಈ ಜಾತಿಯ ಟಗರುಗಳನ್ನು ಹಾರ್ಡ್‌ವಿಕ್ ಕುರಿಗಳನ್ನು ಕಟ್ಟಿಸಲು ಉಪಯೋಗಿಸುತ್ತಾರೆ. ಈ ಕುರಿಗಳ ಉಣ್ಣೆಯ ಎಳೆಗಳ ಗುಣ 46-46.5 ಕೌಂಟ್ಸು ಇರುತ್ತದೆ. ಇವು ಮಧ್ಯಮ ಗಾತ್ರದ ಮತ್ತು ಬೇಗನೆ ಬೆದೆಗೆ ಬರುವ ಜಾತಿಯ ಕುರಿಗಳು. ಹೆಣ್ಣು ಕುರಿಗಳು ಇತರ ಜಾತಿಗಳಿಗಿಂತ ಹೆಚ್ಚು ಹಾಲನ್ನು ಕೊಡುತ್ತವೆ.

7) **ಕೆಂಟ್ ಅಥವಾ ರೋಮ್ನಿಮಾರ್ಶ** : ಇವು ಉದ್ದ ಉಣ್ಣೆಯ ಗುಂಪಿಗೆ ಸೇರಿದ ಕುರಿಗಳಲ್ಲೆಲ್ಲ ಅತ್ಯಂತ ಸಣ್ಣ ಗಾತ್ರದ ಮತ್ತು ನಿಖರವಾದ ಆಕಾರವಿಲ್ಲದ ಕುರಿಗಳು. ಇವುಗಳ ಎತ್ತರಕ್ಕಿಂತ ಉದ್ದ ಹೆಚ್ಚು, ಬೀಸಾಗಿ ಬೆಳೆದಿರುತ್ತವೆ. ಕಾಲುಗಳು ಗಿಡ್ಡಾಗಿರುತ್ತವೆ. ಉತ್ತಮ ದರ್ಜೆ ದಟ್ಟವಾಗಿ ಒಂದೇ ಸಮನಾಗಿರುತ್ತದೆ. ಆದರೆ ಉದ್ದದಲ್ಲಿ ಉಣ್ಣೆ ಕಡಮೆಯಾಗಿರುತ್ತದೆ, ಹೊಳಪಾಗಿರುವುದಿಲ್ಲ. ಈ ಕುರಿಗಳು ಬಹಳ ವರ್ಷಗಳಿಂದ ರೋಮ್ನಿಮಾರ್ಶದ ಜೌಗು ಪ್ರದೇಶದಲ್ಲಿಯೇ ಹುಟ್ಟಿ ಬೆಳೆದು ಜೀವಿಸುತ್ತಿರುವುದರಿಂದ ಸ್ವಾಭಾವಿಕವಾಗಿ ಅಲ್ಲಿಯ ಪರಿಸರಕ್ಕೆ ಮತ್ತು ವಾತಾವರಣಕ್ಕೆ ಹೊಂದಿಕೊಂಡಿವೆ. ಹೀಗಾಗಿ ಇವು ಆರ್ದ್ರ ಮತ್ತು ಜವುಳು (ಜೌಗು) ಪ್ರದೇಶಗಳಲ್ಲಿ ಸಹ ಚೆನ್ನಾಗಿ ಬೆಳೆಯುತ್ತವೆ. ಈ ಜಾತಿಯ ಕುರಿಗಳು ಬೇರೆ ದೇಶಗಳ ವಿವಿಧ ಪರಿಸ್ಥಿತಿಗೆ ಮತ್ತು ಹುಲ್ಲುಗಾವಲುಗಳಿಗೆ ಹೊಂದಿಕೊಂಡು ಚೆನ್ನಾಗಿ ಬೆಳೆಯುತ್ತವೆ. ಮೆರಿನೋ ಕುರಿಗಳು ಉತ್ತಮ ಉಣ್ಣೆಗೆ ಪ್ರಸಿದ್ಧಿಯಾಗಿರುವಂತೆ, ರೋಮ್ನಿಮಾರ್ಶ ಜಾತಿಕುರಿಗಳು ಉದ್ದ ಉಣ್ಣೆಗೆ ಹೆಸರುವಾಸಿಯಾಗಿವೆ. ಇವು ಕಾಲುಬೇನೆ ಮತ್ತು ಕಾರಲು ರೋಗ, ಲೀವರ್‌ಫ್ಲೇಕ್ ಮತ್ತು ಜಠರದ ಜಂತುಗಳ ರೋಗಗಳಿಗೆ ಬೇಗನೆ ತುತ್ತಾಗುವುದಿಲ್ಲ. ಅವುಗಳನ್ನು ತಡೆಯುವ ಪ್ರತಿಬಂಧಕ ಶಕ್ತಿಯನ್ನು ಪಡೆದಿರುತ್ತವೆ. ಇಂದು ನ್ಯೂಜಿಲಂಡಿನ ಪರ್ವತ ಪ್ರದೇಶಗಳಲ್ಲಿ ರೋಮ್ನಿಮಾರ್ಶ ಹೆಚ್ಚಿನ ಸಾಕಣೆಯಲ್ಲಿರುವ ಪ್ರಧಾನವಾದ ಜಾತಿಯ ಕುರಿಗಳು. ನ್ಯೂಜಿಲಂಡ್ ದೇಶದ ಕುರುಬರು ಇವುಗಳನ್ನು ಬಹುವಾಗಿ ಪ್ರೀತಿಸುತ್ತಾರೆ ಮತ್ತು ಅಲ್ಲಿಯ ಮೆರಿನೋ ಜಾತಿಯ ಕುರಿಗಳನ್ನು ಇವುಗಳೊಂದಿಗೆ ಜೊತೆಗೂಡಿಸಿ ಮಿಶ್ರತಳಿಕುರಿಗಳ ಉತ್ಪಾದನೆ ಮಾಡುತ್ತಾರೆ.

8) ರಾಸ್‌ಕಾಮನ್: ಐರ್ಲ್ಯಂಡ್ ದೇಶದ ಮೂಲವಾಸಿ ಕುರಿ ಎಂದರೆ ರಾಸ್‌ಕಾಮನ್. ಇವು ದೇಹರಚನೆಯಲ್ಲಿ ಉದ್ದವಾಗಿಯೂ ಮತ್ತು ಸಣ್ಣ ನೀಳ ಕಾಲುಗಳಿಂದಲೂ ಕೂಡಿರುತ್ತವೆ. ಇವು ಉತ್ತಮ ಮಾಂಸಕ್ಕೆ ಹೆಸರಾದ ಕುರಿಗಳು. ರಾಸ್‌ಕಾಮನ್ ಜಾತಿ ಕುರಿಗಳು ಬಹಳ ನಿಧಾನವಾಗಿ ಬೆದೆಗೆ ಬರುತ್ತವೆ. ತುಪ್ಪಟದ ಉದ್ದ ಕಡಮೆಯಾಗಿದ್ದರೂ, ಸಹ ಬಹಳ ದಟ್ಟವಾಗಿ ಬೆಳೆದಿರುತ್ತವೆ. ಈ ಜಾತಿ ಕುರಿಯ ಉಣ್ಣೆ ಉತ್ತಮ ದರ್ಜೆಯದು.

ಗಿಡ್ಡ ಉಣ್ಣೆ ಜಾತಿಯ ಕುರಿಗಳು: ಈ ಜಾತಿಯ ಕುರಿಗಳ ಗಾತ್ರ ಮತ್ತು ಶರೀರಮಾನದಿಂದ ಉದ್ದ ಉಣ್ಣೆ ಜಾತಿಯ ಕುರಿಗಳಿಗಿಂತ ಸಣ್ಣವು. ಮೈಕಟ್ಟಿನಲ್ಲಿ ಇವು ಉದ್ದ ಉಣ್ಣೆಯ ಗುಂಪಿಗೆ ಸೇರಿದ ಕುರಿಗಳಿಗಿಂತ ಹೆಚ್ಚು ಅಚ್ಚು ಕಟ್ಟಾಗಿರುತ್ತವೆ. ಇವುಗಳ ಮುಖ ಮತ್ತು ಕಾಲುಗಳು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಕೊಂಬುಗಳಿರುವುದಿಲ್ಲ. ಶರೀರದ ಮೇಲೆ ಗಿಡ್ಡಾದ ಎಳೆಗಳಿಂದ ಕೂಡಿದ ತುಪ್ಪಟ ದಟ್ಟವಾಗಿ ಬೆಳೆದಿರುತ್ತದೆ. ಗುಣದಲ್ಲಿ ಮತ್ತು ನೇಯ್ಗೆ ರಚನೆಯಲ್ಲಿ ಉದ್ದ ಉಣ್ಣೆಯ ಕುರಿಗಳಿಗಿಂತ ಇವುಗಳ ಉಣ್ಣೆ ಕಡಮೆ ದರ್ಜೆಯದಾಗಿರುತ್ತದೆ. ಇವುಗಳ ಉಣ್ಣೆಯ ತಂತಗಳು (ಎಳೆಗಳು) ಗಿಡ್ಡಾಗಿರುತ್ತವೆ ಮತ್ತು ನಯವಾಗಿರುತ್ತವೆ. ವ್ಯಾಸ 0.25 ರಿಂದ 0.30 ಮಿ. ಮೀ.ವರೆಗೂ ಇರುತ್ತದೆ. ಉಣ್ಣೆ ತಿಳಿ ಹಳದಿಬಣ್ಣದ ಛಾಯೆಯಿಂದ ಕೂಡಿರುತ್ತದೆ. ಕೆಲವು ಕುರಿಗಳಲ್ಲಿನ ತುಪ್ಪಟ ಕಪ್ಪುಮಿಶ್ರಿತವಾದ ಕಂದುಬಣ್ಣ ಸಹ ಆಗಿರಬಹುದು. ಇವುಗಳ ಬೆನ್ನಿನ ಭಾಗ ಉದ್ದ ಉಣ್ಣೆಯ ಕುರಿಗಳಷ್ಟು ಅಗಲವಾಗಿರುವುದಿಲ್ಲ. ಆದರೆ ಹಿಂಭಾಗ (ಸೊಂಟದ ಭಾಗ) ಚಪ್ಪೆಗಳ ಭಾಗ ಮತ್ತು ತೊಡೆಗಳು ದಪ್ಪ ಮತ್ತು ಉದ್ದವಾಗಿ ರಸವತ್ತಾದ ಮಾಂಸಖಂಡಗಳಿಂದ ತುಂಬಿಕೊಂಡಿರುತ್ತವೆ. ಇವುಗಳ ಮಾಂಸ ರುಚಿಕರ ಮತ್ತು ಸುವಾಸನೆಯಿಂದ ಕೂಡಿರುತ್ತದೆ. ಉದ್ದ ಉಣ್ಣೆಯ ಜಾತಿಯ ಕುರಿಗಳಂತೆ ಇದರ ಮಾಂಸ ಹೆಚ್ಚು ಕೊಬ್ಬಿನಿಂದ ಕೂಡಿರುವುದಿಲ್ಲ. ಈ ಗುಂಪಿನಲ್ಲಿ— 1) ಸೌತ್‌ಡೌನ್ 2) ಸಫೋಕ್ 3) ಹ್ಯಾಂಪ್‌ಶೈರ್ 4) ಡಾರ್‌ಸೆಟ್‌ಡೌನ್ ಮತ್ತು 5) ಶಾರ್ಪ್‌ಶೈರ್ ಎಂಬ ಐದು ಜಾತಿಗಳ ಕುರಿಗಳು ಮುಖ್ಯವಾದವು.

1) ಸೌತ್‌ಡೌನ್ ಕುರಿಗಳು : ಕೆಂಟ್, ಸಸೆಕ್ಸ್, ಹ್ಯಾಂಪ್‌ಶೈರ್ ಮತ್ತು ಡಾರ್‌ಸೆಟ್‌ಶೈರ್‌ದಲ್ಲಿಯ ಬೆಟ್ಟಪ್ರದೇಶಗಳೇ ಈ ಕುರಿಗಳ ಮೂಲಸ್ಥಾನ. ಈ ಪ್ರದೇಶಗಳು ಶುಷ್ಕವಾಗಿದ್ದು ಅಲ್ಲಿಯ ಹುಲ್ಲುಗಾವಲುಗಳು ಸಣ್ಣದಾದ, ರಸಭರಿತವಾದ, ದಟ್ಟವಾಗಿ ಬೆಳೆದಿರುವ ಚಿಗುರು ಹುಲ್ಲಿನಿಂದ ನೋಡಲು ಹಸುರು ಹಾಸಿಗೆ ಹಾಸಿದಂತೆ ಕಂಗೊಳಿಸುತ್ತವೆ. ಈ ಹುಲ್ಲುಗಾವಲುಗಳು ಸೌತ್‌ಡೌನ್ ಜಾತಿಯ ಕುರಿಗಳಿಗೆ ಮೇಯಲು ಅನುಕೂಲಕರವಾಗಿವೆ. ಉದ್ದ ಉಣ್ಣೆಯ ಕುರಿಗಳ ಗುಂಪಿನಲ್ಲಿ ಇಂಗ್ಲೀಷ್ ಲೈಸಿಸ್ಟರ್ ಕುರಿಗಳು ಪ್ರಥಮ ಸ್ಥಾನ ಗಳಿಸಿರುವಂತೆ ಈ ಸೌತ್‌ಡೌನ್ ಕುರಿಗಳು ಡೌನ್

ಜಾತಿಯ ಕುರಿಗಳ ಗುಂಪಿನಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿವೆ. ಸೌತ್‌ಡೌನ್ ಕುರಿಗಳು ಈ ಗುಂಪಿನಲ್ಲಿನ ಬಹಳ ಪ್ರಾಚೀನ ಕುರಿಗಳು. ಈ ಕುರಿಗಳ ತಳಿಅಭಿವೃದ್ಧಿಯ ಶ್ರೇಯಸ್ಸು ಬಹುಮಟ್ಟಿಗೆ ಸಸೆಕ್ಸಿನ ಗ್ಲೈಸೆಡ್ ಎಂಬ ಸ್ಥಳದ ಜಾನ್ ಎಲ್‌ಮಾನ್ ಎಂಬುವರಿಗೆ ಸಲ್ಲುತ್ತದೆ. ಗ್ರೇಟ್ ಬ್ರಿಟನ್ನಿನಲ್ಲಿಯ ಬೇರೆ ಕುರಿಗಳ ಉತ್ಪಾದನೆ ಮತ್ತು ಅಭಿವೃದ್ಧಿಯ ಕಾರ್ಯಗಳಲ್ಲಿ ಸೌತ್‌ಡೌನ್ ಕುರಿಗಳು ಬಹಳ ಮಹತ್ವದ ಪಾತ್ರ ವನ್ನು ವಹಿಸಿರುತ್ತವೆ. ಗ್ರೇಟ್ ಬ್ರಿಟನ್ನಿನಲ್ಲಿ ಇದರ ಉಣ್ಣೆ ಅತಿ ಶ್ರೇಷ್ಠವಾದ ಉತ್ತಮ ದರ್ಜೆ ಉಣ್ಣೆಯೆಂದು ಹೆಸರುವಾಸಿಯಾಗಿವೆ. ಈ ಜಾತಿಯ ಒಂದು ಕುರಿ 4 ರಿಂದ 4½ ಪೌಂಡಿನಷ್ಟು ಉಣ್ಣೆಯನ್ನು ಕೊಡುತ್ತದೆ. ಈ ಕುರಿಗಳ ಉಣ್ಣೆ ಎಳೆಗಳು ಹೆಚ್ಚು ಉದ್ದವಿರುವುದಿಲ್ಲ; ಸುಮಾರು 2 ಅಂಗುಲ ಉದ್ದವಿರುತ್ತವೆ. ಈ ಕಾರಣ ದಿಂದಾಗಿ ಈ ಉಣ್ಣೆಗೆ ಹೆಚ್ಚು ಬೇಡಿಕೆ ಇಲ್ಲ. ಇದರ ಮರಿಗಳು ಬಹಳ ತೀವ್ರವಾಗಿ ಬೆಳೆಯುತ್ತವೆ ಮತ್ತು ಬೇಗನೆ ಬೆದೆಗೆ ಬರುತ್ತವೆ. ಈ ಕುರಿಗಳ ತಲೆ ಸಣ್ಣದಾಗಿ ಮತ್ತು ಸ್ವಲ್ಪ ಅಗಲವಾಗಿರುತ್ತದೆ. ಕಿವಿಗಳು ಸಣ್ಣವು. ಮುಖ ಮತ್ತು ಕಾಲುಗಳು ತುದಿವರೆಗಿನ ಭಾಗಗಳ ಮೇಲೆ ಒಂದೇ ಸಮನಾಗಿ ಕಂದು ಬಣ್ಣದ ಉಣ್ಣೆ ದಟ್ಟವಾಗಿ ಬೆಳೆದಿರುತ್ತದೆ. ಹೊಟ್ಟೆಯ ಮೇಲೂ ಸಹ ಉಣ್ಣೆ ಬಹಳ ದಟ್ಟವಾಗಿ ಬೆಳೆದಿರುತ್ತದೆ. ಬ್ರಿಟನ್ನಿನಲ್ಲಿ ಈ ಸೌತ್‌ಡೌನ್ ಜಾತಿಯ ಕುರಿಗಳು ಅತಿ ಉತ್ತಮ ದರ್ಜೆ ಮಾಂಸದ ಕುರಿಗಳೆಂದು ಹೆಸರಾಗಿವೆ. ಇದರ ಮಾಂಸವು ಬಹಳ ರಸವತ್ತಾಗಿರುತ್ತದೆ. ಈ ಕುರಿ ಗಳು ಅಧಿಕ ಸಂಖ್ಯೆಯಲ್ಲಿ ಬೇರೆ ದೇಶಗಳಿಗೆ ರಫ್ತಾಗುತ್ತದೆ. ಈ ಕುರಿಗಳ ಒಂದು ವೈಶಿಷ್ಟ್ಯವೆಂದರೆ ಇವು ಬೇರೆ ದೇಶಗಳ ಬಗೆಬಗೆಯ ವಾತಾವರಣಕ್ಕೆ ಹೊಂದಿ ಕೊಳ್ಳುವುದು. ಸಾಮಾನ್ಯವಾಗಿ ಇವುಗಳ ಶರೀರರಚನೆ ಮಾಂಸದ ಕುರಿಗಳ ಶರೀರ ರಚನೆಯನ್ನು ಹೋಲುತ್ತವೆ. ಕಾಲು ಮತ್ತು ತೊಡೆಗಳು ದಪ್ಪದಾದ ಮಾಂಸಖಂಡ ಗಳಿಂದ ತುಂಬಿಕೊಂಡಿರುತ್ತವೆ. ಈ ಜಾತಿಯ ಟಗರು 200 ರಿಂದ 250 ಪೌಂಡು, ಕುರಿಗಳು 150 ರಿಂದ 175 ಪೌಂಡು ತೂಕವಿರುತ್ತವೆ.

2) **ಸಫೋಕ್ ಕುರಿಗಳು** : ಇವು ಸೌತ್‌ಡೌನ್ ಟಗರುಗಳು ಮತ್ತು ನಾರ್‌ಫೋಕ್‌ನ ಕೊಂಬಿನಿಂದ ಕೂಡಿದ ಕುರಿಗಳಿಂದ ಹುಟ್ಟಿದ ಕುರಿಗಳು. ಇವು ಬ್ರಿಟನ್ನಿನ ತಗ್ಗು ಪ್ರದೇಶಗಳಲ್ಲಿ ಬಹಳವಾಗಿ ಹರಡಿವೆ. ಡೌನ್ ಜಾತಿಯ ಕುರಿಗಳ ಗುಂಪಿನಲ್ಲಿ ರುವ ಇವು ಆಕಾರದಲ್ಲಿ ದೊಡ್ಡ ಗಾತ್ರದ ಕುರಿಗಳು. ಇವು ಆಕಾರ ಮತ್ತು ತೂಕದಲ್ಲಿ ಲೈಸಿಸ್ಟರ್ ಕುರಿಗಳನ್ನು ಹೋಲುತ್ತವೆ. ಇವುಗಳ ತಲೆ ಬಹಳ ಮಾಟಾಗಿರುತ್ತದೆ. ಕಾಲುಗಳು ಮತ್ತು ತಲೆಯ ಮೇಲೆ ತುಪ್ಪಟ ಬೆಳೆದಿರುವುದಿಲ್ಲ. ಕಿವಿಗಳು ಉದ್ದವಾಗಿ ಕೆಳಗೆ ಜೋಲುಬಿದ್ದಿರುತ್ತವೆ. ಕುತ್ತಿಗೆ ಸ್ವಲ್ಪ ಉದ್ದವಾಗಿರುತ್ತದೆ. ಇವುಗಳ ಕಾಲು ಮತ್ತು ತೊಡೆಯ ಭಾಗಗಳು ಉತ್ತಮ ಮಾಂಸಖಂಡಗಳಿಂದ ತುಂಬಿಕೊಂಡಿರುತ್ತವೆ.

ಇವುಗಳ ಮಾಂಸದಲ್ಲಿ ಕೊಬ್ಬಿನಾಂಶವು ಬಹಳ ಕಡಮೆ ಪ್ರಮಾಣದಲ್ಲಿರುತ್ತದೆ. ಇವುಗಳ ಉಣ್ಣೆಯ ಎಳೆಗಳು ಉದ್ದ, ಗಟ್ಟಿ ಮತ್ತು ಕಪ್ಪು ಛಾಯೆಯಿಂದ ಕೂಡಿರುತ್ತವೆ. ಈ ಜಾತಿಯ ಟಗರುಗಳನ್ನು ಉದ್ದ ಉಣ್ಣೆಯ ಜಾತಿಯ ಕುರಿಗಳೊಂದಿಗೆ ಸಂಭೋಗ ಮಾಡಿಸಿ ಸಂವರ್ಧನೆ ಹೆಚ್ಚಾಗಿ ಉಪಯೋಗಿಸುತ್ತಾರೆ.

3) **ಹ್ಯಾಂಪ್‌ಶೈರ್ ಕುರಿಗಳು** : ಹ್ಯಾಂಪ್‌ಶೈರ್ ಕುರಿಗಳು ಬರ್ಕ್‌ಶೈರ್ ನಾಟ್ ಮತ್ತು ಕೊಂಬುಳ್ಳ ವಿಲ್ಟ್‌ಶೈಲ್ ಸ್ಥಳೀಕ ಕುರಿಗಳ ಮತ್ತು ಸಾತ್‌ಡೌನ್ ಕುರಿಗಳ ಮಿಶ್ರಣದಿಂದ ರೂಪಗೊಂಡ ಸಂಕರಣ ಕುರಿಗಳು. ಇವು ದೊಡ್ಡ ಗಾತ್ರದ ಕುರಿಗಳು. ಆದರೆ ಸಫೋಕ್ ಮತ್ತು ಆಕ್ಸ್‌ಫರ್ಡ್ ಕುರಿಗಳಷ್ಟು ದೊಡ್ಡವಲ್ಲ. ಮುಖ ಕಂದು ಮಿಶ್ರಿತವಾದ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಕಣ್ಣುಗಳವರೆಗೆ ಅಥವಾ ಅದಕ್ಕೂ ಮುಂದೆ ಉದ್ದವಾಗಿ ಉಣ್ಣೆಯು ಬೆಳೆದು ನಿಂತಿರುತ್ತದೆ. ತಲೆ ಅಗಲವಾಗಿ ದಪ್ಪವಾಗಿರುತ್ತದೆ. ಮೈ ಒರಟಾಗಿರುತ್ತದೆ. ಇದು ಉತ್ತಮ ಮಾಂಸಕೊಡುವ ಜಾತಿಯ ಕುರಿ ಆಗಿದೆ. ಉಣ್ಣೆ ಗಿಡ್ಡಾಗಿ ಮತ್ತು ಮೈಮೇಲೆ ವಿರಳವಾಗಿ ಬೆಳೆದಿರುತ್ತದೆ. ಮುಖ ಕಪ್ಪುಬಣ್ಣದ ತಂತುಗಳಿಂದ ಕೂಡಿದ ಉಣ್ಣೆಯಿಂದ ಮಿಶ್ರಿತವಾಗಿರುತ್ತದೆ. ಹ್ಯಾಂಪ್‌ಶೈರ್ ಕುರಿಗಳು ಬಹಳ ಕಷ್ಟಸಹಿಷ್ಣುತೆಯ ಪ್ರಾಣಿಗಳು; ನಿಸ್ಸಾರವಾದ ಭೂಮಿಯಲ್ಲಿ ಬೆಳೆದ ಆಹಾರವನ್ನು ಸಹ ತಿಂದು ಜೀವಿಸಬಲ್ಲವು. ಸೌತ್‌ಮಿಡ್‌ಲಂಡ್ ಮತ್ತು ಇಂಗ್ಲಂಡಿನ ದಕ್ಷಿಣ ಭಾಗಗಳಲ್ಲಿ ಈ ಕುರಿಗಳನ್ನು ಕೇವಲ ಮಾರಾಟಕ್ಕಾಗಿ ಸಾಕುತ್ತಾರೆ.

4) **ಆಕ್ಸ್‌ಫರ್ಡ್ ಡೌನ್** : ಈ ಜಾತಿಯ ಕುರಿಗಳು ಕ್ರಿ. ಶ. 1830 ರಲ್ಲಿ ಆಕ್ಸ್‌ಫರ್ಡ್‌ಡೌನ್ ಕಾಟ್ಸ್‌ವೋಲ್ಡ್ ಮತ್ತು ಹ್ಯಾಂಪ್‌ಶೈರ್ ಕುರಿಗಳ ಸಮ್ಮಿಳನದಿಂದ ಹುಟ್ಟಿವೆ. ಇವು ಸೌತ್‌ಡೌನ್ ಜಾತಿಯ ಕುರಿಗಳ ಗುಂಪಿನಲ್ಲಿಯೇ ದೊಡ್ಡ ಗಾತ್ರದ ಕುರಿಗಳು. ಇವುಗಳ ಮುಖ ಬೂದಿ ಮತ್ತು ಕಂದುಬಣ್ಣ. ಮುಖದ ಮೇಲೆ ಮುಂಭಾಗದಲ್ಲಿ ಉದ್ದವಾದ ಗಂಟುಗಂಟಿನಂತಿರುವ ಕೂದಲುಗಳಿಂದ ಕೂಡಿರುತ್ತದೆ. ಇದರ ಉಣ್ಣೆ ಮಧ್ಯಮ ದರ್ಜೆಯದಾಗಿರುತ್ತದೆ. ಸ್ಕಾಟ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಟಗರುಗಳನ್ನು ಹೆಚ್ಚಾಗಿ ಶೇವಿಯಟ್ ಮತ್ತು ಬಾರ್‌ಡರ್ ಲೈಸಿಸ್ಟರ್ ಕುರಿಗಳನ್ನು ಕಟ್ಟಿಸಲು ಹೆಚ್ಚಾಗಿ ಉಪಯೋಗಿಸುತ್ತಾರೆ. ಈ ಜಾತಿಯ ಟಗರು 270ರಿಂದ 300 ಪೌಂಡು ತೂಕವಿರುತ್ತವೆ; ಕುರಿ 225 ಪೌಂಡು ತೂಕವಿರುತ್ತವೆ. 860ರಲ್ಲಿ ಇಂಗ್ಲಂಡಿನ ರಾಯಲ್ ಅಗ್ರಿಕಲ್ಚರಲ್ ಸೊಸೈಟಿಯವರು ಈ ಕುರಿಗಳನ್ನು ಉತ್ತಮ ಜಾತಿಯ ಕುರಿಗಳೆಂದು ಮಾನ್ಯಮಾಡಿರುತ್ತಾರೆ.

5) **ಡಾರ್ ಸೆಟ್ ಡೌನ್** : ಇವುಗಳನ್ನು ಸುಧಾರಿಸಿದ ಹ್ಯಾಂಪ್‌ಶೈರ್ ಕುರಿಗಳೆಂದು ಕರೆಯಬಹುದು. ಇವು ಮಧ್ಯಮ ಆಕಾರದ ಕುರಿಗಳು. ಮುಖವು

ಕಂದುಬಣ್ಣದಿಂದ ಕೂಡಿರುತ್ತದೆ. ಹಣೆಯ ಮೇಲಿಂದ ಹಿಡಿದು ಕಣ್ಣುಗಳವರೆಗೆ ಉಣ್ಣೆಯು ಬೆಳೆದಿರುತ್ತದೆ. ಕುರಿಗಳು ಫಲಭರಿತವಾದವುಗಳು ಮತ್ತು ಉತ್ತಮ ತಾಯಿಗುಣಗಳನ್ನು ಪಡೆದಿವೆ. ಈ ಜಾತಿಯ ಟಗರುಗಳನ್ನು ಕೊಬ್ಬಿದ ಮರಿಗಳ ಉತ್ಪಾದನೆಗಾಗಿ ಉಪಯೋಗಿಸುತ್ತಾರೆ.

6) ಶಾಪ್‌ಶೈರ್ : ಶಾರ್ಪ್‌ಶೈರ್ ಕುರಿಗಳು ಸ್ಟ್ರಾಫೋರ್ಡ್‌ಶೈರ್ ಮತ್ತು ಶ್ರಾಪ್‌ಶೈರ್‌ನ ಸ್ಥಳಿಕ ಕುರಿಗಳನ್ನು ಸೌತ್‌ಡೌನ್ ಜಾತಿಯ ಕುರಿಗಳೊಂದಿಗೆ ಜೊತೆಗೂಡಿಸಿ ಸಂವರ್ಧನೆಮಾಡಿ ಹುಟ್ಟಿದ ಕುರಿಗಳು. ಉದ್ದವಾದ ಇವುಗಳು ಅಗಲವಾದ ಬೆನ್ನಿನಿಂದ ಕೂಡಿರುತ್ತದೆ. ಕಾಲುಗಳು ಗಿಡ್ಡಾಗಿರುತ್ತದೆ. ತಲೆಯ ಮೇಲುಭಾಗದಿಂದ ಹಿಡಿದು ಮೂಗಿನ ತುದಿಯವರೆಗೆ ಉಣ್ಣೆ ಬೆಳೆದಿರುತ್ತದೆ. ಮೂಗು ಕೆಂಪು ಮಿಶ್ರಿತ ಹಳದಿ ಬಣ್ಣ. ಉಣ್ಣೆ ಮೈಮೇಲೆ ಉದ್ದವಾಗಿ ಮತ್ತು ಒತ್ತಾಗಿ ಒಂದೇ ಸಮನಾಗಿ ಬೆಳೆದಿರುತ್ತದೆ. ಇದರ ಉಣ್ಣೆ ಉತ್ತಮ ದರ್ಜೆಯದಾಗಿರುತ್ತದೆ. ಈ ಕುರಿಗಳ ಮಾಂಸ ರಸವತ್ತಾಗಿ ಬಹಳ ರುಚಿಕರವಾಗಿರುತ್ತದೆ. ಈ ಕುರಿಗಳು ಉತ್ತಮ ಮಾಂಸದ ಕುರಿಗಳೆಂದು ಹೆಸರಾಗಿವೆ. ಕುರಿಗಳು ಹೆಚ್ಚು ಹಾಲು ಕೊಡುತ್ತವೆ ಇದರಿಂದ ಮರಿಗಳು ಬೇಗನೆ ಸಮೃದ್ಧಿಯಾಗಿ ಬೆಳೆಯುತ್ತವೆ. ಮರಿಗಳು ಕೊಬ್ಬಿನಿಂದ ಕೂಡಿರುತ್ತವೆ. ಈ ಜಾತಿಯ ಮರಿಗಳು ಬೇಗನೆ ಬೆದೆಗೆ ಬರುತ್ತವೆ. ಕುರಿಗಳು ಕೆನಡಾ ಮತ್ತು ಅಮೇರಿಕಾ ದೇಶಗಳಲ್ಲಿ ಬಹಳ ಜನಪ್ರಿಯವಾಗಿರುವುದಲ್ಲದೆ ಬಹಳ ಆಕರ್ಷಕವಾಗಿವೆ.

7) ಡಾರ್‌ಸೆಟ್ ಕೊಂಬಿನ (ಡಾರ್‌ಸೆಟ್ ಹಾರನ್) ಕುರಿಗಳು: ಡಾರ್‌ಸೆಟ್, ಸಾಮರ್‌ಸೆಟ್ ಮತ್ತು ಐಲ್‌ಆಫ್‌ವೈಟ್ ಪ್ರದೇಶಗಳೇ ಡಾರ್‌ಸೆಟ್ ಕೊಂಬಿನ (ಡಾರ್‌ಸೆಟ್ ಹಾರನ್) ಕುರಿಗಳಮೂಲಸ್ಥಾನ. ಈ ಪ್ರದೇಶಗಳಲ್ಲಿ ಇವು ಬಹಳ ವರ್ಷಗಳಿಂದ ನೆಲೆಸಿರುವ ಬಹಳ ಹಳೇ ಜಾತಿಯ ಕುರಿಗಳು. ಸೌತ್‌ಡೌನ್ ಕುರಿಗಳಿಗಿಂತ ಇವು ದೊಡ್ಡವು. ಮುಖ ಬಿಳುಪು. ಮೂಗು ಗುಲಾಬಿ ಬಣ್ಣದ್ದಾಗಿರುತ್ತದೆ. ಟಗರು ಮತ್ತು ಕುರಿಗಳೆರಡಕ್ಕೂ ಕೊಂಬುಗಳಿರುತ್ತವೆ. ಈ ಜಾತಿಯ ಟಗರಿನ ಕೊಂಬುಗಳು ಬಹಳ ದೊಡ್ಡವು; ಸುರುಳಿಯಾಕಾರವಾಗಿ ಸುತ್ತಿಕೊಂಡಿರುತ್ತವೆ. ಕೋಡುಗಳ ತುದಿ ಕಣ್ಣು ಮುಂದೆ ಬಂದಿರುವುದರಿಂದ ನೋಟಕ್ಕೆ ಅಡ್ಡಿಯನ್ನು ಉಂಟುಮಾಡುತ್ತವೆ. ಉಣ್ಣೆ ಒರಟಾಗಿರುತ್ತದೆ. ಇವುಗಳ ಮಾಂಸ ಉತ್ತಮ ದರ್ಜೆಯದಾಗಿರುತ್ತದೆ ಮತ್ತು ಮಾಂಸದ ತೂಕ ಹೆಚ್ಚಾಗಿರುತ್ತದೆ. ಇದರ ಉಣ್ಣೆ ಸೌತ್‌ಡೌನ್ ಕುರಿಗಳ ಉಣ್ಣೆಗೆ ಸರಿಸಮಾನವಾಗಿರುತ್ತದೆ. ಸೌತ್‌ಡೌನ್ ಕುರಿಗಳ ಉಣ್ಣೆ ಹಾಗೂ ಇವುಗಳ ಉಣ್ಣೆಯ ಬಣ್ಣಗಳಲ್ಲಿ ವ್ಯತ್ಯಾಸವಿರುತ್ತದೆ. ಸೌತ್‌ಡೌನ್ ಕುರಿಗಳ ಉಣ್ಣೆಯಂತೆ ತಿಳಿಹಳದಿ ಬಣ್ಣದ್ದಾಗಿರದೆ ಇವುಗಳ ಉಣ್ಣೆಯು ಶುದ್ಧ ಬಿಳಿಯದು ಮತ್ತು ಎಳೆಗಳು ಕಪ್ಪುಮಿಶ್ರಿತವಾಗಿರುವುದಿಲ್ಲ.

ಉಣ್ಣೆ ಅಷ್ಟು ದಟ್ಟವಾಗಿ ಬೆಳೆದಿರುವುದಿಲ್ಲ. ಈ ಕಾರಣದಿಂದ ಸಿಕ್ಕುವ ಉಣ್ಣೆ ಪರಿಮಾಣ ಕಡಮೆಯಾಗಿರುತ್ತದೆ ಮತ್ತು ಎಳೆಗಳು ಹಗುರವಾಗಿರುವುದರಿಂದ ತೂಕದಲ್ಲಿ ಕಡಮೆಯಾಗುತ್ತದೆ. ಒಂದು ಕುರಿ ಸುಮಾರು 8 ರಿಂದ 10 ಪೌಂಡುಗಳವರೆಗೆ ಉಣ್ಣೆಯನ್ನು ಕೊಡುತ್ತದೆ. ಹೆಣ್ಣು ಕುರಿಗಳು ಹೆಚ್ಚು ಹಾಲುಕೊಡುತ್ತವೆ. ಹೆಚ್ಚು ಫಲವತ್ತಾದ ಪ್ರದೇಶಗಳಲ್ಲದ ಗುಡ್ಡಗಾಡು ಪರ್ವತಸೀಮೆಗಳಲ್ಲಿ ಇವು ವಾಸವಾಗಿರುವುದರಿಂದ ಬಹಳ ಚುರುಕಾಗಿರುತ್ತವೆ. ಜೊತೆಗೆ ಇವು ಗಟ್ಟಿಗತನವನ್ನು ಸ್ವಾಭಾವಿಕವಾಗಿ ಪಡೆಯುತ್ತವೆ. ಇವುಗಳಿಗೆ ಮೇವು ಮತ್ತು ಹುಲ್ಲು ಹೆಚ್ಚು ಪ್ರಮಾಣದಲ್ಲಿ ಬೇಕಾಗುತ್ತದೆ.

8) ವೆಸ್ಟರನ್ ಅಥವಾ ವಿಲ್ಟ್‌ಶೈರ್‌ಹಾರನ್ ಕುರಿಗಳು : ಇವು ಆಕಾರದಲ್ಲಿ ಡಾರ್‌ಸೆಟ್‌ಹಾರನ್ ಕುರಿಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಆದರೆ ಇವುಗಳ ಮೈಮೇಲೆ ಉಣ್ಣೆ ಸರಿಯಾಗಿ ಒಂದೇ ಸಮನೆ ಮಟ್ಟಸವಾಗಿ ಬೆಳೆಯದೆ ಆಡಿನ ಮೈಮೇಲಿನ ಕೂದಲಿನಂತೆ ಕೂದಲು ಬೆಳೆದಿರುತ್ತದೆ. ಮೈಬಣ್ಣ ಬಿಳುಪು ಮತ್ತು ತಲೆ ಕಪ್ಪುಮಿಶ್ರಿತವಾಗಿರುತ್ತದೆ. ಈ ಜಾತಿಕುರಿಗಳು ಸ್ವಭಾವದಲ್ಲಿ ಬಹಳ ಒರಟು ಮತ್ತು ಹೆಚ್ಚು ಕಷ್ಟಸಹಿಷ್ಣುಗಳಾಗಿರುತ್ತವೆ.

9) ರೈಲ್ಯಾಂಡ್ : ಇವುಗಳ ಮೂಲಸ್ಥಾನ ಸದರನ್ ಹೆರ್‌ಫೋರ್ಡ್‌ನಲ್ಲಿರುವ ರೈಲ್ಯಾಂಡ್ ಪ್ರದೇಶ. ಇವು ಬಿಳಿಮುಖದ ಸೌತ್‌ಡೌನ್ ಕುರಿಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಇವುಗಳ ಮಾಂಸ ಉತ್ಕೃಷ್ಟ ದರ್ಜೆಯದು. ಇದರಂತೆ ಉಣ್ಣೆಯೂ ಸಹ ಉತ್ತಮ ದರ್ಜೆಯದಾಗಿರುತ್ತದೆ. ಡಾರ್‌ಸೆಟ್‌ಹಾರನ್ ಮತ್ತು ಸೌತ್‌ಡೌನ್ ಕುರಿಗಳ ಉಣ್ಣೆಗಿಂತ ಇದರ ಉಣ್ಣೆಯ ಎಳೆಗಳು ಹೆಚ್ಚು ಉದ್ದವಾಗಿ ಮತ್ತು ಹೆಚ್ಚು ದಟ್ಟವಾಗಿ ಬೆಳೆದಿರುತ್ತವೆ. ಹೀಗಾಗಿ ಒಟ್ಟಿನಲ್ಲಿ ರೈಲ್ಯಾಂಡ್ ಜಾತಿ ಕುರಿಗಳು ಅವುಗಳಿಗಿಂತ ಹೆಚ್ಚು ಉಣ್ಣೆಯನ್ನು ಕೊಡುತ್ತವೆ. ಇವುಗಳ ಸಾಕಣೆ ಬ್ರಿಟನ್ನಿನಲ್ಲಿ ಕೆಂಟ್‌ನಿಂದ ಹಿಡಿದು ಕಂಬರ್‌ಲ್ಯಾಂಡ್‌ವರೆವಿಗೂ ವ್ಯಾಪಿಸಿದೆ.

10) ಕೆರಿಹಿಲ್ : ಮಾಂಟಿಗೋಮರಿಶೈರ್‌ನ ಕೆರಿಹಿಲ್ ಪ್ರದೇಶಗಳಲ್ಲಿ ಇವು ನೆಲಸಿರುವ ಕುರಿಗಳು. ಕಾರಣ ಇವುಗಳನ್ನು ಕೆರಿಹಿಲ್ ಕುರಿಗಳೆಂದು ಕರೆಯಲಾಗಿದೆ. ಇವುಗಳ ಮುಖ ಮತ್ತು ಕಾಲುಗಳು ಬಿಳುಪು ಮತ್ತು ಕಪ್ಪು ಮಚ್ಚೆಗಳಿಂದ ಕೂಡಿರುತ್ತವೆ. ಗಾತ್ರದಲ್ಲಿ ಇವು ಮಧ್ಯಮ ತರಗತಿಯ ಕುರಿಗಳು. ಇವು ಉತ್ತಮ ಉಣ್ಣೆಯನ್ನು ಕೊಡುತ್ತವೆ.

3) ಪರ್ವತ ಸೀಮೆಯ ಕುರಿಗಳು : ಪರ್ವತ ಸೀಮೆಯ ಕುರಿಗಳು ಸಾಮಾನ್ಯವಾಗಿ ಗಾತ್ರದಲ್ಲಿ ಸಣ್ಣವು. ಇವು ಬಹಳ ಚಪಲ ಮತ್ತು ಚುರುಕಾದ ಪ್ರಾಣಿಗಳು. ಗಟ್ಟಿಯಾದ ಮತ್ತು ಶ್ರಮವನ್ನು ಸಹಿಸುವ ಶಕ್ತಿಯುಳ್ಳ ಕುರಿಗಳು. ಈ ಜಾತಿಯ ಕುರಿಗಳು ಬೇರೆ ಕುರಿಗಳಿಗಿಂತ ಬಹಳ ತಡವಾಗಿ ಬೆದೆಗೆ ಬರುತ್ತವೆ. ಬಹಳ ಉತ್ತಮ ಗುಣದಿಂದ ಕೂಡಿದ ಇವುಗಳ ಮಾಂಸ ಶ್ರೇಷ್ಠ ದರ್ಜೆಯದಾಗಿರುತ್ತದೆ. ಇವುಗಳ ಉಣ್ಣೆ ಗುಣದಲ್ಲಿ ಕುರಿಯಿಂದ ಕುರಿಗೆ ಬಹಳ ಅಂತರ (ವ್ಯತ್ಯಾಸ) ಕಂಡುಬರುತ್ತದೆ. ಇವುಗಳಲ್ಲಿಯ ಮುಖ್ಯ ಜಾತಿಗಳೆಂದರೆ :

1) ಸ್ಕಾಟ್ ಬ್ಲಾಕ್ 2) ಸ್ವೇಲ್‌ಡೇಲ್ 3) ಲ್ಯಾಂಕ್ 4) ಶೇವಿಯಟ್ 5) ಹಾರ್ಡ್‌ವಿಕ್ 6) ವೇಲ್ಸ್ ಮೌಂಟೇನ್ ಮತ್ತು 7) ಎಕ್ಸ್‌ಮೋರ್ ಅಥವಾ ಹಾರನ್ ಅಥವಾ ಪ್ಲೋರ್‌ಲಾಕ್

1) ಸ್ಕಾಟ್ ಬ್ಲಾಕ್ (ಕಪ್ಪುಮುಖದ) ಕುರಿಗಳು : ಇವು ಸ್ಕಾಟ್ಲಂಡಿನಲ್ಲಿ ಪರ್ವತಶ್ರೇಣಿಯಲ್ಲಿಯ ಸ್ಥಳಗಳಲ್ಲಿ ಸಾಕಣೆಯಲ್ಲಿರುವ ಕುರಿಗಳು. ಈ ಕುರಿಗಳಲ್ಲಿ ಮುಖ ಮತ್ತು ಕಾಲುಗಳು ಕಪ್ಪು ಮತ್ತು ಬಿಳುಪು ಮಿಶ್ರಿತಬಣ್ಣದಿಂದ ಕೂಡಿರುತ್ತವೆ. ಇವು ಉತ್ತಮ ಮಾಂಸಕ್ಕೆ ಹೆಸರಾದ ಜಾತಿಯ ಕುರಿಗಳು. ಇವುಗಳ ಉಣ್ಣೆ ಉದ್ದ, ಎಳೆಗಟ್ಟಿ ಮತ್ತು ಒರಟು. ಕುರಿಗಳಿಗಿಂತ ಟಗರುಗಳು ಉದ್ದವಾದ ಮತ್ತು ದಪ್ಪವಾದ ಕೋಡುಗಳಿಂದ ಕೂಡಿರುತ್ತವೆ. ಮುಖದ ಮೇಲೆ ಕಪ್ಪು ಅಥವಾ ಕಪ್ಪು ಬಿಳುಪು ಮಿಶ್ರಿತವಾದ ಕೂದಲುಗಳು ಬೆಳೆದಿರುತ್ತವೆ. ಕಾಲುಗಳು ಕಪ್ಪು ಬಣ್ಣದ್ದಾಗಿರುತ್ತವೆ. ಉಣ್ಣೆ ಕಪ್ಪು ಛಾಯೆಯಿಂದ ಕೂಡಿರುತ್ತದೆ. ಇವು ಸಣ್ಣ ಗಾತ್ರದ ಕುರಿಗಳು. ಟಗರು ಸುಮಾರು 180 ಪೌಂಡು ತೂಕವಿರುತ್ತದೆ. ಇವುಗಳ ಮೈಕಟ್ಟು ಮಟ್ಟಸವಾಗಿದ್ದು ನೋಡಲು ಬಹಳ ಆಕರ್ಷಿತವಾಗಿರುತ್ತವೆ. ಇವುಗಳ ಉಣ್ಣೆಯು ಹಾಸುಗಂಬಳಿ ಮತ್ತು ಒರಟಾದ ಬಟ್ಟೆಗಳನ್ನು ತಯಾರಿಸುವುದಕ್ಕಾಗಿ ಉಪಯೋಗಿಸಲಾಗುತ್ತದೆ. ನಯವಾದ ಬಟ್ಟೆಗಳ ತಯಾರಿಕೆಗೆ ಈ ಉಣ್ಣೆ ಉಪಯೋಗವಿಲ್ಲ. ಒಂದು ಕುರಿ ಸುಮಾರು 3½ ಯಿಂದ 5 ಪೌಂಡುಗಳವರೆಗೆ ಉಣ್ಣೆಯನ್ನು ಕೊಡುತ್ತದೆ. ಈ ಜಾತಿಯ ಕುರಿಗಳು ಬಹಳ ಕಷ್ಟಸಹಿಷ್ಣು. ಪರ್ವತ ಪ್ರದೇಶಗಳಲ್ಲಿ ಇವು 2000 ದಿಂದ 3000 ಅಡಿಗಳ ಎತ್ತರಕ್ಕೆ ಹೋಗಿ ಮೇಯುತ್ತವೆ. ಚಳಿಗಾಲದಲ್ಲಿ ಕುರಿಗಳನ್ನು ಪರ್ವತದ ತಪ್ಪಲುಗಳಲ್ಲಿಟ್ಟು ಸಾಕುವುದು ಬಹು ಸಾಮಾನ್ಯ. ಪರ್ವತಗಳು ಹಿಮದಿಂದ ತುಂಬಿದಾಗ ಕುರಿಗಳಿಗೆ ಒಣ ಮೇವು ಕೊಟ್ಟು ಪಾಲನೆ ಮಾಡುತ್ತಾರೆ.

2) ಸ್ವೇಲ್ ಡೇಲ್ ಕುರಿಗಳು : ಈ ಕುರಿಗಳು ಯಾರ್ಕ್‌ಶೈರ್ ಮತ್ತು ಈಸ್ಟ್‌ಲ್ಯಾಂಕ್‌ಶೈರ್ ಭಾಗದಲ್ಲಿರುವ ಕುರಿಗಳು. ಇವು ಇತ್ತೀಚೆಗೆ ಇಂಗ್ಲಂಡಿನ ಉತ್ತರ

ಭಾಗದ ಪ್ರದೇಶಗಳಿಗೆ ಹರಡಿಕೊಂಡಿವೆ. ಟಗರು ಮತ್ತು ಕುರಿಗಳಿಗೆ ಕೊಂಬುಗಳಿರುತ್ತವೆ. ಮುಖದ ಮೇಲುಭಾಗ ಕಪ್ಪಾಗಿಯೂ, ಕೆಳಭಾಗ ಬೂದಿಬಣ್ಣವಾಗಿಯೂ ಇರುತ್ತದೆ. ಈ ಜಾತಿಯ ಕುರಿಗಳ ತುಪ್ಪಟ, ಕೂದಲು ಮತ್ತು ಉಣ್ಣೆಗಳಿಂದ ಕೂಡಿಕೊಂಡಿರುತ್ತದೆ. ಇವುಗಳ ಬಣ್ಣ ಬಿಳುಪಾಗಿರುತ್ತದೆ. ತಲೆಯ ಹಿಂಭಾಗದಲ್ಲಿ ಮಾತ್ರ ಕಪ್ಪಾಗಿರುತ್ತದೆ. ಇದರ ಉಣ್ಣೆಯನ್ನು ಹಾಸುಕಂಬಳಿ ಮತ್ತು ಒರಟು ಉಣ್ಣೆಯ ಬಟ್ಟೆಗಳ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಮೂಗಿನ ತುದಿ ಕಂದು ಬಣ್ಣದ್ದಾಗಿರುತ್ತದೆ. ಕಾಲುಗಳು ಬೂದಿ ಮತ್ತು ಕಪ್ಪುಮಿಶ್ರಿತ ಬಣ್ಣದಿಂದ ಕೂಡಿರುತ್ತವೆ.

3) ಲ್ಯಾಂಕ್ ಕುರಿಗಳು : ಯಾರ್ಕ್‌ಶೈರ್, ಡರ್ಬಿಶೈರ್ ಮತ್ತು ಲ್ಯಾಂಕ್‌ಶೈರ್‌ಗಳಲ್ಲಿ ಈ ಜಾತಿ ಕುರಿಗಳು ಕಂಡುಬರುತ್ತವೆ. ಪರ್ವತಸೀಮೆಯ ಕುರಿಗಳಲ್ಲೆಲ್ಲ ಇವು ಆಕಾರದಲ್ಲಿ ದೊಡ್ಡವು. ಈ ಜಾತಿಯ ಟಗರುಗಳ ಕೊಂಬುಗಳು ಬಹಳ ದೊಡ್ಡದಾಗಿರುತ್ತವೆ. ಇವು ಸ್ಕಾಟ್‌ಬ್ಲಾಕ್ ಮುಖದ ಕುರಿಗಳಿಗಿಂತ ಎತ್ತರವಾದ ಕಾಲಿನ ಕುರಿಗಳಾಗಿರುತ್ತವೆ ಮತ್ತು ಉದ್ದವಾಗಿರುತ್ತವೆ. ಇವುಗಳ ಉಣ್ಣೆಯು ಗಿಡ್ಡಾಗಿ, ಒರಟಾಗಿ, ಕಡಮೆಗುಣದ್ದಾಗಿರುತ್ತದೆ. ಮುಖ ಮತ್ತು ಕಾಲುಗಳು ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಸ್ವೇಲ್‌ಡೇಲ್ ಅಥವಾ ಕಪ್ಪುಮುಖದ ಕುರಿಗಳಷ್ಟು ಬಿರುಸಲ್ಲ (ಗಟ್ಟಿಯಲ್ಲ). ಹೆಣ್ಣು ಕುರಿಗಳನ್ನು ಚಳಿಗಾಲದಲ್ಲಿ ದೊಡ್ಡಿಯಲ್ಲಿ ಕೂಡಿಟ್ಟು ಅವುಗಳಿಗೆ ಅಲ್ಲಿಯೇ ಒಣಮೇವು ಕೊಟ್ಟು ಸಾಕುತ್ತಾರೆ.

4) ಶೇವಿಯಟ್ ಕುರಿಗಳು : ಶೇವಿಯಟ್ ಬೆಟ್ಟದ ಮಧ್ಯದಲ್ಲಿ ಹರಿಯುವ ಟ್ವೀಡ್ ನದಿಯ ತೀರಪ್ರದೇಶವೇ ಈ ಕುರಿಗಳ ಮೂಲಸ್ಥಾನ. ಮೊದಲಿಗೆ ಇವುಗಳನ್ನು ಸ್ಕಾಟ್ಲೆಂಡ್ ಗಡಿನಾಡು ಪ್ರದೇಶಗಳಲ್ಲಿಯೂ ಮತ್ತು ಶೇವಿಯಟ್ ಬೆಟ್ಟದ ಪ್ರದೇಶಗಳಲ್ಲಿ ಸಾಕುತ್ತಿದ್ದರು. ಆದರೆ ಈಗ ಇವು ಬಹಳ ದೂರದವರೆಗೆ ವಿಶಾಲವಾಗಿ ಹರಡಿಕೊಂಡಿವೆ. ಸ್ಕಾಟ್ಲೆಂಡಿನ ಸದರ್‌ಲ್ಯಾಂಡ್ ಮತ್ತು ಕೇತ್‌ನೆಸ್ ಪ್ರದೇಶಗಳಲ್ಲಿ ಇವುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಾಕುತ್ತಾರೆ. ಇವು ಮಧ್ಯಮ ತರಗತಿಯ ಆಕಾರದ ಕುರಿಗಳು. ಬಿಳಿಯ ಮುಖ, ಕೊಂಬುಗಳಿರುವುದಿಲ್ಲ. ಕೆಲವು ಸಮಯ ಟಗರುಗಳಿಗೆ ಕೊಂಬುಗಳಿರುವುದುಂಟು. ಮೈಕಟ್ಟು ತುಂಬಿಕೊಂಡು ದಪ್ಪವಾಗಿರುತ್ತದೆ. ತಲೆಯು ಸಣ್ಣದಾಗಿ, ಉದ್ದವಾಗಿಯೂ ಮತ್ತು ಅಗಲವಾಗಿಯೂ ಇರುತ್ತದೆ. ಇದರ ಮುಖದ ಮೇಲಿನ ಕೂದಲುಗಳು ತಂತಿಯಂತೆ, ಬಿರುಸಾಗಿ, ಒರಟಾಗಿರುತ್ತದೆ. ಮೂಗು ಉದ್ದವಾಗಿ ರೋಮನ್ ಮೂಗಿನಂತೆ ಇರುತ್ತದೆ. ಮೂಗಿನ ಮೇಲಿನ ಭಾಗವು ಬಹು ಗಟ್ಟಿಯಾಗಿರುತ್ತದೆ. ಇವು ಎತ್ತರದಲ್ಲಿ ಕಡಮೆ ಇರುತ್ತವೆ. ಉದ್ದದಲ್ಲಿ ಹೆಚ್ಚಾಗಿದ್ದು, ಬೀಸಾದ ಕುರಿಗಳು ಉಣ್ಣೆ ಉತ್ತಮ ಗುಣವುಳ್ಳದ್ದು ; 4 ಅಂಗುಲ ಉದ್ದವಾಗಿ ಮೈಮೇ

ಲೆಲ್ಲ ಒಂದೇ ಸಮನಾಗಿ ಬೆಳೆದುಕೊಂಡಿರುತ್ತದೆ. ಸಾಮಾನ್ಯವಾಗಿ ಈ ಕುರಿಗಳ ಉಣ್ಣೆಯನ್ನು ಟ್ವೀಡ್ ಮತ್ತು ಶೇವಿಯಟ್ ಉಣ್ಣೆಬಟ್ಟೆಗಳನ್ನು ತಯಾರಿಸುವುದರಲ್ಲಿ ಉಪಯೋಗಿಸುತ್ತಾರೆ. ಈ ಕುರಿಗಳ ಉಣ್ಣೆಯಲ್ಲಿ 'ಕೆಂಪ' ಸ್ವಲ್ಪ ಪ್ರಮಾಣದಲ್ಲಿ ಸೇರಿಕೊಂಡಿರುತ್ತದೆ (ಕೆಂಪ್ ಅಂದರೆ ಉಣ್ಣೆಯ ಎಳೆಗಳ ಒಳಭಾಗವು ಪೊಳ್ಳಾಗಿರುವಿಕೆ). ಇವರ ಮಾಂಸವು ರಸವತ್ತಾಗಿ ಬಹಳ ರುಚಿಕರವಾಗಿರುತ್ತದೆ. ಈ ಕುರಿಗಳನ್ನು ಸೌತ್ ಡೌನ್ ಮತ್ತು ಸಫ್ಫೋಕ್ ಕುರಿಗಳೊಂದಿಗೆ ಜೊತೆಗೂಡಿಸಿ ಉತ್ತಮ ಮಾಂಸಕ್ಕಾಗಿ ಹೆಸರುವಾಸಿಯಾದ ಮಿಶ್ರತಳಿ ಉತ್ಪಾದಿಸುವುದಕ್ಕಾಗಿ ಹೆಚ್ಚಾಗಿ ಉಪಯೋಗಿಸುತ್ತಾರೆ. ಕುರಿಗಳು ಹೆಚ್ಚು ಹಾಲು ಕೊಡುತ್ತವೆ. ಇವುಗಳನ್ನು ಪರ್ವತದ ಮೇಲಿನ ಹುಲ್ಲುಗಾವಲುಗಳಲ್ಲಿ ಮೇಯಿಸುತ್ತಾರೆ. ಬಿರುಗಾಳಿ ಬೀಸುವ ಕಾಲದಲ್ಲಿ ಮತ್ತು ಚಳಿಗಾಲದಲ್ಲಿ ಬೆಟ್ಟದ ಮೇಲೆ ಮೇಯಲು ಬಿಡದೆ, ಬೆಟ್ಟದ ಕೆಳಗಿನ ತಪ್ಪಲು ಪ್ರದೇಶಗಳಲ್ಲಿಟ್ಟು ಅವುಗಳಿಗೆ ಒಣಮೇವು ಕೊಟ್ಟು ಸಾಕುತ್ತಾರೆ. ಕುರಿಗಳು 300 ಪೌಂಡು ತೂಕವಿರುತ್ತವೆ. ಈ ಕುರಿಗಳು ಹೆಚ್ಚಾಗಿ ಅಮೇರಿಕಾ ಮತ್ತು ಕೆನಡಾ ದೇಶಗಳಲ್ಲಿ ಹಂಚಿ ಹೋಗಿ ಅಲ್ಲಿ ಬಹಳ ಜನಪ್ರಿಯವಾಗಿವೆ.

5) **ಹರ್ಡ್‌ವಿಕ್ ಕುರಿಗಳು :** ಇವು ಬಹಳ ಸಣ್ಣ ಆಕಾರದ ಕುರಿಗಳು. ಬ್ರಿಟಿಷ್ ಕುರಿಗಳಲ್ಲಿಯೇ ಇವು ಅತ್ಯಂತ ಗಟ್ಟಿಯಾದ ಸ್ವಭಾವದ ಕುರಿಗಳು, ಟಗರುಗಳಿಗೆ ಮಾತ್ರ ಕೊಂಬುಗಳಿರುತ್ತವೆ; ಕುರಿಗಳಿಗೆ ಇರುವುದಿಲ್ಲ. ಕುರಿಗಳ ಮುಖ ಮತ್ತು ಕಾಲುಗಳು ನೀಲಿ ಛಾಯೆಯಿಂದ ಕೂಡಿದ ಬೂದಿ ಮಿಶ್ರಿತ ಬಣ್ಣದಿಂದ ಕೂಡಿರುತ್ತವೆ. ಕುರಿಗಳು ಹೇಗೆ ಬೆಳೆಯುತ್ತ ಹೋಗುತ್ತವೆಯೋ ಹಾಗೆ ಅವುಗಳು ಬಿಳಿಯ ಬಣ್ಣಕ್ಕೆ ತಿರುಗುತ್ತ ಬರುತ್ತವೆ. 3 ಪೌಂಡು ಉಣ್ಣೆಯನ್ನು ಕೊಡುತ್ತವೆ. ಇವುಗಳ ಮಾಂಸವು ಬಹಳ ಉತ್ತಮವಾದ್ದಾಗಿದೆ. ಇವು ಕಂಬರ್‌ಲ್ಯಾಂಡ್, ಲಾಂಕ್‌ಶೈರ್‌ಗಳಲ್ಲಿಯ ಬೆಟ್ಟದ ಪ್ರದೇಶಗಳಲ್ಲಿಯ ಕುರಿಗಳು. ಇತ್ತೀಚಿಗೆ ಇವುಗಳ ಸಂಖ್ಯೆಯು ಕಡಮೆಯಾಗಿದೆ.

6) **ವೇಲ್ಸ್ ಬೆಟ್ಟದ ಕುರಿಗಳು :** ಇವು ವೇಲ್ಸ್ ಜಿಲ್ಲೆಯ ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿಯ ಅತಿ ಸಣ್ಣ ಆಕಾರದ ಕುರಿಗಳು. ಟಗರುಗಳು 80 ಪೌಂಡು ತೂಕವಿರುತ್ತವೆ. ಟಗರುಗಳಿಗೆ ಮಾತ್ರ ಕೊಂಬುಗಳಿರುತ್ತವೆ. ಮುಖವು ಬಿಳಿಯ ಬಣ್ಣದಿಂದ ಕೂಡಿರುತ್ತದೆ ಅಥವಾ ಕಂದುಬಣ್ಣದ ಛಾಯೆಯಿಂದ ಮಿಶ್ರಿತವಾಗಿರುತ್ತದೆ. ಉಣ್ಣೆಯು ಮೈಮೇಲೆ ಸಣ್ಣದಾಗಿ ಬೆಳೆದಿರುತ್ತದೆ. ಒಂದೇ ಸಮನಾಗಿ ಬೆಳೆದಿರುವುದಿಲ್ಲ. ಒಂದು ಕುರಿಯು $2\frac{1}{2}$ ಪೌಂಡಿನಷ್ಟು ಉಣ್ಣೆಯನ್ನು ಕೊಡುತ್ತದೆ. ಇವುಗಳ ಮಾಂಸವು ಗುಣದಲ್ಲಿ ಸೌತ್‌ಡೌನ್ ಮತ್ತು ಸ್ಕಾಟ್ ಬೆಟ್ಟದ ಕುರಿಗಳ ಮಾಂಸ

ದಷ್ಟು ಉತ್ತಮವಾಗಿರುತ್ತದೆ. ಸ್ವಾಭಾವಿಕವಾಗಿ ಇವುಗಳು ಬಹಳ ಗಟ್ಟಿಯಾದ ಜಾತಿಯ ಕುರಿಗಳು.

7) ಎಕ್ಸ್‌ಮೋರ್ ಅಥವಾ ಹಾರನ್ ಅಥವಾ ಫೋಲಾಕ್ ಕುರಿಗಳು : ವೇಲ್ಸ್‌ನಲ್ಲಿ ಸಾಮರ್‌ಸೆಟ್ ಪ್ರದೇಶಗಳಲ್ಲಿಯ ಕುರಿಗಳಿವು. ಇವು ಅಲ್ಲಿಯ ಬಹಳ ಹಳೇ ಕುರಿಗಳಾದ ಮೆಂಡಿಸ್ ಕುರಿಗಳ ಉಪಶಾಖೆಗಳು ಎಂದು ಹೇಳಲಾಗಿದೆ. ಇವು ಬಹಳ ಸಣ್ಣ ಆಕಾರದ ಕುರಿಗಳು. ಆದರೆ ವೇಲ್ಸ್ ಬೆಟ್ಟದಲ್ಲಿಯ ಕುರಿಗಳಷ್ಟು ಸಣ್ಣವಲ್ಲ. ಟಗರು ಹಾಗೂ ಕುರಿಗಳೆರಡಕ್ಕೂ ಕೊಂಬುಗಳಿರುತ್ತವೆ. ಮುಖ ಮತ್ತು ಕಾಲುಗಳು ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಮೂಗು ಕಪ್ಪುಬಣ್ಣದ್ದಾಗಿರುತ್ತದೆ. ಇವು $4\frac{1}{2}$ ಪೌಂಡಿನಷ್ಟು ಉಣ್ಣೆಯನ್ನು ಕೊಡುತ್ತವೆ. ಮಾಂಸವು ಉತ್ತಮದ್ದಾಗಿರುತ್ತದೆ.

ಪರ್ವತ ಸೀಮೆಯ ಕುರಿಗಳ ಉಣ್ಣೆಯ ನೂಲುವ ಗುಣಗಳು

ಕುರಿಗಳ ಉಣ್ಣೆಯ ನೇಯ್ಗೆಯ ನೂಲಿನ ಗುಣವು ಅದರ ತಂತುವಿನ ವ್ಯಾಸವನ್ನು ಅವ ಲಂಬಿಸಿರುತ್ತದೆ. ಈ ತಂತುವಿನ ವ್ಯಾಸವು ಲಿಂಕನ್ ಜಾತಿಯ ಕುರಿಗಳಲ್ಲಿ 1/400 ಅಂಗು ಲದಿಂದ ಹಿಡಿದು ಉತ್ತಮ ಮೆರಿನೋ ಜಾತಿಯ ಕುರಿಯ ತಂತುವಿನ ವ್ಯಾಸ 1/2000 ಅಂಗುಲದವರೆವಿಗೂ ಇರುತ್ತವೆ. ಉತ್ತಮ ತರಗತಿಯ ಉಣ್ಣೆ ಉದ್ದದಲ್ಲಿ ಸಣ್ಣವಿದ್ದು $1\frac{1}{2}$--5 ಅಂಗುಲದವರೆವಿಗೆ ಇದ್ದು ಬಹಳ ಮೃದುವಾಗಿರುತ್ತದೆ. ಉದ್ದ ಹೆಚ್ಚಿದಂತೆಲ್ಲ ಅದರ ನಯ ಮತ್ತು ಹುರಿಕಟ್ಟು ಕಡಮೆಯಾಗುತ್ತದೆ. 256 ಗಜದಷ್ಟು ಉದ್ದದ ಹಿಂಜಿ ತೆಗೆದ ಉಣ್ಣೆಯ ನೂಲಿಗೆ ಅಥವಾ 560 ಗಜದಷ್ಟು ಉದ್ದದ ಹಣಿಗೆಯಾಡಿಸಿದ ಉಣ್ಣೆಯ ನೂಲಿಗೆ ಒಂದು ಲಡಿ ಎನ್ನುತ್ತಾರೆ. ಒಂದು ಪೌಂಡು ಉಣ್ಣೆಯಿಂದ ಇಂಥ ಎಷ್ಟು ಉಣ್ಣೆಯ ನೂಲಿನ ಲಡಿಗಳಾಗುತ್ತವೆಯೋ ಅದರ ಮೇಲೆ ಆ ಉಣ್ಣೆಯು ಎಷ್ಟು ಕೌಂಟಿನದು ಅಥವಾ ಅದರ ಉಣ್ಣೆಯ ನೂಲಿನ ಪ್ರಮಾಣದ ಯೋಗ್ಯತೆಯನ್ನು ಗೊತ್ತುಪಡಿಸಲಾಗುವುದು. ಉದಾಹರಣೆಗಾಗಿ 256 ಗಜದ ಪ್ರತಿಯೊಂದು ಉಣ್ಣೆಯ ನೂಲಿನ ಲಡಿಗಳು ಒಂದು ಪೌಂಡು ಉಣ್ಣೆಗೆ ಸಮಾನವಾದರೆ ಆಗ ಆ ಉಣ್ಣೆಯ ನೂಲು 10 ಕೌಂಟಿನ 10's ದೆಂದು ಪರಿಗಣಿಸಲಾಗುತ್ತವೆ. ಈ ಲೆಕ್ಕಾಚಾರದ ಪ್ರಕಾರ ಮೆರಿನೋ ಜಾತಿಯ ಕುರಿಗಳ ಉಣ್ಣೆ 60 ರಿಂದ 80 ಕೌಂಟು ಇರುವುದು. ಮಧ್ಯಮ ತರಗತಿಯ ಉಣ್ಣೆ 44 ರಿಂದ 58 ಕೌಂಟು ಇರುತ್ತದೆ ಎಂದು ಹೇಳಲಾಗಿದೆ.

1)	ಲಿಂಕನ್ ಜಾತಿಯ ಕುರಿಗಳು	—	36	ಕೌಂಟುಗಳು
2)	ಇಂಗ್ಲಿಷ್ ಲೈಸಿಸ್ಟರ್ ಕುರಿಗಳು	—	40	,,
3)	ಬಾರ್ಡರ್ ಲೈಸಿಸ್ಟರ್	—	44	,,
4)	ರೋಮ್ನಿಮಾರ್ಶ	—	46	,,

5)	ಮಿಶ್ರತಳಿ (ಮಧ್ಯಮ ತರಗತಿ)	—	50	ಕೌಂಟುಗಳು
6)	'' (ಉತ್ತಮ ತರಗತಿ)	—	56	''
7)	'' (ಅತ್ಯುತ್ತಮ ತರಗತಿ)	—	58	''
8)	ಮೆರಿನೋ (ಕಡಮೆ ತರಗತಿ)	—	60	''
9)	'' (ಮಧ್ಯಮ ತರಗತಿ)	—	64	''
10)	'' (ಉತ್ತಮ ತರಗತಿ)	—	70	''
11)	'' (ಅತ್ಯುತ್ತಮ ತರಗತಿ)	—	74	''
12)	'' (ಹೆಚ್ಚು ಅತ್ಯುತ್ತಮ ತರಗತಿ)	—	80	''

ಅಧ್ಯಾಯ 3

ಭಾರತದ ಕುರಿಗಳು

ಭಾರತದಲ್ಲಿ ಸುಮಾರು 4 ಕೋಟಿ ಕುರಿಗಳಿವೆ. ಸುಮಾರು 7 ಕೋಟಿ ರೂಪಾಯಿಗಳಷ್ಟು ಉಣ್ಣೆ ಉತ್ಪಾದನೆಯಾಗುತ್ತದೆ. ನಮ್ಮಲ್ಲಿಯ ಕುರಿಗಳು ಸಂಖ್ಯೆಯಲ್ಲಿ ಅಧಿಕವೇ ಹೊರತು ಉತ್ಪಾದನೆಯಲ್ಲಿ ಅಲ್ಲ. ಆಸ್ಟ್ರೇಲಿಯಾದ ಮೆರಿನೋ ಜಾತಿಯ ಕುರಿ ಉತ್ತಮ ದರ್ಜೆಯ ಉಣ್ಣೆಯನ್ನು ಒಂದು ವರ್ಷದಲ್ಲಿ 20 ರಿಂದ 30 ಪೌಂಡು ಉತ್ಪಾದಿಸಿದರೆ, ನಮ್ಮಲ್ಲಿಯ ಕುರಿಗಳು ಕೂದಲುಗಳಿಂದ ಕೂಡಿದ ಬಹಳ ಕಡಮೆ ದರ್ಜೆಯ ಒರಟು ಉಣ್ಣೆಯನ್ನು ಒಂದು ಅಥವಾ ಎರಡು ಪೌಂಡಿನಷ್ಟನ್ನು ಒಂದು ವರ್ಷದಲ್ಲಿ ಕೊಡುತ್ತವೆ. ಇಂಥ ಉಣ್ಣೆಯಿಂದ ಸಾಮಾನ್ಯವಾಗಿ ಜನರು ಬೇಡುವಂತಹ ನಯವಾದ ಉಣ್ಣೆಯ ಬಟ್ಟೆಗಳು ತಯಾರಾಗದೇ ಇರುವುದರಿಂದ ಪರ ದೇಶಗಳಿಂದ ಉತ್ತಮವಾದ ನಯವಾದ ಉಣ್ಣೆಯನ್ನು ಕೊಳ್ಳುವುದು ಅಗತ್ಯವಾಗಿದೆ. ಹೀಗಾಗಿ ಪರದೇಶಗಳ ಉಣ್ಣೆಗಾಗಿ ಲಕ್ಷಾಂತರ ರೂಪಾಯಿಗಳು ವರ್ಷವೂ ತಪ್ಪದೇ ಹರಿದು ಹೊರಗೆಹೋಗುತ್ತಿದೆ. ಆಸ್ಟ್ರೇಲಿಯಾದ ಟಗರು 150 ರಿಂದ 250 ಪೌಂಡು ತೂಕವಿರುತ್ತವೆ. ಅಲ್ಲಿಯ ಕುರಿ 120 ರಿಂದ 175 ಪೌಂಡು ತೂಗುತ್ತವೆ. ನಮ್ಮಲ್ಲಿಯ ಟಗರು 60 ರಿಂದ 80 ಪೌಂಡು ಮತ್ತು ಕುರಿ 40 ರಿಂದ 60 ಪೌಂಡು ಭಾರವಿರುತ್ತವೆ.

ಭಾರತಕ್ಕೆ ಕುರಿಗಳ ಸಂಖ್ಯೆಯಲ್ಲಿ 5ನೇ ಸ್ಥಾನವಿದೆ. ನಮ್ಮಲ್ಲಿಯ ಕುರಿಗಳನ್ನು ಮುಖ್ಯವಾಗಿ ಉತ್ತಮ ತರಗತಿಯ ಉಣ್ಣೆಯ ಕುರಿಗಳು, ಮಧ್ಯಮ ತರಗತಿಯ ಉಣ್ಣೆಯ ಕುರಿಗಳು ಮತ್ತು ಕನಿಷ್ಠ ದರ್ಜೆಯ ಉಣ್ಣೆಯ ಕುರಿಗಳು ಎಂದು ಮೂರು ಪ್ರಕಾರವಾಗಿ ವಿಂಗಡಿಸಬಹುದು. ಈ ಕುರಿಗಳು ವಾಸಿಸುವ ಪ್ರದೇಶಗಳ ಮೇಲಿಂದ ಭೌಗೋಲಿಕವಾಗಿ ಇವುಗಳನ್ನು ಹಿಮಾಲಯಪ್ರದೇಶದ, ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಕುರಿಗಳೆಂದು ಕರೆಯಬಹುದು.

ಕುರಿಗಳು ಹೆಚ್ಚು ಮಳೆ ಬೀಳುವ ಮಲೆನಾಡಿನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯು ಲಾರವು. ಇವುಗಳು ಸಮಶೀತೋಷ್ಣ ಮತ್ತು ಒಣಹವೆ ಪ್ರದೇಶದಲ್ಲಿ 20/ ರಿಂದ 30/ ಅಂಗುಲ ಮಳೆಬೀಳುವ ಮತ್ತು ಗುಡ್ಡಗಾಡುಗಳ ಪ್ರದೇಶಗಳಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತವೆ. ಸರಾಸರಿ 20"–40" ಮಳೆಬೀಳುವ ಕುರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಹೆಚ್ಚು ಉಣ್ಣೆಯನ್ನು ಉತ್ಪಾದಿಸುವ ಕುರಿಗಳು ಸಾಮಾನ್ಯವಾಗಿ ಉತ್ತರ ಭಾರತದ ಒಣಹವೆಯ ಬಯಲು ಪ್ರದೇಶಗಳಾದ ರಾಜಸ್ಥಾನ, ಕಚ್ಛ್, ಗುಜರಾತ್‌ಗಳನ್ನೊಳಗೊಂಡಿರುವ ಜೊರಿಯಾ ವಿಭಾಗಗಳಲ್ಲಿ ಉಣ್ಣೆಯನ್ನು ಹೆಚ್ಚಾಗಿ ಕೊಡುವ ಕುರಿಗಳು ಕೇಂದ್ರೀಕೃತವಾಗಿವೆ. ದಕ್ಷಿಣ ಭಾರತದಲ್ಲಿ ಕುರಿಗಳ ಹಿಂಡುಗಳು ದೊಡ್ಡ ಸಂಖ್ಯೆಯಲ್ಲಿ ಆಂಧ್ರಪ್ರದೇಶ. ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿವೆ. ಆದರೆ ಇವು ಉತ್ತಮ ಉಣ್ಣೆಯ ಕುರಿಗಳಲ್ಲಿ ಕೇವಲ ಮಾಂಸ ಮತ್ತು ಒರಟಾದ ಕೂದಲಿನಿಂದ ಕೂಡಿದ ಉಣ್ಣೆಗೆ ಹೆಸರಾಗಿವೆ.

ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಸುತ್ತಮುತ್ತಲಿನ ಭಾಗಗಳು ಮತ್ತು ಗಢವಾಲ್ ಗುಡ್ಡಗಾಡು ಪ್ರದೇಶಗಳು ಉತ್ತಮ ಉಣ್ಣೆಯನ್ನು ಉತ್ಪಾದಿಸುವ ಕುರಿಗಳಿಗೆ ಪ್ರಕೃತಿಸಿದ್ಧವಾಗಿ ಬಹಳ ಅನುಕೂಲಕರ ಸ್ಥಳಗಳಾಗಿವೆ. ಇಲ್ಲಿಯ ಜನರು ಉಣ್ಣೆಯ ಕೈಗಾರಿಕೆಯನ್ನು ಬಹಳ ಹಿಂದಿನ ಕಾಲದಿಂದ ವಂಶಪರಂಪರೆಯಾಗಿ ಸಾಗಿಸಿಕೊಂಡು ಬಂದಿದ್ದಾರೆ. ಭಾರತದಲ್ಲಿ ಉಣ್ಣೆ ಉತ್ಪತ್ತಿಯಾಗುವ ಪ್ರದೇಶಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು:

1) ಹಿಮಾಲಯ ವಲಯ–ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಕೆಲ ಭಾಗಗಳು
2) ಪಶ್ಚಿಮ ವಲಯ — ಗುಜರಾತ್, ಕಚ್ಛ್, ರಾಜಸ್ಥಾನಗಳು
3) ದಕ್ಷಿಣ ವಲಯ — ಕರ್ನಾಟಕ, ಆಂಧ್ರ ಪ್ರದೇಶ, ತಮಿಳನಾಡು ಮತ್ತು ಮಧ್ಯಪ್ರ ದೇಶದ ಕೆಲವು ಭಾಗಗಳು.

1) ಹಿಮಾಲಯ ವಲಯದ ಕುರಿಗಳು : ಕಾಶ್ಮೀರದಿಂದ ಉತ್ತರ ಪ್ರದೇಶದ ಗಢವಾಲ್ ಜಿಲ್ಲೆಯವರೆಗಿನ ಪ್ರದೇಶವು ಕುರಿಗಳ ಬೆಳವಣಿಗೆಗೆ ಸಾಕಣೆಗೆ ಬಹಳ ಅನುಕೂಲವಾದ ಪ್ರದೇಶಗಳಾಗಿವೆ. ಇಲ್ಲಿಯ ಬಯಲು ಪ್ರದೇಶದಿಂದ ಮೇಲಕ್ಕೆ ಏರುತ್ತ ಏರುತ್ತ ಅತಿ ಎತ್ತರಕ್ಕೆ ಹೋಗಿರುವ ಅತಿ ಎತ್ತರವಾದ, ಕಡಿದಾದ, ಪರ್ವತ ಪ್ರದೇಶಗಳಲ್ಲಿಯ ವಿಶಾಲವಾದ ಬಯಲು ಪ್ರದೇಶದಲ್ಲಿ ವರ್ಷವಿಡೀಕಾಲ ಕುರಿಗಳು ಮೇಯಲು ಅನುಕೂಲವಿದೆ. ಇಲ್ಲಿಯ ಕುರುಬರು ಚಳಿಗಾಲದಲ್ಲಿ ತಮ್ಮ ಹಿಂಡನ್ನು

ಪರ್ವತದ ತಪ್ಪಲು ಪ್ರದೇಶಗಳಲ್ಲಿ ಮೇಯಿಸುತ್ತಾರೆ. ಮಳೆಗಾಲ ಮತ್ತು ಹುಲ್ಲು ಬದಲಾಗುತ್ತ ಬಂದಂತೆ ತಮ್ಮ ಕುರಿಹಿಂಡುಗಳೊಡನೆ ಹಂತ ಹಂತವಾಗಿ ಪರ್ವತದ ಮೇಲಕ್ಕೆ ಮೇಯಿಸುತ್ತ ಹತ್ತುತ್ತ ಹೋಗುವರು. ಬೇಸಿಗೆಯ ಕಾಲ ಬಂದಾಗ ಅವರು ತಮ್ಮ ಹಿಂಡಿನೊಡನೆ ಪರ್ವತದ ಮೇಲೆ 8000–12000 ಅಡಿಗಳ ಎತ್ತರಕ್ಕೆ ಹೋಗಿ ಅಲ್ಲಿ ಕುರಿಗಳನ್ನು ಮೇಯಿಸುತ್ತಾರೆ. ಹಸರು ಹುಲ್ಲಿನಿಂದ ಕೂಡಿ ಹಾಸಿದ ಈ ಎತ್ತರ ಪ್ರದೇಶ ಕುರಿಗಳಿಗೆ ನಂದನವನವೆನಿಸಿದೆ. ಇಲ್ಲಿಯ ನಿತ್ಯನೂತನ ಪ್ರಕೃತಿಯ ಸೌಂದರ್ಯವು, ಆಹ್ಲಾದಕರಹವೆ, ರಸಭರಿತವಾದ, ಸ್ವಾದಿಷ್ಟವಾದ ಹಸರು ಹುಲ್ಲು, ಕುರಿಗಳ ಬೆಳವಣಿಗೆಗೆ ಸಹಾಯಕವಾಗಿವೆ. ಇಲ್ಲಿ ಮಳೆ ಕಡಮೆ ಪ್ರಮಾಣದಲ್ಲಿ ಬೀಳುವ ಬೆಟ್ಟದ ಇಳಿಜಾರಾದ ಸಮತಟ್ಟಾದ ಪ್ರದೇಶಗಳಲ್ಲಿ ಕುರಿಗಳನ್ನು ಮೇಯಿಸುತ್ತಾರೆ. ಇಲ್ಲಿಯ ಕುರಿಗಳು ಉತ್ತಮ ದರ್ಜೆಯ ಉಣ್ಣೆಯಿಂದ ಕೂಡಿರುತ್ತವೆ. ಗಢವಾಲ್ ಜಿಲ್ಲೆಯ ಪೂರ್ವಭಾಗದಲ್ಲಿಯ ಕುರುಬರು ತಮ್ಮ ಕುರಿಗಳನ್ನು ಇಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಿ ಮೇಯಿಸುವುದಿಲ್ಲ. ಇವರು ಕಡಮೆ ಎತ್ತರ ಪ್ರದೇಶಗಳಲ್ಲಿ ಮೇಯಿಸುವುದರಿಂದ ಈ ಭಾಗದಲ್ಲಿ ಹವೆ ಹೆಚ್ಚಾದ ಆರ್ದ್ರತೆಯಿಂದ (ಉಷ್ಣತೆಯಿಂದ) ಕೂಡಿರುವುದರಿಂದ ಕುರಿಗಳು ಉರುಟಾದ ಉಣ್ಣೆಯನ್ನು ಉತ್ಪಾದಿಸುತ್ತವೆ. ಕಾಂಗ್ರಾ, ಚಾಮ, ಕುಲು ಮತ್ತು ಕಾಶ್ಮೀರ ಕಣಿವೆಗಳ ಪ್ರದೇಶಗಳಲ್ಲಿರುವ ಕುರಿಗಳು ಇವುಗಳಿಗಿಂತ ಉತ್ತಮ ಉಣ್ಣೆಯನ್ನು ಕೊಡುತ್ತವೆ.

ಕಾಶ್ಮೀರದ ಕುರಿಗಳಲ್ಲಿ ಪೂಂಚ್, ಕರ್ನಾಹ ಮತ್ತು ಕಾಶ್ಮೀರ ಕೊಳ್ಳದ ಕುರಿಗಳು ಎಂದು ಮೂರು ಜಾತಿಗಳಿವೆ. ಇವುಗಳಲ್ಲಿ ಮೊದಲಿನ ಎರಡು ಜಾತಿಯ ಕುರಿಗಳು ಮೃದುವಾದ, ನಯವಾದ ಮತ್ತು ದಟ್ಟವಾದ ಉಣ್ಣೆಯಿಂದ ಕೂಡಿರುತ್ತವೆ. ಕಾಶ್ಮೀರ ಕೊಳ್ಳದ ಕುರಿಗಳು ಆಕಾರದಲ್ಲಿ ಸಣ್ಣವು; ಉತ್ತಮ ಒರಟಾದ ಮಿಶ್ರಬಣ್ಣದ ಉಣ್ಣೆಯಿಂದ ಕೂಡಿರುತ್ತವೆ. ಇವುಗಳಲ್ಲದೆ ಹಿಮಾಲಯದ ತಪ್ಪಲ ಪ್ರದೇಶದಲ್ಲಿಯೇ ಹುಟ್ಟಿ ಬೆಳೆದ ಗಡ್ಡಿ ಮತ್ತು ಭಾಕರ್‌ವಾಲ್ ಜಾತಿಯ ಕುರಿಗಳು ಕಾಶ್ಮೀರ, ಕಾಂಗ್ರ ಮತ್ತು ಕುಲು ಪ್ರದೇಶಗಳಿಗೆ ವಲಸೆಹೋಗಿ ಅಲ್ಲಿಯೇ ನೆಲಸಿವೆ. ಇವು ಎತ್ತರವಾದ ವಿಶಾಲ ಪ್ರದೇಶಗಳಲ್ಲಿ ಮೇಯುವುದರಿಂದ ಉತ್ತಮ ತುಪ್ಪಳವನ್ನು ಹೊಂದಿರುತ್ತವೆ.

ಹಿಮಾಚಲ ಪ್ರದೇಶದ ಮೇಸೊ ಜಿಲ್ಲೆಯಲ್ಲಿ ಹುಟ್ಟಿದ ರಾಂಪುರ್ ಬುಶಿಯರ್ ಜಾತಿಯ ಕುರಿಗಳು ಬೇಸಿಗೆ ಮತ್ತು ಚಳಿಗಾಲಕ್ಕೆ ಪರ್ವತದ ತಳಭಾಗ (ತಪ್ಪಲ) ಪ್ರದೇಶಗಳಿಂದ ಟಿಬೇಟ್ ಗಡಿಯುವರೆಗೆ ಮೇಯಲು ಹೋಗುತ್ತವೆ. ಹೀಗೆ ಹೋಗುವ ಅವಧಿಯಲ್ಲಿ ಅವು ದಾರಿಯಲ್ಲಿ ಜಮುನಾ, ಟಾಂಗ್ಸ್, ಸತ್ಲಜ್ ಕಣಿವೆಗಳಲ್ಲಿ ಕೆಲವು ಕಾಲ ವಸತಿಮಾಡಿ ಮತ್ತೆ ಮುಂದೆ ಪ್ರಯಾಣ ಬೆಳೆಸುತ್ತವೆ. ಹೀಗಾಗಿ ಈ ಕುರಿಗಳಲ್ಲಿ ಹೆಚ್ಚು

ಮಿಶ್ರಣ ಕಂಡುಬರುತ್ತದೆ. ಇವುಗಳ ಉಣ್ಣೆಯು ಕಂದುಬಣ್ಣದ್ದಾಗಿರುತ್ತದೆ. ಇದರ ತುಪ್ಪಟವು ಮೃದುವಾಗಿರುತ್ತದೆ. ಇವುಗಳಲ್ಲಿಯ ಆರಿಸಿದ ಉತ್ತಮ ಉಣ್ಣೆಯು ಬ್ರಿಟನ್ನಿನ ಡೌನ್ ಜಾತಿಯ ಕುರಿಗಳ ಉಣ್ಣೆಗೆ ಸರಿಹೋಲುತ್ತವೆ.

2) ಪಶ್ಚಿಮ ವಲಯದ ಕುರಿಗಳು : ಉದ್ದ ಕಿವಿಗಳ ಲೋಹಿ ಮತ್ತು ಕಂದು ಕಪಿಲ ವರ್ಣದ ತಲೆಯ ಬಿಕನೇರಿ ಜಾತಿಯ ಕುರಿಗಳು ರಾಜಾಸ್ತಾನದಲ್ಲಿ ಕಂಡು ಬರುತ್ತವೆ. ಇವು ಮಿಶ್ರಗೊಂಡು ಅನೇಕ ಮಿಶ್ರ ತಳಿಗಳು ಹುಟ್ಟಿಕೊಂಡಿವೆ. ಒಂದು ಕಾಲಕ್ಕೆ ಲೋಹಿ ಕುರಿಗಳು ಭಾರತದಲ್ಲಿಯೇ ಅತಿದೊಡ್ಡ ಕುರಿಗಳೆಂದು ಪರಿಗಣಿಸಲ್ಪಟ್ಟಿದ್ದವು. ಇಂದು ಪಂಜಾಬಿನಲ್ಲಿ ಇನ್ನು ಅಲ್ಲಲ್ಲಿ ಕೆಲವು ಕಾಣಬರುತ್ತವೆ. ಇವು ಉದ್ದವಾದ ಒರಟಾದ ಉಣ್ಣೆಯನ್ನು ಕೊಡುತ್ತವೆ. ಇವು ಏಷಿಯಾದಲ್ಲಿಯೇ ಉತ್ತಮ ಮಾಂಸಕ್ಕೂ, ಹಾಲಿಗೂ ಹೆಸರಾದ ಕುರಿಗಳು.

ರಾಜಾಸ್ತಾನದ ಚೋಕ್ಲಾ ಜಾತಿಯ ಕುರಿಗಳು ರತ್ನಗಂಬಳಿ ಹಾಗೂ ಹಾಸುಗಂಬಳಿಗಳ ಉಣ್ಣೆಗೆ ಹೆಸರ್ವಾದ ಕುರಿಗಳು. ಇವುಗಳನ್ನು ಹೆಚ್ಚಾಗಿ ಚೂರೂ ಝುನ್‌ಝುನು ಮತ್ತು ಸೀಕಾರ್ ಜಿಲ್ಲೆಗಳಲ್ಲಿ ಸಾಕುತ್ತಾರೆ. ಇವು ಆಕಾರದಲ್ಲಿ ಸಣ್ಣವು. ಹೆಣ್ಣು ಕುರಿಗಳು 50–60 ಪೌಂಡು ಭಾರವಿರುತ್ತವೆ. ಟಗರುಗಳು 80 ರಿಂದ 90 ಪೌಂಡು ತೂಕವಿರುತ್ತವೆ. ಇವುಗಳ ಮುಖದ ಮೇಲೆ ಕಂದು ಮತ್ತು ಕೆಂಪು ಬಣ್ಣದ ಮಿಶ್ರಣದಿಂದ ಕೂಡಿದ ಮಚ್ಚೆಗಳು (ಚುಕ್ಕೆಗಳು) ಎದ್ದು ಕಾಣುತ್ತವೆ. ಒಂದು ವರ್ಷದಲ್ಲಿ 2 ರಿಂದ 4 ಪೌಂಡು ಉಣ್ಣೆಯನ್ನು ಕೊಡುತ್ತವೆ. ಈ ಚೋಕ್ಲಾ ಜಾತಿಯ ಕುರಿಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯ ತೀವ್ರವಾಗಿ ಸಾಗಿರುತ್ತದೆ. ಭಾರತದಿಂದ ಒಟ್ಟು ರಫ್ತಾಗುವ ಉಣ್ಣೆಯಲ್ಲಿ ರಾಜಾಸ್ತಾನದಿಂದಲೇ ಮೂರನೆಯ ಒಂದು ಭಾಗದಷ್ಟು ಉಣ್ಣೆಯು ರಫ್ತಾಗುತ್ತದೆ. ಈ ಭಾಗದ ಕುರುಬರು 50 ರಿಂದ 100–150 ಕುರಿಗಳಿರುವ ಹಿಂಡನ್ನು ಕಟ್ಟಿಕೊಂಡು ಪಾಲನೆ ಮಾಡುತ್ತಾರೆ. ಇಲ್ಲಿಯ ಕುರುಬರಿಗೆ ದೊಡ್ಡ ಜಮೀನುದಾರರು ಮತ್ತು ಉಣ್ಣೆಯ ವ್ಯಾಪಾರಸ್ಥರು ಮುಂಗಡವಾಗಿ ಹಣದ ಸಹಾಯಮಾಡುತ್ತಾರೆ. ಈ ರಾಜಾಸ್ತಾನದ ಕುರುಬರು ವರ್ಷದಲ್ಲಿ 5 ತಿಂಗಳು ತಮ್ಮ ಹಿಂಡಿನೊಡನೆ ಉತ್ತರ ಪ್ರದೇಶ, ಮಧ್ಯ ಭಾರತ, ಪಂಜಾಬದ ದೂರದ ನದಿಯ ತೀರಪ್ರದೇಶಗಳಿಗೆ ಹೋಗಿ ಹಿಂಡುಗಳನ್ನು ಮೇಯಿಸುವುದು ಸಾಮಾನ್ಯ ಜೀವನೋಪಾಸನಾ ಪದ್ಧತಿ. ದೇಶದಲ್ಲಿ ಉತ್ಪಾದನೆಯಾಗುವ ಉಣ್ಣೆಯಲ್ಲಿ ಶೇಕಡಾ 45 ರಷ್ಟು ಉಣ್ಣೆಯು ರಾಜಾಸ್ತಾನದಲ್ಲಿಯೇ ಉತ್ಪಾದನೆಯಾಗುತ್ತದೆ. ಜಮಖಾನೆ, ರತ್ನಗಂಬಳಿ, ಹಾಸುಗಂಬಳಿ ತಯಾರಾಗುವುದಕ್ಕೆ ಬೇಕಾದ ಕಚ್ಚಾ ಉಣ್ಣೆಯು ರಾಜಾಸ್ತಾನದಲ್ಲಿ ಸಿಗುತ್ತದೆ. ಕುರಿಸಾಕಣೆಕೆ ಹಾಗೂ

ಮಾರಾಟ ಇವುಗಳ ವಿಷಯವಾಗಿ ಕ್ರಿ. ಶ. 1963 ರಲ್ಲಿ ಒಂದು ಸಂಯೋಜಿತ ಯೋಜನೆ ಪ್ರಾರಂಭವಾದಂದಿನಿಂದ ರಾಜಾಸ್ಥಾನದಲ್ಲಿಯ ಉಣ್ಣೆಯ ಉತ್ಪಾದನೆ ದಿನದಿನಕ್ಕೆ ಅಭಿವೃದ್ಧಿಗೊಂಡು ಕುರಿಸಾಕಾಣಿಕೆ ಮುಂದುವರಿದು ಸಾಗಿದೆ. ಇಂದು ರಾಜಾಸ್ಥಾನದಲ್ಲಿ ಸುಮಾರು 150 ಕುರಿವಿಸ್ತರಣಾ ಕೇಂದ್ರಗಳು ರಾಜ್ಯದ ತುಂಬೆಲ್ಲ ಹಬ್ಬಿಕೊಂಡು ಬೆಳೆದು ಪ್ರಗತಿಪಥದಲ್ಲಿ ಸಾಗಿವೆ.

ಜೈಸಲ್ಮೇರ್, ನಾಗೂರ್ ಮತ್ತು ಬಿಕಾನೇರ್ ಜಿಲ್ಲೆಗಳಲ್ಲಿಯ ಕಲ್ಲು ಮರಳು ಭೂಮಿಯಲ್ಲಿಯ ಕುರಿಗಳನ್ನು ಮಾಗ್ರಾ ಜಾತಿಯ ಕುರಿಗಳೆಂದು ಕರೆಯುತ್ತಾರೆ. ಇವು ಚೋಕ್ಲಾ ಜಾತಿಯ ಕುರಿಗಳಿಂದ ಉತ್ಪನ್ನವಾದ ಕುರಿಗಳು. ಇವು ಮರಳು ಭೂಮಿಯಲ್ಲಿ ಬಹುದೂರದವರೆಗೆ ತಿರುಗಾಡಿ ಮೇಯಲು ಹೋಗುತ್ತವೆ ಮತ್ತು ಅಲ್ಲಿಯ ಬರಗಾಲ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಶಕ್ತಿಸಾಮರ್ಥ್ಯವನ್ನು ಹೊಂದಿರುತ್ತವೆ. ಉದ್ದ ಕಾಲಿನ ಜೋಧ್‌ಪುರ್, ಮಾರ್‌ವಾರ್ ಜಾತಿಯ ಕುರಿಗಳು ಬಹು ಗಟ್ಟಿಮುಟ್ಟಾಗಿದ್ದು ಕಷ್ಟಶ್ರಮವನ್ನು ಸಹಿಸುವ ಶಕ್ತಿಸಾಮರ್ಥ್ಯವನ್ನು ಹೊಂದಿರುತ್ತವೆ. ಇವು 2 ರಿಂದ 4 ಪೌಂಡು ಒರಟಾದ ಬಿಳಿಯ ಉಣ್ಣೆಯನ್ನು ಕೊಡುತ್ತವೆ.

ಶುಷ್ಕ ಹವೆಯ ಮರಗಳಿಂದ ಕೂಡಿದ ಬಯಲು ಪ್ರದೇಶಗಳಾದ ಬನಾಸ್ ಮತ್ತು ಸರಸ್ವತಿಯ ನದಿಯ ತೀರಪ್ರದೇಶಗಳು, ಕಚ್ಛ್ ಹಾಗೂ ಸೌರಾಷ್ಟ್ರದ ಸುತ್ತಮುತ್ತಲಿನ ಪ್ರದೇಶಗಳು ಕುರಿಗಳ ಉತ್ಪಾದನೆಯ ಮುಖ್ಯ ಕೇಂದ್ರಗಳಾಗಿವೆ. ಈ ಭಾಗಗಳಲ್ಲಿ ಕತ್ತರಿಸಿದ ಉಣ್ಣೆಗೆ ಜೋರಿಯಾ ಎಂದು ಕರೆಯುತ್ತಾರೆ. ಈ ಉಣ್ಣೆಯು ಗುಣದಲ್ಲಿ ಬಿಕಾನೇರ್ ಉಣ್ಣೆಗಿಂತ ಎರಡನೆಯ ಸ್ಥಾನ ಗಳಿಸಿಕೊಂಡಿದೆ. ಈ ಪ್ರದೇಶದಲ್ಲಿ ಮೂರು ಜಾತಿಯ ಕುರಿಗಳಿವೆ. ಅವುಗಳೆಂದರೆ :

i) **ಕಚ್ಛದ ಕುರಿಗಳು :** ಇವುಗಳನ್ನು ಗುಜರಾತ್ ಮತ್ತು ಸೌರಾಷ್ಟ್ರಗಳಲ್ಲಿ ದೇಶೀ ಕುರಿಗಳೆಂದು ಕರೆಯುತ್ತಾರೆ. ಇವು ಉತ್ತಮ ಉಣ್ಣೆಯನ್ನು ಕೊಡುತ್ತವೆ. ಇವುಗಳ ತಲೆಯು ಕಂದು ಬಣ್ಣದ್ದಾಗಿರುತ್ತದೆ. ಈ ಕುರಿಗಳ ಉಣ್ಣೆಯನ್ನು ಹೆಚ್ಚಾಗಿ ಸೈನಿಕರಿಗೆ ಬೇಕಾದ ಉಣ್ಣೆಯ ಬಟ್ಟೆಗಳ ತಯಾರಿಕೆಗಳಿಗಾಗಿ ಮತ್ತು ಟ್ವೀಡ್ ಬಟ್ಟೆಗಳ ತಯಾರಿಕೆಗಳಿಗಾಗಿ ಉಪಯೋಗಿಸುತ್ತಾರೆ.

ii) **ನಾಲಿ ಕುರಿಗಳು :** ಕಚ್ಛದ ಪಶ್ಚಿಮದ ನಾಲಿ ಭಾಗದಲ್ಲಿಯ ಕುರಿಗಳು ಭಾರತದಲ್ಲಿಯೇ ಉತ್ತಮ ಕುರಿಗಳೆಂದು ಹೇಳಲಾಗಿದೆ.

iii) **ಮಾರ್‌ವಾಡದ ಕುರಿಗಳು :** ಇವು ಅರವಳಿ ಬೆಟ್ಟದ ದಕ್ಷಿಣ ಭಾಗಗಳಿಂದ ರಾಜಾಸ್ತಾನಕ್ಕೆ ವಲಸೆಬಂದ ಕುರಿಗಳು. ಇವೂ ಸಹ ಉತ್ತಮ ಕುರಿಗಳು. ಇವುಗಳ ಕಾಲುಗಳು ಉದ್ದ, ಮುಖ ಕಪ್ಪು, ಮೂಗು ಉದ್ದವಾಗಿ ಎತ್ತರವಾಗಿರುತ್ತವೆ. ಇವು ಬಿಳಿಯ ಒರಟಾದ ಉಣ್ಣೆಯನ್ನು ಕೊಡುತ್ತವೆ. ಇವು ಲೋಹಿ ಜಾತಿಯ ಕುರಿಗಳಿಂದ ಹುಟ್ಟಿಬಂದ ಕುರಿಗಳು. ಇವುಗಳ ಕಾಲುಗಳೂ ಸಹ ಲೋಹಿ ಕುರಿಗಳ ಕಾಲುಗಳಂತೆ ದೊಡ್ಡವಾಗಿಯೂ, ಹಾಲು ಕೊಡುವುದರಲ್ಲಿಯೂ ಸಹ ಅವುಗಳನ್ನು ಹೋಲುತ್ತವೆ. ಇವುಗಳ ಕಿವಿಗಳು ಲೋಹಿ ಕುರಿಗಳಂತೆ ಉದ್ದವಾಗಿ ಕೆಳಗೆ ಜೋಲುಬಿದ್ದಿರುತ್ತವೆ. ಇವುಗಳನ್ನು ಛನೋತ್‌ರಿ ಅಥವಾ ಸೋನಾದಿ ಕುರಿಗಳೆಂದು ಕರೆಯುತ್ತಾರೆ.

3 ದಕ್ಷಿಣ ವಲಯದ ಕುರಿಗಳು

ವಿಂಧ್ಯ ಪರ್ವತದಿಂದ ನೀಲಗಿರಿಯವರೆಗಿನ ಒಣಹವೆಯ ದಕ್ಷಿಣ ಪ್ರದೇಶದಲ್ಲಿ ಕುರಿಗಳ ಸಂಖ್ಯೆ ಉತ್ತರ ಭಾರತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಭಾಗದ ಕುರಿಗಳನ್ನು ಮುಖ್ಯವಾಗಿ ರಾಜಾಸ್ತಾನದ ಕುರಿಗಳಿಂದ ಹುಟ್ಟಿದ ಆಂಧ್ರ ಪ್ರದೇಶದ ಕುರಿಗಳು, ಕರ್ನಾಟಕ ಪ್ರಾಂತದ ಕುರಿಗಳು ಮತ್ತು ಡೆಕ್ಕನಿ ಕುರಿಗಳೆಂದು ಹೇಳಬಹುದು. ಒಟ್ಟಿನಲ್ಲಿ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ಕುರಿಗಳನ್ನು ಸಹ ಡೆಕ್ಕನಿ ಜಾತಿಯ ಕುರಿಗಳೆಂದು ಕರೆಯುವುದು ವಾಡಿಕೆಯಾಗಿದೆ. ಈ ಭಾಗದ ಕುರಿಗಳ ಉಣ್ಣೆಯು ಬಹಳ ಒರಟಾದ ಮತ್ತು ಕಪ್ಪುಮಿಶ್ರಿತವಾದ ಬೂದಿಬಣ್ಣದಿಂದ ಕೂಡಿರುತ್ತದೆ. ಇವುಗಳ ಮೈಮೇಲೆ ಕೂದಲಿನ ಭಾಗವೇ ಹೆಚ್ಚಾಗಿದ್ದು, ಉಣ್ಣೆಯು ಬಹಳ ಕಡಮೆ ಪ್ರಮಾಣದಲ್ಲಿ ಬೆಳೆದಿರುತ್ತವೆ. ಈ ಕುರಿಗಳು ಆಕಾರದಲ್ಲಿ ಉತ್ತರ ಭಾರತದ ಕುರಿಗಳಿಗಿಂತ ಸಣ್ಣವಾಗಿರುತ್ತವೆ. ಈ ಕುರಿಗಳು ಸರಾಸರಿ ಒಂದು ವರ್ಷಕ್ಕೆ ಒಂದು ಪೌಂಡಿನಷ್ಟು ಉಣ್ಣೆಯನ್ನು ಕೊಡುತ್ತವೆ. ಪೂರ್ವಭಾಗದಲ್ಲಿಯ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳ ಬಯಲು ಪ್ರದೇಶಗಳಲ್ಲಿ ಉಣ್ಣೆಯ ಕುರಿಗಳಿಗಿಂತ ಹೆಚ್ಚಾಗಿ ಆಡನ್ನು ಹೋಲುವಂತಹ ಕುರಿಗಳನ್ನು ಸಾಕುತ್ತಾರೆ. ಇವುಗಳನ್ನು ನೆಲ್ಲೂರು ಮತ್ತು ಯಳಗ ಅಥವಾ ಟೆಂಗೂರಿ ಕುರಿಗಳೆಂದು ಕರೆಯುತ್ತಾರೆ. ಈ ಕುರಿಗಳು ಹೆಚ್ಚಾಗಿ ಉದ್ದವಾದ ಕಾಲುಗಳಿಂದ ಮತ್ತು ತೆಳುವಾದ ದೇಹ ಹಾಗೂ ಕೂದಲಿನಿಂದ ಕೂಡಿರುತ್ತವೆ. ಇಲ್ಲಿಯ ಜನರು ಇವುಗಳನ್ನು ಹೆಚ್ಚಾಗಿ ಮಾಂಸ ಹಾಗೂ ಚರ್ಮಕ್ಕಾಗಿಯೇ ಸಾಕುತ್ತಾರೆ. ತಮಿಳುನಾಡಿನಲ್ಲಿ ಉಣ್ಣೆಯನ್ನು ಕತ್ತರಿಸುವುದು ಅಪರೂಪವೆಂದೇ ಹೇಳಬಹುದು. ಏಕೆಂದರೆ ಅಲ್ಲಿಯ ಕುರಿಗಳ ಮೈಮೇಲೆಲ್ಲ ಆಡಿನ ಮೈಮೇಲೆ ಬೆಳೆದಿರುವಂತೆ ಕೂದಲುಗಳು ಮಾತ್ರ ಬೆಳೆದಿರುತ್ತವೆ; ಉಣ್ಣೆಯು ಬೆಳೆದಿರುವುದಿಲ್ಲ. ದಕ್ಷಿಣ ಭಾಗದಲ್ಲಿ ಎಲ್ಲ ಕಡೆ ಸಾಮಾನ್ಯ

ಹಾಗಿ ಕಂಡುಬರುವ ಕುರಿಗಳೆಂದರೆ ಡೆಕ್ಕನಿ ಜಾತಿಯ ಕಪ್ಪು ಬಣ್ಣದ ಕುರಿಗಳ ಹಿಂಡು. ಇವುಗಳನ್ನು ಕುರುಬರು ಹೆಚ್ಚಾಗಿ ಮಾಂಸಕ್ಕಾಗಿ ಸಾಕುತ್ತಾರೆ. ಈ ಡೆಕ್ಕನಿ ಜಾತಿಯ ಕುರಿಗಳನ್ನು ಕ್ರಮಬದ್ಧವಾಗಿ ಸಂವರ್ಧನಮಾಡಿ ಸರಿಯಾಗಿ ಪಾಲನೆ, ಪೋಷಣೆ ಮಾಡುವುದು ಅವಶ್ಯವಿದೆ.

ಅಧ್ಯಾಯ

ಕರ್ನಾಟಕದ ಕುರಿಗಳು

ಕರ್ನಾಟಕದ ಆದಿವಾಸಿಗಳ ಮುಖ್ಯ ಉಪಜೀವನ ಪಶುಸಂಗೋಪನೆಯಾಗಿತ್ತು. ದನ ಮತ್ತು ಕುರಿ ಹಿಂಡನ್ನು ಮೇಯಿಸುತ್ತ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗಾಡುತ್ತ ಜೀವನವನ್ನು ಸಾಗಿಸುತ್ತಿದ್ದರು. ಈ ಜನಾಂಗದ ಪ್ರಾಥಮಿಕ ಅವಸ್ಥೆಯು ಕುರುಂಬಿತೆಯೇ ಆಗಿತ್ತು ಎಂದು ಪ್ರೊ. ಪಿ. ಟಿ. ಶ್ರೀನಿವಾಸ್ ಐಯ್ಯಂಗಾರ್ ಎಂಬುವರು ಬರೆದಿರುತ್ತಾರೆ. ಈ ಜನರು ಕುರಿಗಳನ್ನು ಸಾಕುತ್ತಿದ್ದರಿಂದ ಇವರಿಗೆ ಕುರು(ಂ)ಬರೆಂದು ಕರೆಯಲಾಯಿತು ಎಂಬುದು ಒಂದು ಸಾಮಾನ್ಯ ಗ್ರಹಿಕೆ. 'ಕುರು' ಎಂದರೆ ಎತ್ತರವೆಂಬ ಒಂದು ಅರ್ಥವಿದೆ. ಇದಕ್ಕನುಸರಿಸಿ ಕುರು(ಂ)ಬನೆಂದರೆ ಎತ್ತರವಾದ ನಾಡಿನಲ್ಲಿ ಗುಡ್ಡಬೆಟ್ಟಗಳಲ್ಲಿ ಇರುವವನೆಂದೂ ಅರ್ಥವಾಗುತ್ತದೆ. ಕುರುಬರು ಮೊದಲು ತಮ್ಮ ಉಪಜೀವನಕ್ಕಾಗಿ ಗುಡ್ಡಬೆಟ್ಟಗಳಲ್ಲಿಯ ಹುಲ್ಲಿನ ಪ್ರದೇಶಗಳಲ್ಲಿ ತಮ್ಮ ಕುರಿಗಳ ಹಿಂಡನ್ನು ಮೇಯಿಸುತ್ತಿದ್ದರು ಎಂಬುದನ್ನು ನೆನೆದುಕೊಂಡರೆ ಈ ಅರ್ಥವು ಅಸಂಭವನೀಯವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಕುರು(ಂ)ಬರಿಗೆ ಪ್ರಾಚೀನ ತಮಿಳು ಕಾವ್ಯಗಳಲ್ಲಿ ಮಲೆಯರು ಎಂದು ವರ್ಣಿಸಿದ್ದಾರೆ. ಆದಕಾರಣ ಕುರು(ಂ)ಬರು, ಮಲೆಯರು ಎಂದರೆ ಗುಡ್ಡನಾಡಿನಲ್ಲಿ ವಾಸವಾಗಿರುವವರು ಎಂಬುದು ಹೆಚ್ಚು ಸಮರ್ಪಕವಾಗಿದೆ.

ಕರ್ನಾಟಕ ರಾಜ್ಯದಲ್ಲಿ 1973 ರಲ್ಲಿ 48 ಲಕ್ಷ ಕುರಿಗಳಿದ್ದ ವರದಿಯಿದೆ. ಇವು ಪಶ್ಚಿಮ ಭಾಗದ ಮಲೆನಾಡು ಪ್ರದೇಶವನ್ನು ಬಿಟ್ಟು ಉಳಿದ ಬೇರೆ 20" ರಿಂದ 25" ಮಳೆಬೀಳುವ ಬಯಲು ಪ್ರದೇಶಗಳಲ್ಲಿವೆ. ಅದರಲ್ಲಿಯೂ ಪೂರ್ವ ಮತ್ತು ಉತ್ತರ ಭಾಗದ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿಕೊಂಡು ಅಧಿಕ ಸಂಖ್ಯೆಯಲ್ಲಿ ವಾಸವಾಗಿರುತ್ತವೆ. ನಮ್ಮ ಆಹಾರದಲ್ಲಿ ಇಂದು ಸಸಾರಜನಕದ ಅಭಾವ ಬಹಳ ಹೆಚ್ಚಾಗಿದೆ. ಇದನ್ನು ನಾವು ಮಾಂಸ, ಹಾಲು, ಮೊಟ್ಟೆ ಮೊದಲಾದ ಪ್ರಾಣಿಜನ್ಯ ಪದಾರ್ಥಗಳಿಂದಲೂ ಹಾಗೂ ದ್ವಿದಳ ಧಾನ್ಯಗಳಿಂದ ಸರಿಗೂಡಿಸಬೇಕು. ಜಗತ್ತಿನಲ್ಲಿ ಹೆಚ್ಚಾಗಿ

ಉಪಯೋಗಿಸುವ ಸಸಾರಜನಕದ ಆಹಾರವೆಂದರೆ ಕುರಿ ಮತ್ತು ಆಡುಗಳ ಮಾಂಸ ಕರ್ನಾಟಕದಲ್ಲಿ ಕುರಿಗಳನ್ನು ಸಾಕುತ್ತಿರುವವರ ಪೈಕಿ ಬಹಳ ಮಂದಿಯ ಉದ್ದೇಶ ಅವು ಗಳಿಂದ ಗೊಬ್ಬರ, ಮಾಂಸ ಹಾಗೂ ಚರ್ಮ ಪಡೆಯುವಷ್ಟಕ್ಕೆ ಮಾತ್ರ ಸೀಮಿತವಾಗಿದೆ.

ಜಗತ್ತಿನ ಪೇಟೆಗೆ ಚರ್ಮವನ್ನು ಮತ್ತು ಹದಗೊಳಿಸಿದ ತೊಗಲನ್ನು ಪೂರೈಸುವ ರಾಷ್ಟ್ರಗಳಲ್ಲಿ ಭಾರತ ಶ್ರೇಷ್ಠ ಸ್ಥಾನಗಳಿಸಿದೆ. ಕೈಚೀಲ, ಸೂಟ್‌ಕೇಸ್, ಹೆಣ್ಣುಮಕ್ಕಳ ಕೈಚೀಲ, ಇವುಗಳಿಗೆ ಕುರಿಗಳ ಚರ್ಮವು ಹೆಚ್ಚು ಉಪಯೋಗವಾಗುವುದು.

ನಮ್ಮ ಕರ್ನಾಟಕ ರಾಜ್ಯವು ಉಣ್ಣೆಯ ಉತ್ಪಾದನೆಯಲ್ಲಿ ಹಿಂದೆ ಉಳಿದಿಲ್ಲ. ಕರ್ನಾಟಕ ರಾಜ್ಯದಲ್ಲಿ 3000 ಉಣ್ಣೆ ನೇಯ್ಗೆಯ ಕೈಮಗ್ಗಗಳಿವೆ. ಇವು ಹೆಚ್ಚಾಗಿ ಮೈಸೂರು, ಹಾಸನ, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಈ ಉಣ್ಣೆಯಿಂದ ಹೊದೆಯುವ ಹಾಗೂ ಹಾಸುವ ಕಂಬಳಿಗಳು ತಯಾರಾಗುತ್ತವೆ. ಬೆಂಗಳೂರು ಕುರಿ ಚರ್ಮವನ್ನು ನಿರ್ಯಾತಮಾಡುವ ಕೇಂದ್ರಗಳಲ್ಲಿ ಒಂದು ಮುಖ್ಯ ಕೇಂದ್ರವಾಗಿದೆ.

ಕರ್ನಾಟಕದ ಕುರಿಗಳನ್ನು ಸಾಮಾನ್ಯವಾಗಿ ಉತ್ತಮ ತರಗತಿಯ ಉಣ್ಣೆಯ ಕುರಿಗಳು, ಮಧ್ಯಮ ತರಗತಿಯ ಉಣ್ಣೆಯ ಕುರಿಗಳು ಮತ್ತು ಕನಿಷ್ಠ ತರಗತಿಯ ಉಣ್ಣೆಯ ಕುರಿಗಳೆಂದು ಮೂರು ಭಾಗಗಳಾಗಿ ಅವು ಕೊಡುವ ಉಣ್ಣೆ ಆಧಾರದ ಮೇಲೆ ವಿಂಗಡಿಸುವುದು ಒಂದು ವಿಧವಾದರೆ ಕುರಿಗಳಿರುವ ಪ್ರದೇಶ, ಅವುಗಳ ಬಾಹ್ಯ ಹಾಗೂ ಮುಖ್ಯ ಲಕ್ಷಣಗಳಿಂದ ನಾಲ್ಕು ಭಾಗಗಳಾಗಿಯೂ ವಿಂಗಡಿಸುವ ಇನ್ನೊಂದು ವಿಧಾನವು ಬಳಕೆಯಲ್ಲಿದೆ. ಅದರನ್ವಯ ಕರ್ನಾಟಕ ಕುರಿಗಳನ್ನು 1) ಡೆಕ್ಕನಿ 2) ಬಳ್ಳಾರಿ 3) ಹಾಸನ ಮತ್ತು 4) ಬನ್ನೂರು ಕುರಿಗಳೆಂದು ವಿಂಗಡಿಸಬಹುದು. ಕುರಿಗಳು ಹೆಚ್ಚಾಗಿ ರಾಜ್ಯದ ಮಂಡ್ಯ, ಕೋಲಾರ, ಚಿತ್ರದುರ್ಗ, ಧಾರವಾಡ, ಬೆಳಗಾವಿ, ವಿಜಾಪುರ, ಬೀದರ್, ಗುಲಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕಂಡು ಬರುತ್ತವೆ.

1) ಡೆಕ್ಕನಿ : ಸಾಮಾನ್ಯವಾಗಿ ಮಧ್ಯಮ ತರಗತಿಯ ಆಕಾರದ ಕುರಿಗಳು. ಇವುಗಳ ಬಣ್ಣ ಕಪ್ಪು. ಕೆಲವು ಬಿಳಿಯ ಮಚ್ಚೆಗಳಿಂದ ಕೂಡಿರಬಹುದು. ಇವುಗಳ ಉಣ್ಣೆ ಕಪ್ಪು ಬಣ್ಣದ ಕೀಳು ದರ್ಜೆಯ ಉಣ್ಣೆಯಾಗಿರುತ್ತದೆ ಮತ್ತು ಕೂದಲುಗಳಿಂದ ಕೂಡಿರುತ್ತದೆ. ಇದು ಕೇವಲ ಒರಟಾದ ಹೊದೆ ಕಂಬಳಿ, ಹಾಸುಗಂಬಳಿ ತಯಾರಿಕೆಗೆ ಮಾತ್ರ ಉಪಯೋಗವಾಗುತ್ತದೆ; ನಯವಾದ ಉಣ್ಣೆ ಬಟ್ಟೆಗಳನ್ನು ತಯಾರಿಸಲು ಬರುವುದಿಲ್ಲ. ಈ ಕುರಿಗಳಲ್ಲಿ ತಲೆ, ಎದೆ, ಹೊಟ್ಟೆಯ ಮೇಲೆ ಮತ್ತು ಕಾಲುಗಳ ಮೇಲೆ

ಉಣ್ಣೆ ಬೆಳೆದಿರುವುದಿಲ್ಲ. ವರ್ಷಕ್ಕೆ ಎರಡು ಸಲ ಉಣ್ಣೆಯನ್ನು ಕತ್ತರಿಸುತ್ತಾರೆ. ವರ್ಷಕ್ಕೆ ಸುಮಾರು 400 ರಿಂದ 500 ಗ್ರಾಂ ಉಣ್ಣೆಯನ್ನು ಒಂದು ಕುರಿಯು ಕೊಡುತ್ತದೆ. ಈ ಕುರಿಗಳು ವರ್ಷಕ್ಕೆ ಒಂದಾವರ್ತಿ ಮರಿಹಾಕುತ್ತವೆ. ಇವುಗಳ ಮೂಗು ನೀಟಾಗಿ ಮೇಲಕ್ಕೆ ಎದ್ದು ನಿಂತು ತುದಿಯಲ್ಲಿ ಸ್ವಲ್ಪ ಬಾಗಿರುತ್ತವೆ. ಇದಕ್ಕೆ 'ರೋಮನ್ ಮೂಗು' ಎಂದು ಕರೆಯುತ್ತಾರೆ. ಮುಖದ ಮೇಲೆ ಹೊಳಪಿನಿಂದ ಕೂಡಿದ, ಕಪ್ಪು ಬಣ್ಣದ, ಸಣ್ಣಸಣ್ಣ ಕೂದಲುಗಳು ಬೆಳೆದುಕೊಂಡಿರುತ್ತವೆ. ಕಣ್ಣುಗಳು ಕಾಂತಿಯುಕ್ತವಾಗಿರುತ್ತವೆ. ಕಿವಿಗಳು ಮಧ್ಯಮ ಆಕಾರದವುಗಳು; ಕೆಳಗೆ ಜೋತುಬಿದ್ದಿರುತ್ತವೆ. ಇವುಗಳ ಮೇಲೆ ಕೂದಲುಗಳು ಬೆಳೆದಿರುವುದಿಲ್ಲ. ಟಗರುಗಳಿಗೆ ಕೊಂಬುಗಳಿರುತ್ತವೆ. ಇವು ಸುರಳಿಸುರಳಿಯಾಗಿ ತಿರುವಿಕೊಂಡು ಹೊರಭಾಗಕ್ಕೆ ಸ್ವಲ್ಪ ಬಾಗಿಕೊಂಡಿರುತ್ತವೆ. ಕುರಿಗಳಿಗೆ ಕೊಂಬುಗಳು ಇರುವುದಿಲ್ಲ. ಕಾಲಿನ ಗೊರಸುಗಳು ಕಪ್ಪಾಗಿರುತ್ತವೆ. ತುಪ್ಪಟದ ಒಳ ಮೈಬಣ್ಣ ಬಿಳಿಯದಾಗಿರುತ್ತವೆ. ಕುರಿಗಳ ಚರ್ಮದಲ್ಲಿ ಸೆಬೇಸಿಯಸ್ ಗ್ರಂಥಿಗಳು ತುಂಬಿಕೊಂಡಿರುತ್ತವೆ. ಈ ಗ್ರಂಥಿಗಳು ಜಿಡ್ಡಾದ ಎಣ್ಣೆಯಂಥ ವಸ್ತುವನ್ನು ಉತ್ಪಾದಿಸುತ್ತವೆ. ಈ ಜಿಡ್ಡಾದ ವಸ್ತುವು ಉಣ್ಣೆಯು ಒಣಗದಂತೆ ಮತ್ತು ನಯವಾಗಿರುವಂತೆಯು ಹುಲುಸಾಗಿ ಬೆಳೆಯುವಂತೆ ಕಾಪಾಡುತ್ತದೆ. ಇವುಗಳ ಬಾಲ ಸಣ್ಣದು. ಕುತ್ತಿಗೆ ಗಿಡ್ಡಾಗಿದ್ದು, ತಲೆಯು ಸ್ವಲ್ಪ ಮೇಲಕ್ಕೆ ಎತ್ತಿಕೊಂಡಿರುತ್ತದೆ. ಎದೆಯು ಅಗಲವಾಗಿ ಬೆಳೆದಿರುತ್ತದೆ. ಕಾಲುಗಳು ತೆಳುವಾಗಿ ಉದ್ದವಾಗಿರುತ್ತವೆ. ಟಗರಿನ ತೂಕ 70 ರಿಂದ 80 ಪೌಂಡು; ಕುರಿಯ ತೂಕ 40 ರಿಂದ 60 ಪೌಂಡು ಇರುತ್ತದೆ. ಇವು ತೂಕದಲ್ಲಿ ಕಡಮೆ ಇರುವುದರಿಂದ ಒಂದು ಕುರಿಯ ಮಾಂಸವು 10–12 ಕೆ.ಜಿ ಮಾತ್ರ ಇರುತ್ತದೆ. ಡ್ರೆಸ್ ಕ್ಯಾರ್‌ಕಸ್‌ದಲ್ಲಿ (ಅಂದರೆ ಚರ್ಮಸುಲಿದು ಉಳಿದ ಮಾಂಸ) 45% ಮಾಂಸವಿರುತ್ತದೆ. ಕುರಿಗಳು ಒಂದು ವರ್ಷ ವಯಸ್ಸಿಗೆ ಬೆದೆಗೆ ಬರುತ್ತವೆ. ಬಾಲವು ಸಣ್ಣದಾಗಿದ್ದು ಸುಮಾರು 3½ ಅಂಗುಲದಷ್ಟು ಉದ್ದವಿರುತ್ತದೆ. ಕುರಿಗಳ ಹಿಂಡನ್ನು ಕುರುಬರು ಹುಲ್ಲುಗಾವಲುಗಳಲ್ಲಿ ಮತ್ತು ಅಡವಿಯಲ್ಲಿ ಮೇಯಿಸುವುದು ಸಾಮಾನ್ಯ ಪದ್ಧತಿ. ಇವು ಶರೀರ ಸಾಮರ್ಥ್ಯದಿಂದ ಬಹಳ ಗಟ್ಟಿಯಾಗಿರುತ್ತವೆ ಮತ್ತು ಆಯಾಸವಿಲ್ಲದೆ ಬಹಳ ದೂರ ದಾರಿ ತಿರುಗಾಡುತ್ತ ಮೇಯುತ್ತ ಬಿಸಿಲಿನ ತಾಪ ಹಾಗೂ ಚಳಿ, ಗಾಳಿಗಳನ್ನು ಸಹಿಸುವ ಸಹಿಷ್ಣುತೆಯನ್ನು ಪಡೆದಿರುತ್ತವೆ.

2) ಬಳ್ಳಾರಿ : ಈ ಜಾತಿಯ ಕುರಿಗಳು ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸಿಗುತ್ತವೆ. ಇವೂ ಸಹ ಡೆಕ್ಕನಿ ಕುರಿಗಳಂತೆ ಒರಟಾದ ಕೀಳುದರ್ಜೆಯ ಕೂದಲುಗಳಿಂದ ಕೂಡಿದ ಕಪ್ಪು ಬಣ್ಣದ ಉಣ್ಣೆಯನ್ನು ಕೊಡುತ್ತವೆ. ಕಂಬಳಿಗಳನ್ನು ತಯಾರಿಸಲು ಇದರ ಉಣ್ಣೆಯನ್ನು ಹೆಚ್ಚು ಉಪಯೋಗಿಸುತ್ತಾರೆ. ಸಾಧಾರಣವಾಗಿ ಈ ಕುರಿಗಳು ಸಾಮಾನ್ಯ ನಿಲುವು ಉಳ್ಳದ್ದಾಗಿರುತ್ತವೆ. ಮುಖ ಮತ್ತು ದೇಹ ಕಪ್ಪು ಬಣ್ಣದಿಂದ

ಕೊಡಿರುತ್ತವೆ. ಕಾಲುಗಳು ಡೆಕ್ಕನ್ ಕುರಿಗಳಿಗಿಂತ ಉದ್ದವಾಗಿಯೂ ಎತ್ತರವಾಗಿಯೂ ಇರುತ್ತವೆ. ಕಣ್ಣುಗುಡ್ಡೆಗಳು ಸ್ವಲ್ಪ ಉಬ್ಬಿಕೊಂಡು ಮುಂದಕ್ಕೆ ಚಾಚಿಕೊಂಡಿರುತ್ತವೆ. ಕಿವಿಗಳು ಉದ್ದವಾಗಿ ಜೋಲುಬಿದ್ದಿರುತ್ತವೆ. ಮುಖ ಮತ್ತು ಕಿವಿಗಳ ಮೇಲೆ ಸಣ್ಣದಾದ ಮಿಂಚಿನಿಂದ ಕೂಡಿದ ಕೂದಲುಗಳು ಬೆಳೆದುಕೊಂಡಿರುತ್ತವೆ. ಟಗರುಗಳಿಗೆ ಕೊಂಬುಗಳಿರುತ್ತವೆ. ಕೆಲವಕ್ಕೆ ಇಲ್ಲದಿರಬಹುದು. ಕುತ್ತಿಗೆ ತೆಳುವಾಗಿ ಸಣ್ಣದಾಗಿರುತ್ತದೆ. ದೇಹವು ಸಾಧಾರಣವಾಗಿ ಸ್ವಲ್ಪ ಹೆಚ್ಚು ಉದ್ದವಾಗಿರುತ್ತದೆ. ಬಾಲ ಗಿಡ್ಡಾಗಿರುತ್ತದೆ. ಈ ಕುರಿಗಳು ದೂರದ ಹುಲ್ಲುಗಾವಲುಗಳಿಗೆ ಹೋಗಿ ಮೇಯಲು ತಕ್ಕವುಗಳಾಗಿವೆ. ಈ ಕುರಿಗಳಿಗೆ ಸಾಮಾನ್ಯವಾಗಿ ಕೊಂಬುಗಳಿರುವುದಿಲ್ಲ. ಒಂದುವೇಳೆ ಇದ್ದರೂ ಅವು ಬಹಳ ಸಣ್ಣದಾಗಿರುತ್ತವೆ. ಕುರಿಗಳು 1 ಅಥವಾ $1\frac{1}{2}$ ವರ್ಷ ವಯಸ್ಸಿಗೆ ಮರಿಗಳನ್ನು ಹಾಕುತ್ತವೆ. ಇವುಗಳ ಬೆಳವಣಿಗೆಯು ತಮ್ಮ ಸ್ವಂತ ಸ್ಥಳಗಳಲ್ಲಿ ಮಾತ್ರ ಚೆನ್ನಾಗಿ ಆಗುತ್ತದೆ. ಇವುಗಳ ಬೆಳವಣಿಗೆ ಪರಸ್ಥಳಗಳಲ್ಲಿ ಅಷ್ಟು ಸಮರ್ಪಕವಾಗಿ ಆಗುವುದಿಲ್ಲ. ಟಗರಿನ ಸರಾಸರಿ ತೂಕ 100–120 ಪೌಂಡು ಇರುತ್ತದೆ. ಕುರಿಗಳ ತೂಕ 70–80 ಪೌಂಡು ಇರುತ್ತದೆ. ವರ್ಷಕ್ಕೆ 1·52 ಪೌಂಡಿನವರೆಗೂ ಒಂದು ಕುರಿ ಉಣ್ಣೆಯನ್ನು ಕೊಡುತ್ತದೆ. ಚರ್ಮಸುಲಿದ ಮಾಂಸದ ತೂಕ (ಡ್ರೆಸ್ಡ್ ಕ್ಯಾರ್‌ಕಸ್) ಶರೀರದ ತೂಕದ ಶೇಕಡಾ 40 ರಷ್ಟು ಇರುತ್ತದೆ. ಇವುಗಳಲ್ಲಿ ಕೊಬ್ಬು ಹೆಚ್ಚಾಗಿ ಬೆಳೆದಿರುವುದಿಲ್ಲ. ಮಾಂಸವು ಮಧ್ಯಮ ತರಗತಿಯದು. 2 ವರ್ಷಕ್ಕೆ ಇವುಗಳ ಬೆಳವಣಿಗೆ ಸಂಪೂರ್ಣವಾಗುತ್ತದೆ. ಫಾರ್ಮ್‌ದಲ್ಲಿ ಸಾಕಿದ ಕುರಿಗಳು ವರ್ಷಕ್ಕೆ 3 ಪೌಂಡಿನವರೆಗೂ ಉಣ್ಣೆಯನ್ನು ಕೊಟ್ಟಿರುತ್ತವೆ. ಸುಮಾರು 8 ರಿಂದ 10 ಕೆ.ಜಿಯಷ್ಟು ಮಾಂಸವು ದೊರೆಯುತ್ತದೆ.

3) **ಹಾಸನ** : ಈ ಕುರಿಗಳನ್ನು ಹಾಸನ ಜಿಲ್ಲೆಯಲ್ಲಿ ಸಾಕುವುದರಿಂದ ಇವುಗಳನ್ನು ಹಾಸನ ಕುರಿಗಳೆಂದು ಕರೆಯುತ್ತಾರೆ. ಇವು ಉಣ್ಣೆ ಮತ್ತು ಕೂದಲುಗಳಿಂದ ಮಿಶ್ರಿತವಾಗಿರುತ್ತವೆ. ಕುರಿಗಳು ಒರಟಾದ ತುಪ್ಪಟವನ್ನು ಹೊಂದಿರುತ್ತವೆ. ಇವು ಮೈಕಟ್ಟು ಮತ್ತು ಆಕಾರದಲ್ಲಿ ಬಹುಮಟ್ಟಿಗೆ ಡೆಕ್ಕನಿ ಮತ್ತು ಬಳ್ಳಾರಿ ಜಾತಿಯ ಕುರಿಗಳನ್ನು ಹೋಲುತ್ತವೆ. ಆದರೆ ಅವುಗಳಿಗಿಂತ ಸಣ್ಣವು ಮತ್ತು ಎತ್ತರದಲ್ಲಿಯೂ ಸಹ ಅವುಗಳಿಗಿಂತ ಗಿಡ್ಡ ಬೆಳವಣಿಗೆಯುವು. ಇವು ಮಧ್ಯಮ ತರಗತಿಯ ಬೆಳವಣಿಗೆಯ ಕುರಿಗಳು. ಮುಖವು ಕಪ್ಪಾಗಿ ಶರೀರದ ತುಪ್ಪಟವು ಬಿಳಿಯ ಬಣ್ಣದಿಂದ ಕೂಡಿರುತ್ತದೆ. ಇದರ ಉಣ್ಣೆಯೂ ಸಹ ಕೇವಲ ಕಂಬಳಿ(ಜಾಡಿ) ವಗ್ಯೆರೆ ಒರಟಾದ ಬಟ್ಟೆಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಇವುಗಳಿಂದ 10–13 ಕೆ.ಜಿ ಮಾಂಸ ಸಿಗುತ್ತದೆ. ಚರ್ಮಸುಲಿದ ಮಾಂಸದ ತೂಕ ಶೇಕಡಾ 40 ರಷ್ಟು ಇರುತ್ತದೆ.

4) **ಬನ್ನೂರು ಅಥವಾ ಮಂಡ್ಯ**: ಮಂಡ್ಯ ಜಾತಿಯ ಕುರಿಗಳು ಕೇವಲ ಮಾಂಸಕ್ಕಾಗಿಯೇ ಪ್ರಸಿದ್ಧವಾದ ಕುರಿಗಳು. ಹೇಗೆ ಬ್ರಿಟಿಷ್ ಸೌತ್‌ಡೌನ್ ಕುರಿಗಳು

ಬ್ರಿಟನ್ನಿನಲ್ಲಿ ಮಾಂಸಕ್ಕೆ ಹೆಸರುವಾಸಿಯಾಗಿವೆಯೋ ಹಾಗೆ ಈ ಕುರಿಗಳು ದಕ್ಷಿಣ ಭಾರತದಲ್ಲಿ ಮಾಂಸಕ್ಕೆ ಹೆಸರಾಗಿವೆ. ಆದ್ದರಿಂದ ಇವುಗಳನ್ನು ಇಂಡಿಯನ್ ಸೌತ್‌ಡೌನ್ ಕುರಿಗಳೆಂದು ಕರೆಯುವುದು ವಾಡಿಕೆಯಾಗಿದೆ. ಇವು ಉಣ್ಣೆಯ ಜಾತಿಯ ಕುರಿಗಳಲ್ಲ. ಇವುಗಳ ಶರೀರದ ಮೇಲೆ ಆಡಿನ ಮೈಮೇಲೆ ಬೆಳೆದಿರುವ ಕೂದಲುಗಳಂತೆ ಕೂದಲುಗಳು ಬೆಳೆದುಕೊಂಡಿರುತ್ತವೆ. ಈ ಕುರಿಗಳ ತವರು ಮಂಡ್ಯ ಜಿಲ್ಲೆ. ಆದ್ದರಿಂದಲೇ ಇವುಗಳನ್ನು ಮಂಡ್ಯ ಜಾತಿಯ ಕುರಿಗಳೆಂದು ಕರೆಯಲಾಗಿದೆ. ಇವುಗಳನ್ನು ಅವುಗಳ ಮೂಲ ಸ್ಥಳದಲ್ಲಿ ಬನ್ನೂರು ಜಾತಿಯ ಕುರಿಗಳೆಂದಲ್ಲದೆ ಶೇಕಣಸೀಮೆಯ ಕುರಿಗಳೆಂದೂ ಸಹ ಕರೆಯುತ್ತಾರೆ. ಮಂಡ್ಯ ಜಿಲ್ಲೆಯ ಟಿ. ನರಸಿಪುರ ತಾಲ್ಲೂಕಿನಲ್ಲಿರುವ ಬನ್ನೂರು ಗ್ರಾಮವೇ ಈ ಕುರಿಗಳ ಉಗಮಸ್ಥಾನ. ಬನ್ನೂರು ಗ್ರಾಮದ 25 ಮೈಲಿನ ಸುತ್ತಳತೆಯಲ್ಲಿ ಈ ಕುರಿಗಳನ್ನು ಸಾಕಿ ಬೆಳೆಸುತ್ತಾರೆ. ಬನ್ನೂರು ಗ್ರಾಮದಿಂದ 4 ಮೈಲು ದೂರದಲ್ಲಿ ಕಿರುಗಾವಲು ಎಂಬ ಸ್ಥಳವಿದೆ. ಇಲ್ಲಿ ಶನಿವಾರಕ್ಕೊಮ್ಮೆ ಈ ಜಾತಿಯ ಕುರಿಗಳ ಸಂತೆ ಸೇರುತ್ತದೆ. ಸುಮಾರು 5000 ಕ್ಕೂ ಮೇಲ್ಪಟ್ಟು ಕುರಿಗಳು ಸಂತೆಯಲ್ಲಿ ಮಾರಾಟಕ್ಕೆ ಸೇರುತ್ತವೆ.

ಮಂಡ್ಯ ಜಾತಿಯ ಕುರಿಗಳು ಮಾಂಸಕ್ಕೆ ಹೆಸರಾದ ಕುರಿಗಳು. ಈ ಕುರಿಗಳ ಮಾಂಸ ಮತ್ತು ಕೊಬ್ಬು ರುಚಿಯಲ್ಲಿ, ಸುವಾಸನೆಯಲ್ಲಿ, ಮೃದುತ್ವದಲ್ಲಿ ಮತ್ತು ರಸಭರಿತ್ವದಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿರುತ್ತದೆ. ಬೇರೆ ಯಾವ ಜಾತಿಯ ಕುರಿಗಳೂ ಈ ವಿಷಯದಲ್ಲಿ ಇವುಗಳಿಗೆ ಸರಿಗಟ್ಟಲಾರವು. ಮಾಂಸದ ಇಳುವರಿಯು 25 ಪೌಂಡು ಇರುತ್ತದೆ. ಚರ್ಮಸುಲಿದ ಮಾಂಸವು ಶೇಕಡಾ 50 ರಷ್ಟು ಇರುತ್ತದೆ.

ಆಕಾರದಲ್ಲಿ ಇವು ಮೈತುಂಬಿಕೊಂಡು ಕೊಬ್ಬಿ ಬೆಳೆದಿರುತ್ತವೆ. ಸಂತೆಯಲ್ಲಿ ಕೊಳ್ಳುವವರು ಸಾಮಾನ್ಯವಾಗಿ ಈ ಕುರಿಗಳ ಸೊಂಟದ ಭಾಗವನ್ನು ತೊಡೆಗಳು ಮತ್ತು ತೋಳುಗಳ ಭಾಗಗಳನ್ನು ಒತ್ತಿ ಹಿಚುಕಿನೋಡಿ ಇದರ ಮಾಂಸದ ಪ್ರಮಾಣವನ್ನು ತಿಳಿಯುತ್ತಾರೆ. ಈ ಜಾತಿಯ ಕುರಿಗಳ ಬಾಲ ತೆಳ್ಳಗೆ, ಬಹಳ ಸಣ್ಣದಾಗಿರುತ್ತದೆ. ಇದು ನೆಲ್ಲೂರು, ಬಳ್ಳಾರಿ ಮುಂತಾದ ಬೇರೆ ಜಾತಿಯ ಕುರಿಗಳಂತೆ ಎತ್ತರವಾಗಿ ಬೆಳೆಯುವುದಿಲ್ಲ. ಕಾಲುಗಳು ಗಡುತರವಾಗಿದ್ದು ಗಿಡ್ಡಾಗಿರುತ್ತವೆ. ಹೀಗಾಗಿ ಇವು ಎತ್ತರಕ್ಕಿಂತ ಉದ್ದವಾಗಿ ಭೀಸಾಗಿರುತ್ತವೆ. ಇಂಥ ಉತ್ತಮ ಆಕಾರದ ಕುರಿಗಳನ್ನು ಆರಿಸಿ, ಕುರಿ ಹಿಂಡನ್ನು ಬೆಳೆಸುವುದೇ ಇಲ್ಲಿಯ ಕುರುಬರ ಒಂದು ವೈಶಿಷ್ಟ್ಯವೆಂದು ಕಂಡುಬಂದಿದೆ. ಕಾರಣ ಈ ಮಂಡ್ಯ ಜಾತಿಯ ಕುರಿಗಳು ಇಂದಿಗೂ ತಮ್ಮದೇ ಆದ ವಿಶಿಷ್ಟ ಗುಣಗಳನ್ನು ಉಳಿಸಿಕೊಂಡು, ಕಾಪಾಡಿಕೊಂಡು, ಬೆಳೆಸಿಕೊಂಡು ಬಂದಿರುತ್ತವೆ. ಬಣ್ಣದಲ್ಲಿ ಇವು ಗೋಧಿ ಬಣ್ಣದಂತೆ ಇರುತ್ತವೆ. ಈ ಜಾತಿಯ ಟಗರುಗಳ ಎತ್ತರ ಸುಮಾರು 31 ಅಂಗುಲ;

ಉದ್ದ 40 ಅಂಗುಲ; ತೂಕ 138 ಪೌಂಡುಗಳು; ಎದೆಯ ಸುತ್ತಳತೆ 41 ಅಂಗುಲ. ಕುರಿಗಳ ಎತ್ತರ 29 ಅಂಗುಲ; ಉದ್ದ 39 ಅಂಗುಲ; ತೂಕ 120 ಪೌಂಡುಗಳು; ಎದೆಯ ಸುತ್ತಳತೆ 38 ಅಂಗುಲ. ಇದರಲ್ಲಿ ಕಂಡುಬರುವ ಒಂದು ವಿಶೇಷ ಲಕ್ಷಣವೆಂದರೆ ತಲೆ, ಕುತ್ತಿಗೆ ಮತ್ತು ಎದೆಯ ಭಾಗಗಳು ಬಿಳಿಮಿಶ್ರಿತ ಕೆಂಪು ಬಣ್ಣದಿಂದ ಕೂಡಿರುತ್ತದೆ. ಶುದ್ಧ ಜಾತಿಯ ಟಗರುಗಳಿಗೆ ಕೊಂಬುಗಳಿರುವುದಿಲ್ಲ. ಕಿವಿಗಳು ಉದ್ದವಾಗಿ ಜೋಲು ಬಿದ್ದಿರುತ್ತವೆ. ಕೊಂಬಿದ್ದ ಟಗರು ಮತ್ತು ಸಣ್ಣ ಕಿವಿಗಳಿದ್ದಲ್ಲಿ ಆ ಟಗರು ಶುದ್ಧ ಮುಂಡ್ಯ ಜಾತಿಯ ಟಗರಲ್ಲವೆಂದು ಹೇಳುತ್ತಾರೆ. ಕುರಿಗಳ ಕೊರಳಲ್ಲಿ ಮೊಲೆಗಳ ಆಕಾರದ ಎರಡು ಚರ್ಮದ ತುಂಡುಗಳು ನೇತಾಡುತ್ತಿರುತ್ತವೆ. ಇದಕ್ಕೆ 'ಟಸಲ್ಸ್' ಎಂದು ಕರೆಯುತ್ತಾರೆ.

ಈ ಜಾತಿಯ ಕುರಿಗಳನ್ನು ಬೇರೆ ಡೆಕ್ಕನಿ ಮುಂತಾದ ಜಾತಿಯ ಕುರುಬರಂತೆ ಹಿಂಡು ಕಟ್ಟಿಕೊಂಡು ಮೇವು, ನೀರು ಹುಡುಕುತ್ತ, ಮೇಯಿಸುತ್ತ ಅಡವಿಯಿಂದ ಅಡವಿಗೆ ತಿರುಗಾಡುತ್ತ ಹೋಗುವುದಿಲ್ಲ. ಇದ್ದ ಊರಲ್ಲಿಯೇ ತಮ್ಮ ಮನೆಗಳಲ್ಲಿ ಸಾಕಿ ಬೆಳಸುತ್ತಾರೆ; ಮೇವಿನ ಜೊತೆಗೆ ಕೈತಿಂಡಿ (ಕಾಳಿನ ಮಿಶ್ರಣ)ಯನ್ನು ಕೊಟ್ಟು ಸಾಕಿ ಕೊಬ್ಬುವಂತೆಮಾಡಿ ಬೆಳಸುತ್ತಾರೆ. ಹುರಳಿನುಚ್ಚು, ಜೋಳದ ವಡಕಲು, ರಾಗಿಯ ವಡಕಲು ಹಿಂಡಿ ಮತ್ತು ತೌಡು ಸೇರಿಸಿ ತಿನ್ನುವುದಕ್ಕೆ ಕೊಡುತ್ತಾರೆ. ಗಂಡುಮರಿಗಳು 8 ವಾರದವುಗಳಾದಂತೆ ಕಸಿಮಾಡಿಸಿ ಬಿಡುತ್ತಾರೆ ಮತ್ತು 4 ರಿಂದ 6 ತಿಂಗಳು ದೊಡ್ಡವಾಗುವವರೆಗೆ ಅವುಗಳಿಗೆ ಕೈತಿಂಡಿಯನ್ನು ಕೊಟ್ಟು ಬೆಳಸುತ್ತಾರೆ. ಹೆಣ್ಣು ಕುರಿಗಳನ್ನು 3 ಮರಿಗಳು ಹಾಕಿದ ನಂತರ ಮಾಂಸಕ್ಕಾಗಿ ಕೊಬ್ಬಿಸಿ ಮಾರಿಬಿಡುತ್ತಾರೆ. ಈಗೀಗ ಇವುಗಳನ್ನು ಭಾರತದ ಇತರ ಪ್ರಾಂತಗಳಿಗೆ ಕೊಂಡೊಯ್ದು ಅಲ್ಲಿಯ ಕುರಿಗಳೊಂದಿಗೆ ಜೊತೆಗೂಡಿಸಿ ಮಿಶ್ರತಳಿಯನ್ನು ಅಭಿವೃದ್ಧಿಪಡಿಸಿ ಅವುಗಳಲ್ಲಿ ಮಾಂಸದ ಗುಣಗಳನ್ನು ಸೇರಿಸಲು ಪ್ರಯತ್ನಿಸಲಾಗುತ್ತಿದೆ.

ಅಧ್ಯಾಯ 5

ಸಾಕಣೆ

ಕುರಿಗಳು ಬಹಳ ಸಾಧುವಾದ ಪ್ರಾಣಿಗಳು. ಇವುಗಳನ್ನು ಸಾಕುವುದು ಸುಲಭ ಮತ್ತು ಹಿಂಡು ಬೆಳೆಸಲು ಹೆಚ್ಚು ಹಣ ಬೇಕಾಗುವುದಿಲ್ಲ. ಇದಕ್ಕೆ ಯಾವ ತಾಂತ್ರಿಕ ಕೌಶಲ್ಯವೂ ಬೇಕಾಗಿಲ್ಲ. ಬೇಕಾದುದೆಲ್ಲ ಸ್ವಲ್ಪ ಶ್ರಮ ಮತ್ತು ಹೆಚ್ಚು ಶ್ರದ್ಧೆ. ಈ ಉದ್ಯೋಗವನ್ನು ಮನೆಯ ಹೆಂಗಸರು, ಮುದುಕರು ಮತ್ತು ಮಕ್ಕಳು ಆದಿಯಾಗಿ ಕುಟುಂಬದವರೆಲ್ಲರೂ ಮಾಡಲು ಸಾಧ್ಯ. ಈ ಉದ್ಯೋಗದಲ್ಲಿ ಬೇರೆ ಕೈಗಾರಿಕೆಗಳಲ್ಲಿ ಉದ್ಭವಿಸುವ ಅಪಾರ ಹಣದ ಅವಶ್ಯಕತೆ, ಕಾರ್ಮಿಕರ ಪ್ರಶ್ನೆ, ವಸತಿಸೌಕರ್ಯ ಮೊದಲಾದ ತೊಂದರೆಗಳು ಬರುವುದಿಲ್ಲ. ಕುರಿಗಳನ್ನು ಹೆಚ್ಚುಸಂಖ್ಯೆಯಲ್ಲಿ ಸಾಕಿ ಅದನ್ನೇ ಒಂದು ಪ್ರಮುಖ ವ್ಯವಸಾಯವನ್ನಾಗಿ ಮಾಡಿಕೊಳ್ಳಬಹುದು ಅಥವಾ ಸ್ವಲ್ಪ ಸಂಖ್ಯೆಯಲ್ಲಿ ಸಾಕಿ ಇದನ್ನು ಒಕ್ಕಲುತನದ ಉದ್ಯೋಗಕ್ಕೆ ಒಂದು ಪೂರಕ ಅಥವಾ ಉಪದಂಧೆಯನ್ನಾಗಿಯೂ ಸಹ ಮಾಡಿಕೊಳ್ಳಲು ಬರುತ್ತದೆ. ಒಂದು ಕುರಿಯು ಒಂದು ವರ್ಷಕ್ಕೆ 0.5-0.7 ಟನ್ನಿನಷ್ಟು ಉತ್ತಮ ಗೊಬ್ಬರವನ್ನು ಪೂರೈಸುತ್ತದೆ. ಇದಕ್ಕಾಗಿ ಕುರಿಗಳನ್ನು 'ಚಲಿಸುವ ಗಾಡಿ' ಎಂದು ಕರೆಯಲಾಗಿದೆ. ಹೀಗಾಗಿ ಕುರಿಸಾಕಣೆ ಹಳ್ಳಿಗಳಲ್ಲಿ ಒಕ್ಕಲುತನದ ಉದ್ಯೋಗಕ್ಕೆ ಸಹಾಯಕವಾದ ಮತ್ತು ಉಪಯುಕ್ತವಾದ ಉದ್ಯೋಗ. ಉಣ್ಣೆ ಮತ್ತು ಮಾಂಸಕ್ಕೆ ಸದಾ ಗಿರಾಕಿಗಳು ಇದ್ದೇ ಇರುತ್ತಾರೆ. ಆದಾಯ ಮತ್ತು ಆಹಾರ ಎರಡಕ್ಕೂ ಕುರಿಗಳು ಒದಗಿಬರುತ್ತವೆ. ಕುರಿಗಳ ಸಾಕುವಿಕೆಯಲ್ಲಿ ಆದಾಯ ಹೆಚ್ಚು; ಖರ್ಚು ಕಡಮೆ. ಕುರಿಗಳು ಸಾಮಾನ್ಯವಾಗಿ ಎಲ್ಲ ತರಹದ ಗಿಡ, ಎಲೆ, ಹಸುರು ಸೊಪ್ಪು ತಿನ್ನುವುದರಿಂದಲೂ ಮತ್ತು ಹುಲ್ಲು ಮೇಯುವುದರಿಂದಲೂ ಬೇರೆ ಹೈನುದನಗಳಿಗೆ ಬರುವ ಆಹಾರದ ಖರ್ಚು ಮತ್ತು ಮೇವಿನ ತುಟಾಗ್ರತೆಯ ಪ್ರಶ್ನೆ ಕುರಿಗಳಲ್ಲಿ ಅಷ್ಟು ತೀವ್ರವಾಗಿ ಕಂಡು ಬರುವುದಿಲ್ಲ. ಕುರಿಗಳ ಮೇಲಿನ ತುಟಿಯು ಮಧ್ಯಭಾಗವು ಸೀಳಾಗಿರುವುದರಿಂದ ಇವು ದನಕರುಗಳ ಬಾಯಿಗೆ ಸಿಗದಂತಹ ಸಣ್ಣ ಚಿಗುರುಹುಲ್ಲು, ಹಸಿ ತೊಪ್ಪಲು, ಸೊಪ್ಪು

ಗಳನ್ನೂ ಸಹ ಭೂಮಿಗೆ ಹೊಂದಿ ಮೇಯ್ದು ಜೀವಿಸಬಲ್ಲವು. ಕಾಲಿನ ಗೊರಸುಗಳು ಸೀಳಾಗಿರುವುದರಿಂದಲೂ ದೇಹವು ತೆಳುವಾಗಿರುವುದರಿಂದ ಬೇರೆ ಪ್ರಾಣಿಗಳು ಏರಿ ಹೋಗಿ ಮೇಯಲಾಗದ ಕಡಿದಾದ ಬೆಟ್ಟ ಗುಡ್ಡಗಳ ಕಂದರ ಪ್ರದೇಶಗಳಲ್ಲಿಯೂ ಸಹ ಜಾರಿಬೀಳದಂತೆ ತಮ್ಮ ಜೋಲಿಯನ್ನು ಕಾಪಾಡಿಕೊಂಡು, ಓಡಾಡಿ ಮೇಯಬಲ್ಲವು. ಕುರಿಗಳು ಸಾಮಾನ್ಯವಾಗಿ ತಮ್ಮ ಒಂದೂವರೆ ವರ್ಷದ ವಯಸ್ಸಿಗೆ ಮರಿಗಳನ್ನು ಹಾಕಲು ಪ್ರಾರಂಭಿಸುವುವು. ಕುರಿಗಳು ಕಟ್ಟಿದ (ಗಬ್ಬವಾದ) 5 ತಿಂಗಳಿಗೆ (150 ದಿವಸಗಳಿಗೆ) ಮರಿಗಳನ್ನು ಹಾಕುತ್ತವೆ. ಇದರಿಂದ ಇವುಗಳ ಸಂತಾನೋತ್ಪತ್ತಿ ತೀವ್ರವಾಗಿ ಬೆಳೆದು ಸ್ವಲ್ಪಾವಧಿಯಲ್ಲಿ ಹಿಂಡು ದೊಡ್ಡದಾಗಿ ಬೆಳೆಯುವುದು. ಒಟ್ಟಿನಲ್ಲಿ ಕುರಿ ಸಾಕುವುದು ಆರ್ಥಿಕ ದೃಷ್ಟಿಯಿಂದ ರೈತರಿಗೆ ಉತ್ತಮವಾದ ಉದ್ಯೋಗ.

ಕುರಿಯು ಮೆಲುಕುಹಾಕುವ ಪ್ರಾಣಿಯಾಗಿ ಕಾಳುಕಡ್ಡಿಯನ್ನಲ್ಲದೆ ಹುಲ್ಲು ಸೊಪ್ಪುಗಳನ್ನು ತಿನ್ನುತ್ತದೆಯಾದರೂ, ಬಿರುಸಾದ ಮೇವನ್ನು ಅಂದರೆ ಜೋಳದ ದಂಟು ಇತ್ಯಾದಿಗಳನ್ನು ತಿನ್ನುವುದಿಲ್ಲ. ಬೇಸಾಯಮಾಡಿ ಬೆಳೆದ ದ್ವಿದಳ ಬೆಳೆಗಳನ್ನು ಬಹಳ ಪ್ರೀತಿಯಿಂದ ತಿನ್ನುತ್ತವೆ. ಕುರಿಯು ವಿಶಾಲವಾದ ಹುಲ್ಲುಗಾವಲಿನಲ್ಲಿ ಬೆಳೆದ ಎತ್ತರವಲ್ಲದ ಹುಲ್ಲುಮೇಯಲು ಇಚ್ಛಿಸುತ್ತದೆ. ದಟ್ಟವಾಗಿ ಬೆಳೆದ ಹುಲ್ಲುಗಾವಲಿನಲ್ಲಿ ಮೇಯಲು ಇಚ್ಛಿಸುವುದಿಲ್ಲ. ಇದಲ್ಲದೆ ಹೊಲಗಳಲ್ಲಿ ಬರುವ ಎಷ್ಟೋ ಜಾತಿಯ ಕಳೆಕಸಗಳ ಸೊಪ್ಪನ್ನು ಮತ್ತು ಸಣ್ಣ ಗಿಡಗಳ ಎಲೆ, ಚಿಗುರನ್ನು ತಿನ್ನುತ್ತವೆ. ಕುರಿಗಳು ಒಂದೇ ಕಡೆಗೆ ಎಂದೂ ಮೇಯುವುದಿಲ್ಲ. ಹೊಸ ಹುಲ್ಲುಗಾವಲಿನಲ್ಲಿ ಕುರಿಗಳನ್ನು ಮೇಯಲು ಬಿಟ್ಟಾಗ ಅವು ಹೆಚ್ಚು ಹುರುಪಿನಿಂದ ಮತ್ತು ಚಿನ್ನಾಟವಾಡುತ್ತ ಮೇಯುವುದನ್ನು ಕಾಣಬಹುದು. ಕುರಿಗಳು ಸಾಮಾನ್ಯವಾಗಿ ಎತ್ತರದ ಪ್ರದೇಶದಲ್ಲಿ ಮೇಯಲಿಚ್ಛಿಸುತ್ತವೆ. ಕುರಿಗಳು ಬೇರೆ ಯಾವುದೇ ಪ್ರಾಣಿಗಿಂತ ಹೆಚ್ಚು ಹೊತ್ತು ನೀರಿಲ್ಲದೆ ಇರಬಲ್ಲವು. ಆದರೆ ಕುರಿಗಳಿಗೆ ನೀರು ಬೇಕಾಗಿಯೇ ಇಲ್ಲವೆಂಬ ಭಾವನೆ ತಪ್ಪು. ಏಕೆಂದರೆ ಕುರಿಗಳು ಅತ್ಯಂತ ಚಳಿಗಾಲದಲ್ಲಿಯೂ ಪ್ರತಿದಿನ 4 ಕ್ವಾರ್ಟ್ ನೀರು ಕುಡಿಯುತ್ತವೆ. ಹರಿಯುವ ಶುಭ್ರ ನೀರನ್ನು ಅವು ಬಹುವಾಗಿ ಮೆಚ್ಚುತ್ತವೆ.

ಕುರಿಗಳು ಸಾಮಾನ್ಯವಾಗಿ ವರ್ಷದಲ್ಲಿ ನಿಯಮಿತ ಋತುವಿನಲ್ಲಿ ಒಂದುಸಲ ಮಾತ್ರ ಬೆದೆಗೆ ಬರುತ್ತವೆ. ಹೀಗಾಗಿ ವರ್ಷವಿಡೀ ಮರಿಗಳನ್ನು ಪಡೆಯಲಾಗುವುದಿಲ್ಲ. ಒಮ್ಮೆ ಕಟ್ಟದಿದ್ದರೆ ಮುಂದೆ 16 ರಿಂದ 18 ದಿನಗಳಲ್ಲಿ ಮಾತ್ರ ಬೆದೆಗೆ ಬರುವುವು. ಕಟ್ಟಿದ ಕುರಿಗಳು 146 ರಿಂದ 150 ದಿನಗಳು ಕಳೆದು ಮರಿಹಾಕುತ್ತವೆ. ಸಾಮಾನ್ಯವಾಗಿ 1 ರಿಂದ 2 ಮರಿಗಳನ್ನು ಕೊಡುವುದಾದರೂ 3–4 ಮರಿಗಳನ್ನು ಹಾಕಿದ ಉದಾಹರಣೆಗಳು ಇಲ್ಲದಿಲ್ಲ.

ತಾಯಿಕುರಿ ತನ್ನ ಮರಿಯನ್ನು ವಾಸನೆಯಿಂದ ಗುರುತುಹಿಡಿಯುವುದು. ಮರಿ ಸ್ವಲ್ಪ ದೊಡ್ಡದಾದ ಬಳಿಕ ಕಣ್ಣಿನಿಂದ ನೋಡಿ ಗುರುತುಹಿಡಿಯಬಲ್ಲದಾದರೂ, ವಾಸನೆಯಿಂದ ಗುರುತಿಸುವುದೇ ಹೆಚ್ಚು. ತಾಯಿಯು ತನ್ನ ಶರೀರದಿಂದ ಬರುವ ವಾಸನೆಯಿಂದಲೇ ಮರಿಯನ್ನು ಗುರುತಿಸುವುದು. ಏಕೆಂದರೆ ಒಂದೊಂದು ಸಲ ಗುರುತು ಹಿಡಿಯದಾದಾಗ, ತಾಯಿಯ ಮೊಲೆಹಾಲನ್ನು ಮರಿಯ ಬೆನ್ನು ಮತ್ತು ಚಪ್ಪೆಯ ಮೇಲೆ ಹಿಂಡಿದಾಗ ಅದನ್ನು ಮೂಸಿನೋಡಿ ಮರಿಯನ್ನು ಮೊಲೆಯೂಡಿಸಬಹುದು.

ಕುರಿಗಳಲ್ಲಿ ಗುಂಪುಗೂಡುವಿಕೆಯ ಗುಣವು ಅತ್ಯಂತ ಅಧಿಕವಾಗಿ ಕಂಡುಬರುತ್ತದೆ. ಮೆರಿನೋ ಕುರಿಗಳಲ್ಲಿ ಇದು ಅತ್ಯಧಿಕವಾಗಿರುತ್ತದೆ. ಮಾಂಸದ ಜಾತಿಯ ಕುರಿಗಳಲ್ಲಿ ಇದು ಕಡಮೆ ಪ್ರಮಾಣದಲ್ಲಿ ಕಂಡುಬಂದರೂ, ಯಾವುದೇ ಕಾರಣದಿಂದ ಹೆದರಿಕೆಯುಂಟಾದರೆ ಕೂಡಲೇ ಅವು ಒಂದು ಗುಂಪಾಗಿ ಕೂಡುತ್ತವೆ. ಕುರಿಗಳಲ್ಲಿ ಕಾಣುವ ಈ ಗುಂಪುಗೂಡುವಿಕೆಯ ಗುಣದಿಂದ ಯಾವುದೇ ಒಂದು ಕುರಿಹಿಂಡಿನಿಂದ ದೂರ ಉಳಿದಿದ್ದರೆ, ಅದರ ಆರೋಗ್ಯ ಸರಿಯಿಲ್ಲವೆಂದೇ ಅಥವಾ ಅದು ಗಾಯಗೊಂಡಿದೆಯೆಂದೇ ಸಹಜವಾಗಿ ತಿಳಿಯಬಹುದಾಗಿದೆ. ಈ ಒಂದು ಗುಣದಿಂದ ದೊಡ್ಡದೊಡ್ಡ ಹಿಂಡುಗಳನ್ನು ಹಿಂಸ್ರಪ್ರಾಣಿಗಳಿಂದ ರಕ್ಷಿಸಲು ಬೇಗನೆ ಕುರಿಗಳನ್ನು ಒಂದುಗೂಡಿಸಲು, ತಿರುವಿಕೊಂಡುಬರಲು ಬಹಳ ಅನುಕೂಲವಾಗುವುದು. ಕುರಿಯ ಇನ್ನೊಂದು ಗುಣವೆಂದರೆ ತನ್ನ ಮುಖಂಡನನ್ನು ಹಿಂಬಾಲಿಸುವುದು. ಮುಂದಿನ ಕುರಿ ಹೋದಲ್ಲಿ ಹಿಂದಿನ ಕುರಿಗಳೆಲ್ಲ ಸುಮ್ಮನೆ ತಲೆಕೆಳಗೆ ಹಾಕಿಕೊಂಡು ಅನುಸರಿಸುತ್ತವೆ.

ಕುರಿ ಬಹಳ ಪುಕ್ಕಲು ಪ್ರಾಣಿ. ತೋಳ, ನಾಯಿ, ನರಿ ಮುಂತಾದ ಪ್ರಾಣಿಗಳು ಕುರಿಗಳ ವೈರಿಗಳು. ಇವುಗಳ ಎದುರಿನಲ್ಲಿ ಕುರಿ ಬಹಳ ಅಸಹಾಯಕವಾಗಿರುತ್ತದೆ. ಈ ಕಾಡುಪ್ರಾಣಿಗಳು ಎರಗಲು ಬಂದಾಗ ಕುರಿಗಳು ಮೇಯುವುದನ್ನು ಬಿಟ್ಟು, ಬೆದರಿ, ಸಿಕ್ಕಾಪಟ್ಟೆ ಓಡುತ್ತವೆ. ಕೋಡುಗಳುಳ್ಳ ಕುರಿಗಳು, ಟಗರುಗಳು ಶರೀರದಿಂದ ಪುಷ್ಟವಾದ ಸದೃಢ ಕುರಿಗಳು ವೈರಿಗೆ ಅಷ್ಟೊಂದು ಹೆದರುವುದಿಲ್ಲ. ಮರಿಗಳನ್ನು ಹೊಂದಿದ ಧೈರ್ಯವಂತ ಕುರಿಗಳು ವೈರಿಗಳಿಂದ ಮರಿಗಳನ್ನು ರಕ್ಷಿಸಲು ತಯಾರಾಗುತ್ತವೆ. ವೈರಿಗಳನ್ನು ಹೆದರಿಸುವ ಪ್ರಯತ್ನದಲ್ಲಿ ಕುರಿಗಳು, ಟಗರುಗಳು, ತಮ್ಮ ಮುಂದಿನ ಎರಡು ಕಾಲುಗಳನ್ನು ನೆಲಕ್ಕೆ ಅಪ್ಪಳಿಸುತ್ತವೆ. ಇವು ಕುರಿಗಳ ಸ್ವಾಭಾವಿಕ ಗುಣಲಕ್ಷಣಗಳು.

ಕರ್ನಾಟಕದಲ್ಲಿ ಕುರಿಸಾಕುವ ಪದ್ಧತಿಗಳು

ಕುರಿಗಳನ್ನು ಸಾಕುವ ಸಾಮಾನ್ಯಪದ್ಧತಿಗಳಲ್ಲಿ ಸಾಮಾನ್ಯವಾಗಿ ನಾಲ್ಕು ಪ್ರಕಾರದ ಪದ್ಧತಿಗಳು ಕಂಡುಬರುತ್ತವೆ. ಅವುಗಳು ಈ ಮುಂದಿನ ಪಟದಲ್ಲಿನಂತಿವೆ :

1) ಕಾಯ್ದಿರಿಸಿ ಸಿದ್ಧಪಡಿಸಿದ ಹುಲ್ಲುಗಾವಲುಗಳಲ್ಲಿ ಇಟ್ಟು ಸಾಕುವಿಕೆ.

2) ಅರೆಸಂಚಾರಿ ಪದ್ಧತಿ ಮೇಲೆ ಸಾಕುವಿಕೆ.

3) ದೊಡ್ಡಿಗಳಲ್ಲಿ ಮೇವು, ಆಹಾರ, ನೀರು ಪೂರೈಸಿ ಸಾಕುವುದು.

4) ಸಂಚಾರಿ ಪದ್ಧತಿ ಮೇಲೆ ಸಾಕುವಿಕೆ.

ಈ ನಾಲ್ಕು ತರಹದ ಪದ್ಧತಿಗಳಲ್ಲಿ ಕರ್ನಾಟಕದಲ್ಲಿ ಸಾಮಾನ್ಯವಾಗಿ ಹೆಚ್ಚು ಪ್ರಚಲಿತವಿರುವ, ಬಹಳ ಹಿಂದಿನ ಕಾಲದಿಂದ ಅನುವಂಶಿಕವಾಗಿ ಸಾಗಿಬಂದ ಪದ್ಧತಿಯೆಂದರೆ ಸಂಚಾರಿ ಪದ್ಧತಿ. 'ಕುರುಬರು ಇಂದಿಗೂ ಕುರಿಗಳನ್ನು ಈ ಪದ್ಧತಿಯಿಂದ ಸಾಕುತ್ತಬಂದಿದ್ದಾರೆ. ಮೂರನೇ ಪದ್ಧತಿಯು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚು ಬಳಕೆಯಲ್ಲಿದೆ. ಕರ್ನಾಟಕದ ಕೆಲವು ರೈತರು ತಮ್ಮ ಮುಖ್ಯ ಉದ್ಯೋಗವಾದ ಒಕ್ಕಲುತನದ ಜೊತೆಗೆ ಕೆಲವು ಕುರಿಗಳನ್ನು ಸಾಕಿಕೊಂಡಿರುತ್ತಾರೆ.

ಕರ್ನಾಟಕದ ಕುರುಬರು ಬಡವರು, ಅಜ್ಞಾನಿಗಳು, ಮುಗ್ಧರು ಮತ್ತು ಹಿಂದುಳಿದವರು. ಹಿಂದಿನಿಂದ ಬಂದ ಸಂಪ್ರದಾಯಗಳ ಪ್ರಿಯರು. ಮೂಢನಂಬಿಕೆಯನ್ನೇ ನೆಚ್ಚಿಕೊಂಡು, ಇಂದಿನ ಸುಧಾರಿಸಿದ ಆಧುನಿಕ ವೈಜ್ಞಾನಿಕ ಪದ್ಧತಿಗಳಿಂದ ಕುರಿಗಳ ಸಂವರ್ಧನೆ, ಪಾಲನೆಪೋಷಣೆಮಾಡಲು ಅಷ್ಟು ಆಸಕ್ತಿಯನ್ನು ಹೊಂದಿರುವುದಿಲ್ಲ. ಹೀಗಾಗಿ ಬಹಳ ಹಿಂದಿನಿಂದ ಸಾಗಿಬಂದ ಹಳೆಯ ಪದ್ಧತಿಯಂತೆ ಇಂದಿಗೂ ಸಹ ತಮ್ಮ ಕುರಿಗಳಹಿಂಡನ್ನು ಕಟ್ಟಿಕೊಂಡು, ನೀರು ಮತ್ತು ಹುಲ್ಲಿನ ಪ್ರದೇಶಗಳನ್ನು ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗಾಡುತ್ತ ತಮ್ಮ ದಿನದ ಸಂಕುಚಿತ ಸ್ವಭಾವದ ಜೀವನವನ್ನು ಸಾಗಿಸುತ್ತ ನಡೆದಿರುತ್ತಾರೆ. ಇದು ಅವರ ಜೀವನ. ಮಳೆಗಾಲದಲ್ಲಿ ಅಡವಿಯಲ್ಲಿ ಕುರಿಗಳಿಗೆ ಮೇಯಲು ಹಸುರು ಸಾಕಷ್ಟು ಸಿಗುತ್ತದೆ. ಕುರಿಗಳ ಆರೋಗ್ಯ ಈ ಕಾಲದಲ್ಲಿ ಚೆನ್ನಾಗಿರುತ್ತದೆ. ಆದರೆ ಬೇಸಿಗೆಯಲ್ಲಿ ಅಡವಿಯಲ್ಲಿ ಹುಲ್ಲು, ಮೇವು ಒಣಗಿಹೋಗಿರುವುದರಿಂದ ಕುರಿಗಳಿಗೆ ಹೊಟ್ಟೆತುಂಬ ಆಹಾರ ಸಿಗುವುದಿಲ್ಲ. ಅಲ್ಲದೆ ಇವುಗಳಿಗೆ ಈ ಕಾಲದಲ್ಲಿ ಮತ್ತೆ ಬೇರೆ ಯಾವ ತರಹದ ಕಾಳಿನ ಮಿಶ್ರಣದ ಪೂರಕ ಆಹಾರವನ್ನು ಕೊಡುವುದಿಲ್ಲ. ಹೀಗಾಗಿ ಅರೆಹೊಟ್ಟೆತುಂಬಿದ ಕುರಿಗಳು ಹೆಚ್ಚು ಉಣ್ಣೆಯನ್ನು ಉತ್ಪಾದಿಸುವುದು ಅಸಾಧ್ಯ. ಶರೀರದ ಬೆಳವಣಿಗೆ ಸರಿಯಾಗಿ ಆಗದೆ ಅವುಗಳ ತೂಕ ಕಡಮೆಯಾಗುವುದು. ಇಂಥ ಕುರಿಗಳು ಹೆಚ್ಚು ಮಾಂಸವನ್ನು ಕೊಡಲಾರವು. ಕುರಿಗಳಲ್ಲಿ ಆಹಾರ ಅಭಾವದಿಂದ ಹಾಲು ಕಡಮೆಯಾಗುವುದು. ಇದರಿಂದ ಮರಿಗಳ ಬೆಳವಣಿಗೆಯು ಅವುಗಳ ಎಳೆಯ ಬೆಳೆಯುವ ವಯಸ್ಸಿನಲ್ಲಿ ಸರಿಯಾಗಿ ಆಗದೇ ಮುಂದೆ

ಅವು ಉತ್ತಮ ಉಣ್ಣೆಯ ಕುರಿಗಳಾಗಲೀ ಅಥವಾ ಉತ್ತಮ ಮಾಂಸದ ಕುರಿಯಾಗಿ ಆಗಲೀ ಬೆಳೆಯಲಾರವು. ಸರಿಯಾದ ಆಹಾರವಿಲ್ಲದ ಕುರಿಗಳು ರೋಗಗಳಿಗೆ ಬೇಗನೆ ತುತ್ತಾಗುವುವು. ಬೇಸಿಗೆಯಲ್ಲಿ ಕುರಿಗಳನ್ನು ಬೆಳಿಗ್ಗೆ 6 ಗಂಟೆಗೆ ಮೇಯಲು ಅಡವಿಗೆ ಹೊಡೆದುಕೊಂಡು ಹೋಗುತ್ತಾರೆ. ಅವು ಅಡವಿಯಲ್ಲಿ ಸುಮಾರು 10 ಗಂಟೆಯವರೆಗೆ ಮೇಯ್ದು, ಅನಂತರ ಬಿಸಿಲಿನ ತಾಪಕ್ಕೆ ಸೋತು ನೆರಳಿನ ಸ್ಥಳದಲ್ಲಿ ನಿಂತು ವಿಶ್ರಾಂತಿಯನ್ನು ಪಡೆಯುತ್ತವೆ. ಮತ್ತೆ ಸಾಯಂಕಾಲ 3 ಗಂಟೆಯ ನಂತರ ಮಧ್ಯಾಹ್ನದ ಬಿಸಿಲಿನ ತಾಪ ಕಡಮೆಯಾದ ಮೇಲೆ ಪುನಃ ಸಾಯಂಕಾಲ 6 ಗಂಟೆಯವರೆಗೆ ಮೇಯುತ್ತವೆ. ಅನಂತರ ಸಾಯಂಕಾಲ 6 ಗಂಟೆಗೆ ತಿರುವಿಕೊಂಡು ಒಂದು ಜಾಲಿಮುಳ್ಳಿನಿಂದ ಸುತ್ತುವರಿಯಲ್ಪಟ್ಟ ದೊಡ್ಡಿಯಲ್ಲಿ ಕೂಡಿಹಾಕುತ್ತಾರೆ. ಹೀಗಾಗಿ ಅವು ಒಟ್ಟಿನಲ್ಲಿ 24 ಗಂಟೆಗಳ ಕಾಲದಲ್ಲಿ ಒಟ್ಟು 8 ಗಂಟೆಗಳ ಕಾಲ ಮಾತ್ರ ಮೇಯುತ್ತವೆ. ಅಲ್ಲದೆ ಬೇಸಿಗೆಯಲ್ಲಿ ಅಡವಿಯಲ್ಲಿ ಹುಲ್ಲು ಕಡಮೆಯಾಗಿರುವುದರಿಂದ ಮತ್ತು ದೂರದವರೆಗೆ ಓಡಾಡಬೇಕಾದುದರಿಂದ ಹೆಚ್ಚು ವೇಳೆ ತಿರುಗಾಟದಲ್ಲಿಯೇ ಕಳೆದುಹೋಗುತ್ತದೆ. ಬೇಸಿಗೆಯಲ್ಲಿ ಕುರಿಗಳಿಗೆ ಸಾಕಷ್ಟು ಮೇಯಲು 12 ಗಂಟೆಗಳ ಕಾಲ ವೇಳೆ ಬೇಕಾಗುತ್ತದೆ. ಇದೂ ಅಲ್ಲದೆ ಅಡವಿಯಲ್ಲಿ ಕುರಿಗಳು ಹುಲ್ಲಿಗಾಗಿ ಬೇಸಿಗೆ ಕಾಲದಲ್ಲಿ ಬಹಳ ದೂರದವರೆಗೆ ತಿರುಗಾಡಬೇಕಾದುದರಿಂದ ಅವುಗಳ ಶಕ್ತಿಸಾಮರ್ಥ್ಯವೆಲ್ಲವೂ ಅದಕ್ಕಾಗಿ ವ್ಯಯವಾಗುವುದರಿಂದ ಉಣ್ಣೆಯ ಉತ್ಪಾದನೆಗೆ ಶಕ್ತಿ ಕಡಮೆಯಾಗಿ ಅವುಗಳ ಉಣ್ಣೆ ಮತ್ತು ಮಾಂಸಗಳ ಬೆಳವಣಿಗೆ ಸಮರ್ಪಕವಾಗಿ ಆಗುವುದಿಲ್ಲ. ಇದರಿಂದ ಕುರುಬರಿಗೆ ಹೆಚ್ಚಿನ ಲಾಭವಾಗುವುದಿಲ್ಲ. ಒಟ್ಟಿನಲ್ಲಿ ಬೇಸಿಗೆಯಲ್ಲಿ ಕುರಿಗಳಿಗೆ ಸಾಕಷ್ಟು ಆಹಾರವಿಲ್ಲದಂತಾಗಿ ಅವುಗಳ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಕುರಿಗಳು ಒಂದು ದಿವಸದ ಮಟ್ಟಿಗೆ ಉಪವಾಸ ಅಥವಾ ಅರೆಹೊಟ್ಟೆಯಿಂದ ಬೆಳೆದಲ್ಲಿ ಅದರ ಉಣ್ಣೆಯ ಉತ್ಪಾದನೆಯ ಮೇಲೆ ದುಷ್ಪರಿಣಾಮವಾಗುವುದು.

ಸಂಚಾರಿ ಪದ್ಧತಿಯ ಮೇಲೆ ಕುರಿಸಾಕುವುದಕ್ಕೆ ಉತ್ತರ ಕರ್ನಾಟಕದ ಕುರುಬರೇನು ಅಪವಾದವಲ್ಲ. ಇವರು ಡೆಕ್ಕನಿ ಜಾತಿಯ ಕಪ್ಪು ಬಣ್ಣದ ಜವಾರಿ (ದೇಶೀ) ಕುರಿಗಳ ಹಿಂಡನ್ನು ಸಾಕಿ ಬೆಳೆಸಿಕೊಂಡಿರುತ್ತಾರೆ. ಇಂಥಾ ಕುರಿಗಳ ಹಿಂಡನ್ನು ಬಾಗಲಕೋಟೆ, ಮುದ್ದೇಬಿಹಾಳ, ಜಮಖಂಡಿ, ರಾಯಬಾಗ್, ಅಥಣಿ, ಬಿಜಾಪುರ, ಗೋಕಾಕ್, ಕೃಷ್ಣಾತೀರದ ಪ್ರದೇಶ, ಹಾವೇರಿ ಮತ್ತು ರಾಣೇಬೆನ್ನೂರು ಭಾಗಗಳಲ್ಲಿ ಹೆಚ್ಚಾಗಿ ಕಾಣಬಹುದು. ಈ ಹಿಂಡಿನ ಕುರಿಗಳ ಉಣ್ಣೆಯ ಗುಣ ಆಯಾ ಪ್ರದೇಶದ ಹವಾಮಾನ, ಆಹಾರ ಮತ್ತು ಪರಿಸರವನ್ನು ಅವಲಂಬಿಸಿರುತ್ತದೆ. ಬಾಗಲಕೋಟೆಯ ಭಾಗದ ಕುರಿಗಳ ಉಣ್ಣೆಯು ಉತ್ತಮ ಮತ್ತು ಹೆಚ್ಚು ಮಿಂಚುಳ್ಳದಾಗಿಯೂ ಉದ್ದ ಎಸಳಿನದೂ ಅಥವಾ ತಂತುಗಳದ್ದೂ ಇರುತ್ತದೆ. ಈ ಕುರಿಗಳು ಸವಳು ನೀರಿನ ಹಳ್ಳದ ದಂಡೆಯಲ್ಲಿ

ಹೆಚ್ಚಾಗಿ ಮೇಯುವುದರಿಂದಲೂ ಮತ್ತು ಅಲ್ಲಿ ಬೆಳೆದಿರುವ ಜಾಲಿಮರದ ಕಾಯಿಗಳನ್ನು ಹೆಚ್ಚಾಗಿ ತಿನ್ನುವುದರಿಂದ ಇವುಗಳ ಉಣ್ಣೆಯು ಹೆಚ್ಚು ಹೊಳಪಿನಿಂದ ಕೂಡಿರುತ್ತದೆ. ಜಮಖಂಡಿ. ಅಥಣಿ ಮತ್ತು ಕೃಷ್ಣಾತೀರದ ಮೇಲಿನ ಭಾಗದ ಕುರಿಗಳ ಉಣ್ಣೆಯು ಹೆಚ್ಚು ಬಿರುಸಾಗಿಯೂ. ಹೊಳಪುಳ್ಳದ್ದಾಗಿಯೂ ಮತ್ತು ಹಾವೇರಿ ತಾಲೂಕಿನ ಪೂರ್ವ ಭಾಗ ಮತ್ತು ರಾಣೇಬೆನ್ನೂರು ತಾಲೂಕಿನ ದಕ್ಷಿಣ ಭಾಗದಲ್ಲಿ ಮಧ್ಯಮ ತರಗತಿಯ ಉಣ್ಣೆಯಿಂದ ಕೂಡಿದ ಕುರಿಗಳಾಗಿವೆ. ಈ ಎಲ್ಲ ಕುರಿಗಳ ಉಣ್ಣೆಯಿಂದ ಉರುಟಾದ ಹಾಸುಗಂಬಳಿ, ಕಂಬಳಿ, ಜಮಖಾನ ಮೊದಲಾದ ಉರುಟು ಬಟ್ಟೆಗಳನ್ನು ತಯಾರಿಸಲು ಬರುತ್ತವೆಯೇ ಹೊರತು ಉತ್ತಮ ನಯವಾದ ಉಣ್ಣೆಬಟ್ಟೆಗಳಿಗೆ ಬರುವುದಿಲ್ಲ. ಈ ಕುರಿಗಳ ಹಿಂಡಿನ ಉಣ್ಣೆಯನ್ನು ಸುಧಾರಿಸಲು ಹೆಚ್ಚಿನ ಸಾಧ್ಯತೆ, ಸೌಲಭ್ಯಗಳಿವೆ. ಇದನ್ನು ತಿಳಿದು ಪಶುಪಾಲನಾ ಇಲಾಖೆಯವರು ಬೆಳಗಾವಿ ಜಿಲ್ಲೆಯ ಸುತ್ತಟ್ಟಿ, ವಿಜಾಪುರ ಜಿಲ್ಲೆಯ ಅನಗವಾಡಿ, ಧಾರವಾಡ ಜಿಲ್ಲೆಯ ಗುತ್ತಲ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಬಳ್ಳಾರಿ ಜಿಲ್ಲೆಯ ಕುರಿಕುಪ್ಪೆಗಳಲ್ಲಿ ಕುರಿಗಳ ಸುಗೋಪನಾ ಮತ್ತು ಸಂಶೋಧನಾ ಫಾರ್ಮ್‌ಗಳನ್ನು ಸ್ಥಾಪಿಸಿರುತ್ತಾರೆ. ಮತ್ತು ಕುರಿಗಳ ಹಿಂಡುಗಳು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಗಳನ್ನೂ ಹಾಗೂ ವೈದ್ಯಕೀಯ. ಆರ್ಥಿಕ ಮತ್ತಿತರ ಎಲ್ಲ ತರಹದ ಸಹಾಯ, ಸವಲತ್ತುಗಳನ್ನು ಕುರುಬರಿಗಾಗಿ ಪೂರೈಸುವ ಯೋಜನೆಗಳನ್ನು ಕೈಗೊಂಡಿರುತ್ತಾರೆ. ತತ್ಪರಿಣಾಮವಾಗಿ ಈ ಕುರಿಗಳ ಉಣ್ಣೆಯ ಗುಣಧರ್ಮಗಳಲ್ಲಿ ಮತ್ತು ಮಾಂಸದ ಇಳುವರಿಯಲ್ಲಿ ಪ್ರಗತಿಯು ಕಂಡುಬಂದಿದೆ. ಈ ಕುರಿ ಮತ್ತು ಉಣ್ಣೆಯ ಅಭಿವೃದ್ಧಿಯ ಸರ್ಕಾರದ ಯೋಜನೆಗಳು ಪ್ರಗತಿಪಥದಲ್ಲಿ ಮುಂದುವರಿಯುತ್ತಿವೆ. ಮತ್ತು ಕುರುಬರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ.

ಕರ್ನಾಟಕದಲ್ಲಿ ಕುರುಬರು ತಮ್ಮ ಕುರಿಗಳನ್ನು ಮುಖ್ಯವಾಗಿ ಕೇವಲ ಮಾಂಸ ಮತ್ತು ಮರಿಗಳಿಗಾಗಿ ಸಾಕಿ ಬೆಳಸುತ್ತಿದ್ದಾರೆಯೇ ಹೊರತು ಅದರ ಉಣ್ಣೆಯ ಉತ್ಪಾದನೆಯ ಕಡೆಗೆ ಅಷ್ಟು ಮನಸ್ಸುಹಾಕಿಲ್ಲವೆಂದೇ ಹೇಳಬಹುದು. ಉಣ್ಣೆಯ ಗುಣ, ಯೋಗ್ಯತೆಯ ವಿಷಯದಲ್ಲಿ ಹೆಚ್ಚು ತಿಳಿವಳಿಕೆ, ಆಸಕ್ತಿವಹಿಸಿ, ಅದರ ಉತ್ಪತ್ತಿಯನ್ನು ಹೆಚ್ಚಿಸಿಕೊಂಡಲ್ಲಿ ಆಗ ಕುರಿಹಿಂಡನ್ನು ಸಾಕಿ, ಬೆಳಸಿ ಸಂಪಾದಿಸುವ ಆದಾಯ ನಿಜವಾಗಿ ಹೆಚ್ಚುವುದು. ಕುರಿಸಾಕುವ ಉದ್ಯೋಗ ಹೆಚ್ಚು ಲಾಭದಾಯಕವಾಗುವುದರ ಜೊತೆಗೆ ವಿದೇಶೀ ವಿನಿಮಯವನ್ನು ಸಹಗಳಿಸಿ, ದೇಶದ ಸಂಪತ್ತನ್ನು ಸಮೃದ್ಧಿಗೊಳಿಸಬಹುದು.

ಹುಲ್ಲುಗಾವಲು :

ಕುರಿಗಳ ತಳಿಅಭಿವೃದ್ಧಿಯ ಕಾರ್ಯದಲ್ಲಿ ಉತ್ತಮ ತಳಿ ಟಗರು ಎಷ್ಟು ಮಹತ್ವವೋ ಅವುಗಳಿಗೆ ಸರಿಯಾದ ಸಾಕಷ್ಟು ಪೌಷ್ಟಿಕ ಆಹಾರವೂ ಸಹ ಅಷ್ಟೇ

ಮಹತ್ವವಾದುದು. ಬೀಜವು ಎಷ್ಟು ಒಳ್ಳೆಯದಾದರೇನು ? ಅದಕ್ಕೆ ತಕ್ಕ ಸುಪಕ್ವವಾದ ಕ್ಷೇತ್ರವೂ ಬೇಕು. ಉತ್ತಮ ಟಗರು ಮತ್ತು ಸರಿಯಾದ ಆಹಾರ ಇವೆರಡೂ ಕುರಿಗಳ ಅಭಿವೃದ್ಧಿಗೆ ಒಂದು ಹಕ್ಕಿಯ ಎರಡು ರೆಕ್ಕೆಗಳಂತೆ. ಕುರಿಗಳಿಗೆ ಮೇಯಲು ಹುಲ್ಲುಗಾವಲಿನ ಸೌಕರ್ಯ, ಅನುಕೂಲತೆಗಳ ಮೇಲೆ ಅವುಗಳ ಬೆಳವಣಿಗೆ ಮತ್ತು ಉತ್ಪಾದನೆ ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಪ್ರಕೃತಿಸಿದ್ಧವಾಗಿ ಕುರಿಗಳಿಗೆ ರಸಭರಿತವಾದ ಹಸುರು ಚಿಗುರು ಹುಲ್ಲು, ಸತ್ವಯುತವಾದ ಆಹಾರ. ಕುರಿಗಳು ಎಳೆಯ ಚಿಗುರು ಹುಲ್ಲನ್ನು ಬಹಳ ಪ್ರೀತಿಯಿಂದ ತಿನ್ನುತ್ತವೆ. ಹುಲ್ಲು ಬಹಳ ಉದ್ದವಾಗಿ ಬೆಳೆದಲ್ಲಿ ಅದು ದನಕರುಗಳಿಗೆ ಮೇಯಲು ಅನುಕೂಲವೇ ಹೊರತು ಕುರಿಗಳಿಗಲ್ಲ. ಏಕೆಂದರೆ ಉದ್ದವಾಗಿ ಬೆಳೆದ ಹುಲ್ಲನ್ನು ತಿನ್ನಲು ದನಗಳಂತೆ ಕುರಿಗಳ ನಾಲಗೆ ಅಷ್ಟು ಉದ್ದವಾಗಿಲ್ಲದಿರುವುದೇ ಇದಕ್ಕೆ ಮುಖ್ಯಕಾರಣ. ದನಗಳು ಹುಲ್ಲನ್ನು ಮೇಯಲು ನಾಲಗೆಯನ್ನು ಉಪಯೋಗಿಸಿಕೊಳ್ಳುತ್ತವೆ; ಕುರಿಗಳು ಕೇವಲ ತುಟಿಗಳ ಮತ್ತು ಮುಂದಿನ ಹಲ್ಲುಗಳನ್ನು ಉಪಯೋಗಿಸುತ್ತವೆ. ಆದಕ್ಕಾಗಿ ಕುರಿಗಳು ಮೇಯುವ ಹುಲ್ಲುಗಾವಲುಗಳಲ್ಲಿ ಎತ್ತರವಾಗಿ ಬೆಳೆಯದೆ, ಅಗಲವಾಗಿ ಹೆಚ್ಚು ಕವಲುಕವಲಾಗಿ ಕುಡಿಯೊಡೆಯುವ ಜಾತಿಯ ಹುಲ್ಲುಗಳನ್ನು ಬೆಳಸಿಕೊಳ್ಳುವುದು ಜಾಣತನವಾಗಿರುತ್ತದೆ. ಚಿಗುರು ಹುಲ್ಲಿನಲ್ಲಿ ಪೋಷಕಾಂಶ ಹೆಚ್ಚು. ಮಕ್ಕಳಿಗೆ, ಕರುಗಳಿಗೆ, ಆಕಳಹಾಲು ಹೇಗೋ ಹಾಗೆ ಕುರಿಗಳಿಗೆ ಹಸುರು ಹುಲ್ಲು. ಹಸುರು ಹುಲ್ಲಿನಲ್ಲಿ ಜೀವಸತ್ವಗಳಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಸುರು ಹುಲ್ಲಿನಲ್ಲಿರುವಷ್ಟು A–ಜೀವಸತ್ವ ಬೇರೆ ಇನ್ನಾವ ಪದಾರ್ಥದಲ್ಲಿ ಇಷ್ಟು ಸುಲಭವಾಗಿ ಸಿಗಲಾರದು. ಲವಣ ಮತ್ತು ಖನಿಜಾಂಶಗಳು ಮತ್ತು ಪ್ರಾಣಿಗಳಿಗೆ ಅವಶ್ಯಕವಾದ ಕೆರೋಟಿನ್ ಪದಾರ್ಥಗಳನ್ನೊಳಗೊಂಡಿರುವ ಕಾವಲ ಹುಲ್ಲು ಕುರಿಗಳಿಗೆ ಉತ್ತಮ ಆಹಾರ. ಕುರಿಗಳು ಬೆಳಗಿನ ಮೂರು ಗಂಟೆಗಳ ಕಾಲದ ಬಯಲಿನಲ್ಲಿ ಮೇಯುತ್ತಿರುವಾಗ ಹೊಂಬಿಸಿಲಿನ ನೀಲಾತೀತ ರಶ್ಮಿಗಳು ಕುರಿಗಳ ಮೈಮೇಲೆ ಬೀಳುವುದರಿಂದ ಅವುಗಳಿಗೆ D–ಜೀವಸತ್ವವು ಅಧಿಕ ಪ್ರಮಾಣದಲ್ಲಿ ಲಭ್ಯವಾಗುವುದು. ಇದರ ಫಲವಾಗಿ ಕುರಿಗಳ ಬೆಳವಣಿಗೆ ಉತ್ತಮವಾಗುವುದು. ಕುರಿಗಳ ಉಣ್ಣೆಯು ಒಂದು ಜೀವಂತ ವಸ್ತು. ಇದರ ಬೆಳವಣಿಗೆಗೆ ಸಸಾರಜನಕದ ಅಮೈನೋ ಆಮ್ಲಗಳು ಬಹಳ ಅವಶ್ಯಕ. ಇದು ಹಸುರು ಹುಲ್ಲಿನಲ್ಲಿ ಸಿಗುವುದು. ಹೀಗಾಗಿ ಹಸುರು ಹುಲ್ಲು ಪೂರೈಸಿದಲ್ಲಿ ಕುರಿಗಳು ಉತ್ತಮ ಉಣ್ಣೆಯನ್ನು ಉತ್ಪಾದಿಸುವುವು. ಕೊಬ್ಬಿ ಬೆಳೆದು ಅಧಿಕ ಮಾಂಸವನ್ನು ಕೊಡುವುವು. ಕುರಿಸಾಕುವ ಉದ್ಯೋಗ ಲಾಭದಾಯಕವಾಗಬೇಕಾದರೆ ಅವುಗಳಿಗೆ ಮೇಯಲು ಹುಲ್ಲುಗಾವಲಿನ ಅಗತ್ಯ ಬಹಳ ಮಹತ್ವವಾದುದು.

ಕಟ್ಟುಗಾವಲುಗಳಲ್ಲಿ ಕುರಿಗಳನ್ನಿಟ್ಟು ಸಾಕುವುದರಿಂದ ಅವುಗಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಆಗಾಗ್ಗೆ ಹುಲ್ಲುಗಾವಲುಗಳನ್ನು ಬದಲಿಸುವುದು

ಅವುಗಳ ಅಂತರ್ಗತ ಗುಣವಾಗಿದೆ. ಜೌಗು ಮತ್ತು ಕೊಳಚೆ ಪ್ರದೇಶಗಳಲ್ಲಿ ಬಹುಕಾಲ ಕುರಿಗಳನ್ನು ತರುಬುವುದು ಒಳ್ಳೆಯದಲ್ಲ. ಮಳೆಗಾಲದಲ್ಲಿ ನೀರು ಸರಾಗವಾಗಿ ಬಸಿದು ಹೋಗುವ ಭೂಮಿಯು ಕುರಿಮೇಯಿಸಲು ಯೋಗ್ಯವಾದುದು. ಈ ಕಾರಣದಿಂದ ಕುರುಬರು ತಮ್ಮ ಕುರಿಗಳನ್ನು ಮಳೆಗಾಲದಲ್ಲಿ ಬಯಲುಸೀಮೆಯ ಒಣಪ್ರದೇಶಗಳಿಗೆ ತೆಗೆದುಕೊಂಡು ಹೋಗುವರು. ಮುಂಗಾರು ಬೆಳೆ ಕೊಯ್ದ ನಂತರ ಉಳಿಯುವ ಕೋಲಿ ಮತ್ತು ರವದಿ ಹಾಗೂ ಇತರ ಕಳೆಕಸಗಳು ಚಳಿಗಾಲದಲ್ಲಿ ಕುರಿಗಳಿಗೆ ಒಳ್ಳೇ ಮೇವಾಗುವುದು. ಒಣ ಬಯಲುನಾಡಿನ ಪ್ರದೇಶದಲ್ಲಿ ಜೋಳದ ಪೈರಿನ ನಂತರ ಉಳಿಯುವ ಅವಶೇಷಗಳು, ಹತ್ತಿಗಿಡ, ಕಳೆಕಸ, ರವದಿ ಚಳಿಗಾಲದ ಮೇವನ್ನು ಒದಗಿಸುವುದು. ಬೇಸಿಗೆಯಲ್ಲಿ ಕುರಿಗಳು ಹೊಳೆ, ಹಳ್ಳಗಳ ಕಡೆಗೆ ತಿರುಗುತ್ತವೆ. ಅಲ್ಲಿ ಜಾಲಿ ಮತ್ತು (ಕರಿಕಿ) ಹುಲ್ಲು ಬೇಸಿಗೆಗೆ ತಕ್ಕ ಆಹಾರವಾಗಿರುವುವು. ಮಳೆಗಾಲದಲ್ಲಿ ಹಸಿಮೇವು ಚಳಿಗಾಲದಲ್ಲಿ ಮಡಕಿ, ತರುವಾಯ ಜೋಳ ಕೊಯ್ದ ಹೊಲಗಳಲ್ಲಿನ ಕೋಲಿ, ಉದುರಿದ ರವದಿ, ಎಲೆ, ಕಸಕಡ್ಡಿ, ಕುಳಿಗಳ ಚಿಗುರು ಇವೇ ಮೊದಲಾದ ಮೇವು, ಜಾಲಿಯ ತೊಪ್ಪಲು ಮತ್ತು ಕಾಯಿಗಳು ಕುರಿಗಳಿಗೆ ಉತ್ತಮ ಆಹಾರ ಪದಾರ್ಥಗಳಾಗಿರುತ್ತವೆ.

ನಮ್ಮಲ್ಲಿಯ ಹುಲ್ಲುಗಾವಲುಗಳ ಸೌಕರ್ಯವಿಲ್ಲದಿರುವುದು ಒಂದು ದುರ್ದೈವದ ಸಂಗತಿ. ನಮ್ಮಲ್ಲಿ ಕುರಿಗಳ ಅಭಿವೃದ್ಧಿ ಸಾಕಷ್ಟು ಆಗದಿರುವುದಕ್ಕೆ ಇದೂ ಸಹ ಮುಖ್ಯ ಕಾರಣವೆಂದು ಹೇಳಬಹುದು. ಈ ದೊಡ್ಡ ಕೊರತೆಯನ್ನು ಹೋಗಲಾಡಿಸಬೇಕಾದರೆ ಮೊದಲು ಬೀಳುಬಿದ್ದಿರುವ ಬಂಜರುಭೂಮಿ, ಗುಡ್ಡಗಾಡು ಪ್ರದೇಶ, ಗೋಮಾಳಗಳನ್ನು ಕುರಿಗಳು ಮೇಯುವುದರ ಸಲುವಾಗಿ ಕಾದಿರಿಸಬೇಕು. ಹೀಗೆ ಕಾದಿಟ್ಟ ಪ್ರದೇಶಗಳನ್ನು ತಂತಿಬೇಲಿಗಳಿಂದ ರಕ್ಷಿಸಿಕೊಂಡು ಭೂಮಿಯನ್ನು ಉತ್ತಿ, ಮಣ್ಣು ಸಡಿಲಮಾಡಿ, ಸುಧಾರಿಸಿದ ಹುಲ್ಲಿನ ಬೀಜಗಳನ್ನು ಮತ್ತು ಕಾಡು ದ್ವಿದಳ ಧಾನ್ಯದ ಬೀಜಗಳನ್ನು ಹಾಕಬೇಕು. ಈ ಪ್ರದೇಶಗಳಲ್ಲಿ ಬಿದ್ದ ಕುರಿಹಿಕ್ಕೆ, ದನಕರುಗಳ ಸೆಗಣಿ ಹಾಳಾಗದಂತೆ ಅಲ್ಲಿಯೇ ಕುಳಿತು ಗೊಬ್ಬರವಾಗುವಂತೆ ನೋಡಿಕೊಳ್ಳಬೇಕು. ಗುಡ್ಡದ ಇಳಿಜಾರು ಪ್ರದೇಶಗಳಲ್ಲಿ ಮುಂಗಾರು ಮಳೆ ಬೀಳುವುದಕ್ಕೆ ಸ್ವಲ್ಪ ಮೊದಲು ಹಗುರಾದ ಕಟ್ಟಿಗೆ ರೆಂಟೆಯಿಂದ ಇಳುಕಲಿಗೆ ಅಡ್ಡವಾಗಿ ಉಳುಮೆಮಾಡಿ, ಮಣ್ಣು ಸಡಿಲಗೊಳಿಸಬೇಕು. ಹೀಗೆ ಮಾಡಿದಲ್ಲಿ ಮುಂದೆ ಮುಂಗಾರಿಮಳೆ ಬಿದ್ದಾಗ ನೀರು ಹರಿದುಹೋಗದೆ ಭೂಮಿಯಲ್ಲಿಯೇ ನಿಂತು ನೆಲದಲ್ಲಿ ಹಸಿ ಉಳಿಯುವುದು. ಹುಲ್ಲು ಹುಲುಸಾಗಿ ಬೆಳೆಯುವುದು. ಹೀಗೆ ಕುರಿಗಳ ಅಭಿವೃದ್ಧಿಯ ಕಾರ್ಯದಲ್ಲಿ ಹುಲ್ಲುಗಾವಲುಗಳ ಅಭಿವೃದ್ಧಿ ಪಡಿಸುವುದು ಪ್ರಥಮ ಹೆಜ್ಜೆ.

ನೀರಾವರಿ ಅನುಕೂಲವಿರುವ ಸ್ಥಳದಲ್ಲಿ ಸುಧಾರಿಸಿದ ಹೆಚ್ಚು ಇಳುವರಿ ಕೊಡುವಂತಹ ಗಿನಿ, ರೋಡ್ಸ್, ಥಿನ್‌ನೇಪಿಯರ್, ಬ್ಲೂಪ್ಯಾನಿಕ್, ಗ್ರಿನ್‌ಪ್ಯಾನಿಕ್, ಪಿ.

ಪೆಡಿಸಿಲೇಟಂ, ಅಂಜನಾ, ನೇಪಿಯರ್, ರಾಜಗಡ್ಡೆ ಮೊದಲಾದ ಹುಲ್ಲುಗಡ್ಡೆಗಳ ಸಸಿಗಳನ್ನು ಒಂದಾವರ್ತಿ ಹಚ್ಚಿದಲ್ಲಿ ಅವು 3 ಅಥವಾ 4 ವರ್ಷಗಳ ಕಾಲ ಉತ್ತಮ ಫಲವನ್ನು ಕೊಡುತ್ತವೆ. ಇಂಥ ಪ್ರದೇಶಗಳಲ್ಲಿ ನೀರು ಹಾಯಿಸಿ, ಗಜ್ಜರಿ, ಗೆಣಸು ಟರ್‌ನಿಪ್, ಲೂಸರ್ನ್, ಬೀಟ್‌ರೂಟ್ ಮತ್ತು ಹಸಿತಪ್ಪಲು ಪಲ್ಯ ಬೆಳೆದು ಕುರಿಗಳಿಗೆ ಚಳಿಗಾಲದಲ್ಲಿ ಕೊಡಬೇಕು. ಸಾಧ್ಯವಿದ್ದಲ್ಲಿ ಮಡಕಿ, ಅಲಸಂದಿ, ಅವರೆ, ಹೆಸರು, ಹುರುಳಿ, ಚವಳಿ ಮೊದಲಾದ ದ್ವಿದಲ ಧಾನ್ಯಗಳು ಬೆಳೆದು ಕುರಿಗಳಿಗೆ ತಿನ್ನಿಸಬೇಕು. ಮತ್ತು ಈ ಕಾಳುಗಳು ಉತ್ತಮ ಪ್ರೋಟೀನನ್ನು ಪೂರೈಸುತ್ತವೆ. ಕಾಳುತೆಗೆದ ಮೇಲೆ ಉಳಿದ ಸೊಪ್ಪು ರವದಿ ಉತ್ತಮ ಪೊಟ್ಟಿನ ಮೇವು ಆಗುವುದು. ಇದು ಕುರಿಗಳಿಗೆ ಉತ್ತಮ ಒಣಮೇವು.

ಬೇಸಿಗೆಯ ಕಾಲದಲ್ಲಿ ಹಸುರು ಅಭಾವವಿರುವುದರಿಂದ ಕುರಿಗಳಿಗೆ ಗಿತದ ಹಸುರು ಎಲೆತೊಪ್ಪಲ ಪೂರೈಸುವುದಕ್ಕಾಗಿ, ಚೊಗಚೆ, ನುಗ್ಗಿ, ಹಾಲ್ವಾಣ, ಬಸರಿ, ಆಲ, ಗೋಣಿ, ಅರಳಿ, ಜಾಲಿ, ಮೊದಲಾದ ಗಿಡಗಳನ್ನು ಬೆಳಸಿಕೊಂಡಲ್ಲಿ ಈ ಗಿಡಗಳ ಎಲೆ, ತಪ್ಪಲು, ಹೂಕಾಯಿಗಳು ಬೇಸಿಗೆಯ ಕಾಲದಲ್ಲಿ ಹಸುರುಹುಲ್ಲಿನ ಅಭಾವವಿದ್ದಾಗ ಉತ್ತಮ ಪೂರಕ ಆಹಾರವಾಗಿ ಉಪಯೋಗಿಸಲ್ಪಡುತ್ತವೆ. ಈ ಪ್ರಕಾರ ಕುರುಬರು ತಮ್ಮ ಕುರಿಗಳ ಮೇವಿನ ಸೌಕರ್ಯದ ಪೂರ್ವಯೋಜನೆಯನ್ನು ಸರ್ಕಾರ ಮತ್ತು ಅರಣ್ಯ ಇಲಾಖೆಯವರ ಸಹಾಯದಿಂದ ಮಾಡಿಕೊಂಡು ಕುರಿಗಳನ್ನು ಪಾಲನೆಮಾಡಿದಲ್ಲಿ ಕುರಿಗಳ ಬೆಳವಣಿಗೆ ಉತ್ತಮವಾಗುತ್ತದೆ. ಅವು ಬೇಗನೆ ಬೆದೆಗೆ (ಫಲಕ್ಕೆ) ಬರುವುವು. ಮಾಂಸವು ಹೆಚ್ಚುವುದು. ಉಣ್ಣೆಯ ಉತ್ಪಾದನೆ ಹೆಚ್ಚುವುದು. ಉತ್ತಮ ಆಹಾರ ಕುರಿಯ ಅಭಿವೃದ್ಧಿಯ ತಳಪಾಯ.

ಕುರಿಗಳಿಗೆ ವಸತಿಸೌಕರ್ಯ

ಕುರಿಗಳಿಗೆ ಸಾಮಾನ್ಯವಾಗಿ ವಸತಿಸೌಕರ್ಯವಿರಬೇಕೆಂಬ ವಿಷಯು ನಮ್ಮಲ್ಲಿಯ ಕುರುಬರಿಗೆ ಗೊತ್ತಿಲ್ಲವೆಂದು ಹೇಳಬಹುದು. ಹಳ್ಳಿಗಳಲ್ಲಿ ಕುರುಬರು ತಮ್ಮ ಕುರಿ ಹಿಂಡನ್ನು ಜಾಲಿಮುಳ್ಳಿನಿಂದ ಸುತ್ತುವರಿಯಲ್ಪಟ್ಟ ದೊಡ್ಡಿಗಳಲ್ಲಿ ರಾತ್ರಿಯ ಕಾಲದಲ್ಲಿ ಕೂಡಿಹಾಕಿ, ಬೆಳಿಗ್ಗೆ ಅಡವಿಗೆ ಮೇಯಲು ಬಿಡುತ್ತಾರೆ. ಇದರಿಂದ ಕುರಿಗಳು ಚಳಿ, ಗಾಳಿ, ಮಳೆ ಮೊದಲಾದ ಆಘಾತ ವಾತಾವರಣಕ್ಕೆ ಗುರಿಯಾಗುವುದರಿಂದ ಅವುಗಳ ಆರೋಗ್ಯ ಮತ್ತು ಉಣ್ಣೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುವ ಸಂಭವವುಂಟು. ಕುರಿಗಳ ಜೋಪಾಸನೆಗೆ ಹೆಚ್ಚು ಖರ್ಚಿನಿಂದ ಕಟ್ಟಿದ ಪಕ್ಕಾ ಮನೆಗಳು ಅನವಶ್ಯ. ಹಳ್ಳಿಗಳಲ್ಲಿ ಸಿಗುವ ಬಿದಿರು, ಗಳಗಳ ಸಹಾಯದಿಂದ ಹುಲ್ಲಿನ ಜೋಪಡಿಗಳನ್ನು ಕಡಮೆ ಖರ್ಚಿನಲ್ಲಿ ಕಟ್ಟಿ ಅವುಗಳಲ್ಲಿ ಕುರಿಗಳನ್ನಿಟ್ಟು ಸಾಕುವುದು ಉತ್ತಮ ಪದ್ಧತಿ. ರಾತ್ರಿ

ವೇಳೆಯಲ್ಲಿ ಮಳೆಗಾಳಿಯಿಂದ ರಕ್ಷಣೆಪಡೆಯಲು ಸಾದಾ ಹುಲ್ಲುಹೊದಿಕೆಯ ಚಪ್ಪರ ವಿದ್ದರೆಸಾಕು. ಹೆಚ್ಚು ಮಳೆ ಬೀಳುವ ಸ್ಥಳಗಳಲ್ಲಿ 3 ಕಡೆಗಳಲ್ಲಿ ತೆರೆದ ಒಂದು ಕಡೆಗೆ ಗೋಡೆಯಿರುವ ಚಪ್ಪರವಾದರೆ ಸಾಕು. ಚಪ್ಪರವು ಮಧ್ಯದಲ್ಲಿ ಸುಮಾರು 12' ಯಿಂದ 14' ಎತ್ತರವಿದ್ದು, ದಂಡೆಗೆ 4' ಎತ್ತರವಾಗಿ ಇಳಿಜಾರಾಗಿರಬೇಕು. ಮೇಲೆ ಬಿದ್ದ ಮಳೆ ನೀರು ಹರಿದು ಹೋಗುವಂತಿರಬೇಕು. ಇದರ ಸುತ್ತಲೂ 20' ರಿಂದ 25' ಸ್ಥಳವನ್ನು ಬಿಟ್ಟು ತಂತಿಯ ಬೇಲಿಯನ್ನು 5'–6' ಎತ್ತರವಾಗುವಷ್ಟು ಹಾಕಬೇಕು. ತಂತಿಯ ಬೇಲಿ ಮುಳ್ಳಿನ ಬೇಲಿಯಾಗಿರದೆ ಚೌಕಾಕಾರದಿದ್ದು, ನೆಲದಲ್ಲಿ ಒಂದು ಅಡಿ ಯಷ್ಟು ಹೂತಿರಬೇಕು. ಹೊರಗಿನಿಂದ ತೋಳ ಮುಂತಾದ ಕ್ರೂರಪ್ರಾಣಿಗಳು ನುಗ್ಗಿ ಒಳಗೆ ಬರದಂತೆ ಈ ಉಪಾಯವನ್ನು ಕೈಗೊಳ್ಳಬೇಕಾದುದು ಅವಶ್ಯಕವಾದದ್ದು. ಇಂಥ ಚಪ್ಪರಗಳನ್ನು ಗುಡ್ಡದ ಇಳಿಜಾರು ಭೂಮಿಯಲ್ಲಿ ನೀರು ನಿಲ್ಲದೆ ಹರಿದುಹೋಗುವ ಒಣಗಿದ ನೆಲದ ಮೇಲೆ ಕಟ್ಟಬೇಕು ಅಥವಾ ಮಣ್ಣಿನ ತಟ್ಟಿಗಳಿಂದ ತಡಿಕೆಗೋಡೆ ಗಳನ್ನು ಕಟ್ಟಿ, ಅದರ ಮೇಲೆ ಛಾವಣಿಗಾಗಿ ಒಣಗಿದ ಹುಲ್ಲನ್ನು ಹೊದಿಸಿದಲ್ಲಿ ಕುರಿಗಳ ಮನೆಯಾಯಿತು. ಇದರಲ್ಲಿ ಪ್ರತಿಯೊಂದು ಕುರಿಗೆ 10 ರಿಂದ 15 ಚದುರಡಿಗಳಷ್ಟು ಸ್ಥಳಾವಕಾಶವಿರಬೇಕು. ಈ ಜೋಪಡಿಗಳಲ್ಲಿಯೇ ಅವುಗಳು ಮೇವು ತಿನ್ನಲು ಗೋದಲಿ, ಕಾಳಿನ ಮಿಶ್ರಣವನ್ನು ತಿನ್ನುವುದಕ್ಕಾಗಿ ಒಂದು ಬಾನೆ ಮತ್ತು ನೀರಿಗಾಗಿ ಒಂದು ತೊಟ್ಟಿಯು ಇರಬೇಕು.

ಅಧ್ಯಾಯ 6

ಕುರಿ ತಳಿಗಳ ಅಭಿವೃದ್ಧಿ ಹಾಗೂ ಜೋಪಾಸನೆ

'ಜೀವೋ ಜೀವೋತ್ಪತ್ತಿ :' ಒಂದು ಜೀವಿಯಿಂದ ಮತ್ತೊಂದು ಜೀವಿಯು ಹುಟ್ಟುತ್ತದೆ. ಸ್ವಜಾತಿಯ ಸಂತಾನೋತ್ಪತ್ತಿಯೇ ಪ್ರಕೃತಿ ನಿಯಮ. ನಿಸರ್ಗದ ಸಹಾಯವಿಲ್ಲದೆ ಸಜೀವ ಸೃಷ್ಟಿಯು ಸಮರ್ಪಕವಾಗಿ ಸಾಗುವುದಿಲ್ಲ. ಈ ಸಂತಾನಾಭಿ ವೃದ್ಧಿಯ ಕಾರ್ಯವು ತನ್ನಷ್ಟಕ್ಕೆ ತಾನೇ ಸಾಗಬಲ್ಲದಾದರೂ ಮನುಷ್ಯ ತನ್ನ ಅನುಕೂಲತೆ ಮತ್ತು ಅಭಿವೃದ್ಧಿಗೆ ಸರಿಹೋಗುವಂತೆ ಮಾರ್ಪಡಿಸಬಲ್ಲ ಎಂಬುದನ್ನು ತೋರಿಸಿ ಕೊಟ್ಟಿದ್ದಾನೆ.

ಉತ್ತಮ ಕುರಿಗಳ ಉತ್ಪಾದನೆಗೆ ಆಯ್ದು ತಳಿ ಅಭಿವೃದ್ಧಿ, ಮಿಶ್ರತಳಿ ಅಭಿವೃದ್ಧಿ ಮತ್ತು ತಳಿ ಉತ್ತಮೀಕರಣ, ಈ ಮೂರು ಪದ್ಧತಿಗಳು ತಳಿ ಸಂವರ್ಧನೆಯ ಹೆದ್ದಾರಿಗಳು.

1) ಆಯ್ದು ತಳಿ ಅಭಿವೃದ್ಧಿ

ಒಂದೇ ಜಾತಿಗೆ ಸೇರಿದ ಕುರಿಗಳ ಹಿಂಡಿನಲ್ಲಿ ಉತ್ತಮವಾದ ಗುಣ ಲಕ್ಷಣಗಳುಳ್ಳ ಮತ್ತು ಹೆಚ್ಚು ಮಾಂಸ, ಉಣ್ಣೆ ಕೊಡುವ ಕುರಿಗಳನ್ನು ಆರಿಸಿ ಅವುಗಳ ಸಂವರ್ಧನೆ ಮಾಡಿ ಮುಂದಿನ ಪೀಳಿಗೆಯ ಸಂತಾನಾಭಿವೃದ್ಧಿಪಡಿಸುವ ಪದ್ಧತಿಗೆ 'ಆಯ್ದು ತಳಿ ಅಭಿವೃದ್ಧಿ' ಎಂದು ಕರೆಯಲಾಗಿದೆ. ಇದನ್ನು ನಮ್ಮಲ್ಲಿಯ ಕುರುಬರು ಹಿಂದಿನ ಕಾಲದಿಂದ ತಿಳಿದೋ ಅಥವಾ ತಿಳಿಯದೆಯೋ ಆಚರಣೆಯಲ್ಲಿ ತಂದು ಉತ್ತಮ ಕುರಿಗಳನ್ನು ಪಡೆದಿರುತ್ತಾರೆ. ಹೀಗೆ ನೂರಾರು ವರ್ಷಗಳ ಸಂಗೋಪನೆಯ ಪರಿಣಾಮದ ಫಲವೇ ಇಂದು ನಾವು ನೋಡುತ್ತಿರುವ ಉತ್ತಮ ಉಣ್ಣೆ ಮತ್ತು ಮಾಂಸದ ಕುರಿಗಳು. ಹೀಗೆ ಉತ್ತಮ ಕುಲದ ಒಂದೇ ಜಾತಿಯ ಕುರಿಗಳಿಂದ ಹುಟ್ಟಿದ ಕುರಿಗಳನ್ನು ಆರಿಸಿ ಮುಂದಿನ ಸಂತಾನಾಭಿವೃದ್ಧಿಗಾಗಿ ಉಪಯೋಗಿಸುವುದೇ ಉತ್ತಮ ತಳಿ ಅಭಿವೃದ್ಧಿ ಕಾರ್ಯದಲ್ಲಿ ರಾಜಮಾರ್ಗವೆಂದು ತಿಳಿದುಬಂದಿದೆ. ಉಳಿದ ಕಳಪೆ ಕುರಿಗಳನ್ನು ಕ್ರಮೇಣ ಕಡಮೆ ಮಾಡುತ್ತ ತೆಗೆದುಹಾಕಬೇಕು. ಇವನ್ನು ಎಂದಿಗೂ ಅಲಕ್ಷ್ಯಮಾಡಬಾರದು.

ಕುರಿಗಳಲ್ಲಿ ಉಣ್ಣೆಯ ಉತ್ಪಾದನೆಯ ಗುಣ ವಂಶಪಾರಂಪರ್ಯವಾಗಿ ಸಾಗಿ ಬಂದ ಗುಣ. ಇದು ಅನುವಂಶೀಕ ಗುಣ. ಈ ಅನುವಂಶಿಕತೆ ಆಕಸ್ಮಿಕವಲ್ಲ. ಇದು ಒಂದು ಕ್ರಮಬದ್ಧವಾದ ನಿಯಮವನ್ನು ಅನುಸರಿಸುತ್ತದೆ ಎನ್ನುವುದನ್ನು ಗ್ರಿಗರಿ ಮೆಂಡಲ್ ಪ್ರಯೋಗಗಳಿಂದ ಸಿದ್ಧಮಾಡಿ ತೋರಿಸಿಕೊಟ್ಟನು. ಗ್ರಿಗರಿಮೆಂಡಲ್‌ನ ಅನುವಂಶಿಕ ತತ್ವ ಕೇವಲ ಯಾವುದಾದರೂ ಸಾಧಾರಣವಾದ ಒಂದು ಗುಣಕ್ಕೆ ಮಾತ್ರ ಅನ್ವಯಿಸುತ್ತದೆಯೋ ಹೊರತು ಒಂದಕ್ಕಿಂತ ಹೆಚ್ಚು ಕಷ್ಟವಾದ ಗುಣಗಳನ್ನೊಳಗೊಂಡಲ್ಲಿ ಆಗ ಈ ತತ್ವ ಅಷ್ಟು ಸಮರ್ಪಕವಾಗಿ ಅನ್ವಯಿಸುವುದಿಲ್ಲವೆಂದು ಕೆಲವರ ಅಭಿಪ್ರಾಯ. ಉದಾಹರಣಾರ್ಥವಾಗಿ ಕುರಿಗಳಲ್ಲಿ ಉಣ್ಣೆಯ ಉತ್ಪಾದನೆಯು ಮುಖ್ಯವಾಗಿ ಅವುಗಳ ಚರ್ಮದಲ್ಲಿರುವ ಗ್ರಂಥಿಗಳಿಗೆ ಸಂಬಂಧಿಸಿರುತ್ತದೆ. ಅಲ್ಲದೆ ದೈಹಿಕವಾಗಿ ಆಹಾರ, ಪರಿಸರಗಳ ಮೇಲೂ ಅವಲಂಬಿಸಿರುತ್ತದೆ. ಈ ಅನುವಂಶಿಕ ಗುಣಗಳು ಅನುಕೂಲ ವಾತಾವರಣ, ಆಹಾರ, ಸನ್ನಿವೇಶಗಳ ಮೂಲಕ ಮುಂದಿನ ಪೀಳಿಗೆಯಲ್ಲಿ ಕೆಲವೊಂದು ಮಿತಿಯಲ್ಲಿ ಮಾತ್ರ ಸ್ವಲ್ಪ ಪ್ರಗತಿಯನ್ನು ತೋರಬಹುದೇ ಹೊರತು ಸಂಪೂರ್ಣ ಬದಲಾವಣೆಯಾಗುವುದಿಲ್ಲ.

ಈ ಆಯ್ದ ತಳಿ ಅಭಿವೃದ್ಧಿ ಪದ್ಧತಿಯನ್ನು ಬಹುಕಾಲದವರೆಗೆ ಮುಂದುವರಿಸಿದಲ್ಲಿ, ಇದರಿಂದ ಉತ್ಪನ್ನವಾಗುವ ಉತ್ತರೋತ್ತರ ಪೀಳಿಗೆಗಳ ಆರೋಗ್ಯ, ಅಭಿವೃದ್ಧಿ ಅಷ್ಟು ಸಮರ್ಪಕವಾಗಿ ಆಗುವುದಿಲ್ಲವೆಂಬುದು ಕೆಲವು ತಳಿ ಶಾಸ್ತ್ರಜ್ಞರ ಅಭಿಪ್ರಾಯ.

2) ಮಿಶ್ರತಳಿ ಅಭಿವೃದ್ಧಿ

ಏನೂ ಸಂಬಂಧವಿಲ್ಲದ ಎರಡು ಪ್ರತ್ಯೇಕ ಜಾತಿಯ ಕುರಿಗಳ ಸಂಕಲನದಿಂದ ಕುರಿಗಳ ಸಂತಾನಾಭಿವೃದ್ಧಿಮಾಡುವ ಪದ್ಧತಿಗೆ ಮಿಶ್ರತಳಿ ಅಭಿವೃದ್ಧಿ ಎಂದು ಕರೆಯುತ್ತಾರೆ. ಇತ್ತೀಚೆಗೆ ಮಿಶ್ರತಳಿ ಅಭಿವೃದ್ಧಿ ಹೆಚ್ಚು ಜನಪ್ರಿಯವಾಗಿದ್ದರೆ ಉತ್ತಮ ಉಣ್ಣೆಗೆ ಹೆಸರಾದ ಎರಡು ಪ್ರತ್ಯೇಕ ಜಾತಿಯ ಕುರಿಗಳನ್ನು ಸಂಕರಗೊಳಿಸಿ ತಳಿ ಅಭಿವೃದ್ಧಿ ಮಾಡುವುದೇ ಮಿಶ್ರತಳಿ ಸಂವರ್ಧನೆ.

3) ತಳಿ ಉತ್ತಮೀಕರಣ

ಈ ಪದ್ಧತಿಯ ಮುಖ್ಯ ಉದ್ದೇಶವೆಂದರೆ ಕೀಳುದರ್ಜೆಯ ಕುರಿಗಳ ಸಂತಾನವನ್ನು ಹಂತಹಂತವಾಗಿ ಸುಧಾರಿಸುವುದು ಮತ್ತು ಅವುಗಳಿಂದ ಹೆಚ್ಚು ಉಪಯೋಗ ಪಡೆಯುವುದು. ಈ ಪದ್ಧತಿಯ ಪ್ರಕಾರ ಶ್ರೇಷ್ಠ ಜಾತಿಯ ಟಗರಿನಿಂದ ಸಾಧಾರಣ ಕುರಿಗೆ ಹುಟ್ಟಿದ ಮೊದಲನೆಯ ಸಂತತಿಯಲ್ಲಿಯೇ ಆ ಟಗರಿನ ಗುಣದಲ್ಲಿ ಶೇಕಡಾ 50 ಭಾಗ, ಎರಡನೆಯ ಪೀಳಿಗೆಯಲ್ಲಿ ಶೇಕಡಾ 75 ಭಾಗ ಮೂರನೆಯ ಪೀಳಿಗೆಯಲ್ಲಿ, ಶೇಕಡಾ

ಮರಿಗಳ ಜೋಪಾಸನೆ

ಕೊನೆಯ ಎರಡು ತಿಂಗಳುಗಳ ಅವಧಿಯಲ್ಲಿ ಗರ್ಭಸ್ಥ ಮರಿಗಳ (ಕುರಿಗಳ ಗರ್ಭಾವಸ್ಥೆಯ ಅವಧಿ 5 ತಿಂಗಳು) ಮರಿಗಳ ಬೆಳವಣಿಗೆ ಹೆಚ್ಚಾಗಿ ಆಗುವುದರಿಂದ ಗಬ್ಬವಾದ ಕುರಿಗಳಿಗೆ ಈ ವೇಳೆಯಲ್ಲಿ ಉತ್ತಮ ಆಹಾರ ಒದಗಿಸುವುದು ಅವಶ್ಯ. ಸಾಧ್ಯವಿದ್ದಲ್ಲಿ ತಿಂಡಿ ಮಿಶ್ರಣವನ್ನು ಕೊಡುವುದೊಳಿತು. ಅಂದರೆ ಕುರಿ ಮರಿಹಾಕಿದ ನಂತರ ಹಾಲು ಹೆಚ್ಚುವುದು. ಇದರಿಂದ ಮರಿಗಳು ಚೆನ್ನಾಗಿ ಬೆಳೆಯುವುವು. ಮರಿ ಹುಟ್ಟಿದ ಕೂಡಲೇ ಅದನ್ನು ಸ್ವಚ್ಛಗೊಳಿಸಿ ಹೊಕ್ಕುಳದ ಹುರಿಗೆ ಕ್ರಿಮಿನಾಶಕ ಔಷಧಿ ಲೇಪಿಸಬೇಕು. ಇಲ್ಲದಿದ್ದಲ್ಲಿ ಹೊಕ್ಕುಳಬಾವು, ಸಂದುಬಾವು ಬರುವ ಸಂಭವವಿದೆ. ಮರಿಗೆ ಗಿಣ್ಣದ ಹಾಲನ್ನು ಹುಟ್ಟಿದ 2–3 ಗಂಟೆಗಳಲ್ಲಿಯೇ ಒದಗಿಸಬೇಕು. ಕುರಿಯನ್ನು ಹಿಡಿದು ಮರಿಗೆ ಮೊಲೆಯೂಡಿಸಲು ಸಹಾಯ ಮಾಡಬೇಕು. ಕುರಿ ತನ್ನ ಮರಿ ಹುಟ್ಟಿದ ಕೂಡಲೇ ಅದರ ಮೈ ನೆಕ್ಕಿ ನಂತರ ಅದರ ವಾಸನೆಯಿಂದ ಕುರಿ ತನ್ನ ಮರಿಯನ್ನು ಗುರುತು ಹಿಡಿಯುವುದು. ಒಂದು ವೇಳೆ ಕುರಿಗೆ ಮರಿಹಾಕಿದ ಮೇಲೆ ಹಾಲು ಬೀಳದಿದ್ದರೆ ಅಥವಾ ತಾಯಿ ಸತ್ತಿದ್ದರೆ ಹಾಲು ಹೆಚ್ಚಿದ್ದ ಕುರಿಯ ಹಾಲನ್ನು ಮರಿಯ ಮೈಮೇಲೆ ಚಿಮುಕಿಸಿ, ಅದನ್ನು ಮೂಸಿನೋಡಿಸಿ ಆ ಮರಿಯನ್ನು ಈ ಬೇರೆ ಕುರಿಗೆ ಹಾಲು ಕುಡಿಸಲು ಹಚ್ಚಿ ಸಾಕುತಾಯಿಯನ್ನಾಗಿ ಮಾರ್ಪಡಿಸಬಹುದು. ಮರಿಗಳನ್ನು ಕುರಿಗಳಿಂದ ಬೇರ್ಪಡಿಸಿ, ಒಂದು ತಿಂಗಳಾಗುವವರೆಗೆ ದೊಡ್ಡಿಯಲ್ಲಿಯೇ ಬಿಡುವುದೊಳಿತು. ಆಗ ಅವುಗಳಿಗೆ ಮುಂಜಾನೆ, ಸಂಜೆ ಹಾಲೂಡಿಸಬೇಕು. ಇಡೀ ರಾತ್ರಿ ತಾಯಿಯೊಡನೆ ಇರಲು ಬಿಡಬೇಕು. ಈ ಅವಧಿಯಲ್ಲಿ ಮರಿಗಳಿಗೆ ತೊಗರಿ, ಸೋಯಾಬೀನ್ ಅಥವಾ ಸಣಬು ಮುಂತಾದುವುಗಳ ಸೊಪ್ಪನ್ನು ಕಿವಚುಕಟ್ಟಿ ತೂಗುಬಿಟ್ಟರೆ ತೊಪ್ಪಲನ್ನು ಮರಿಗಳು ತಿನ್ನುತ್ತವೆ.

ಒಂದು ಒಂದೂವರೆ ತಿಂಗಳ ನಂತರ ಮರಿಗಳನ್ನು ಮಾತ್ರ ಮುಂಜಾನೆ ಮತ್ತು ಮಧ್ಯಾಹ್ನ 1–2 ಗಂಟೆ ಚಿಗುರುಹುಲ್ಲು ಇದ್ದಲ್ಲಿ ಅಥವಾ ಪೈರು ಕೊಯ್ದ ಹೊಲಗಳಲ್ಲಿ ಮೇಯಿಸಿಕೊಂಡು ಬರುವುದು ಒಳಿತು. ಅವು 4 ತಿಂಗಳುಗಳಾದ ಬಳಿಕ ಹಾಲೂಡಿಸುವುದನ್ನು ಬಿಡಿಸಬೇಕು. ಈಗ ಅವುಗಳಿಗೆ ಸ್ವಲ್ಪ ತಿಂಡಿ ಮಿಶ್ರಣವನ್ನು ಕೊಡುವುದರಿಂದ ಹಾಲುಬಿಡಿಸಿದ ಪರಿಣಾಮ ಕಂಡು ಬರಲಾರದು. ಸರಾಸರಿ ಕುರಿಮರಿಗಳಿಗೆ ಮೊದಲನೆಯ ಒಂದು ತಿಂಗಳು ದಿನಕ್ಕೆ 2 ಪೌಂಡಿನಷ್ಟು ಹಾಲು ಬೇಕಾಗುತ್ತದೆ. 4 ವಾರಗಳ ನಂತರ ಎರಡನೆಯ ತಿಂಗಳು ದಿನಕ್ಕೆ $1\frac{1}{2}$ ಪೌಂಡು ಹಾಲು ಬೇಕಾಗುತ್ತದೆ.

ಒಂದರಿಂದ 3 ತಿಂಗಳಗಳ ಕುರಿಮರಿಗಳಿಗೆ ದಿನ ಒಂದಕ್ಕೆ 3 ಔನ್ಸ್ ಕಾಳಿನ ಮಿಶ್ರಣವನ್ನು ಕೊಟ್ಟು ಬೆಳೆಸಬೇಕು. 3 ತಿಂಗಳುಗಳಿಂದ 6 ತಿಂಗಳುಗಳ ಕುರಿಮರಿಗಳಿಗೆ ದಿನ

ಒಂದಕ್ಕೆ 5 ಔನ್ಸ್ ಕಾಳಿನ ಮಿಶ್ರಣವನ್ನು ಕೊಡಬೇಕು. 6 ತಿಂಗಳುಗಳಿಂದ 9 ತಿಂಗಳುಗಳ ಮರಿಗಳಿಗೆ ದಿನ ಒಂದಕ್ಕೆ 6 ಔನ್ಸ್ ಕಾಳಿನ ಮಿಶ್ರಣವನ್ನು ಕೊಡಬೇಕು. ಒಂದು ವರ್ಷದ ಕೆಳಗಿನ ಮರಿಗಳು ಸರಾಸರಿ ದಿನವೊಂದಕ್ಕೆ 6 ಪೌಂಡು ಮೇವು ತಿನ್ನುತ್ತವೆ. ಹೀಗೆ ಒಂದು ವರ್ಷದ ತನಕ ಕುರಿಮರಿಗಳನ್ನು ಬಹಳ ಜೋಪಾನವಾಗಿ ಸಾಕಿ ಬೆಳೆಸಬೇಕು. ಅಂದರೆ, ಮುಂದೆ ಅವು ಉತ್ತಮ ಕುರಿಗಳಾಗಿ ಬೆಳೆದು ಹೆಚ್ಚು ಉಣ್ಣೆ, ಮಾಂಸವನ್ನು ಉತ್ಪಾದಿಸುತ್ತವೆ.

ಅಧ್ಯಾಯ 7

ಕುರಿಗಳ ರೋಗಗಳು

1) ಕುರಿಗಳ ಮೈಲಿಬೇನೆ ಅಥವಾ ಬೊಬ್ಬೆರೋಗ

ಕುರಿಗಳಿಗೆ ಬರುವ ಸಾಂಕ್ರಾಮಿಕ ರೋಗಗಳಲ್ಲೆಲ್ಲ, ಮೈಲಿಬೇನೆ ಅಥವಾ ಬೊಬ್ಬೆ ರೋಗ (ಸಿಡುಬು ರೋಗ) ಬಹಳ ಅಪತ್ಕಾರಕವಾದ ರೋಗ. ಈ ಮೈಲಿಬೇನೆಯಿಂದ ದೊಡ್ಡ ಕುರಿಗಳಿಗಿಂತ,* ಕುರಿಮರಿಗಳು ಹೆಚ್ಚು ಸಂಖ್ಯೆಯಲ್ಲಿ ಸಾಯುತ್ತವೆ. ರೋಗ ಬಂದ ಕುರಿಗಳಲ್ಲಿ ಸಾಮಾನ್ಯವಾಗಿ ನೂರಕ್ಕೆ 70 ರಿಂದ 80 ರಷ್ಟು ಸಾಯುತ್ತವೆ. ಈ ರೋಗವು ಕುರಿಯಿಂದ ಕುರಿಗೆ ಬಹಳ ಬೇಗನೆ ಹೆಚ್ಚುವುದರಿಂದ ಇದರಿಂದ ಅಪಾರ ಅನಾಹುತವಾಗುತ್ತದೆ. ಈ ಕುರಿಗಳ ಮೈಲಿಬೇನೆಯು ಮನುಷ್ಯರಿಗೆ ಬರುವ ಸಿಡುಬು ರೋಗವನ್ನು ಹೋಲುತ್ತದೆ. ಈ ರೋಗವು ಚಳಿಗಾಲಕ್ಕಿಂತ ಬೇಸಿಗೆಯ ಕಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ರೋಗ ಒಂದುಸಲ ಬಂದು ಗುಣವಾದ ಕುರಿಗೆ ಪುನಃ ಬರುವುದಿಲ್ಲ. ಹೀಗೆ ರೋಗದಿಂದ ಗುಣವಾದ ಕುರಿಗಳ ರಕ್ತದಲ್ಲಿ (ಶರೀರದಲ್ಲಿ) ರೋಗ ಬಾರದಂತೆ ತಡೆಯುವ ರೋಗಪ್ರತಿಕಾರಕ ಶಕ್ತಿಯನ್ನುಂಟುಮಾಡುವ ಸೂಕ್ಷ್ಮ ಅಣುಗಳು ಹುಟ್ಟುವುದರಿಂದಲೇ ಅವುಗಳಿಗೆ ಪುನಃ ರೋಗ ಬಾರದಿರುವುದಕ್ಕೆ ಕಾರಣ.

ಬೇನೆಯ ಕಾರಣ: ಈ ರೋಗವು ಕಣ್ಣಿಗೆ ಕಾಣಿಸದ ಒಂದು ತರಹದ ನಂಜಿನಿಂದ ಉತ್ಪನ್ನವಾಗುತ್ತದೆ. ಇದರ ವಿಷಕ್ರಿಮಿಗಳು ಸೂಕ್ಷ್ಮದರ್ಶಕ ಯಂತ್ರದಿಂದ ಸಹ ಕಾಣಿಸದಷ್ಟು ಅತಿ ಸೂಕ್ಷ್ಮವಾಗಿರುತ್ತವೆ. ರೋಗದಿಂದ ನರಳುತ್ತಿರುವ ಕುರಿಗಳ ಉಣ್ಣೆ, ಚರ್ಮ, ಹಿಕ್ಕೆ ಮತ್ತು ಮೈಮೇಲಿನ ಗುಳ್ಳೆಗಳು ಒಣಗಿದ ಮೇಲೆ ಅದರ ಮೇಲಿನ ಹಕ್ಕಳೆಗಳೆಲ್ಲವೂ ರೋಗದ ಸೋಂಕಿನಿಂದ ಕೂಡಿರುತ್ತವೆ. ಈ ರೋಗದ ಸೋಂಕು ಗಾಳಿ, ಧೂಳು, ಉಣ್ಣೆಯಿಂದಲೂ ಸಹ ಹರಡುವುದು. ಹೀಗೆ ರೋಗದಿಂದ ಕೂಡಿದ ನಂಜು ಅಥವಾ ದೂಷಿತ ಪದಾರ್ಥವು ಮತ್ತು ಅತಿ ಸೂಕ್ಷ್ಮ ವಿಷಕ್ರಿಮಿಗಳು ಒಂದು ಕುರಿ

ಯಿಂದ ಮತ್ತೊಂದು ಕುರಿಯ ಶರೀರದಲ್ಲಿ ಆಹಾರ, ನೀರು, ಗಾಳಿಯ ಮೂಲಕ ಪ್ರವೇಶಿಸಿ ವ್ಯಾಪಿಸುವುದೇ ಇದರ ಪ್ರಸಾರಕ್ಕೆ ಮುಖ್ಯ ಕಾರಣ. ಹೀಗೆ ಕುರಿಯಿಂದ ಕುರಿಗೆ, ಮಂದೆಯಿಂದ ಮಂದೆಗೆ ಹರಡಿ, ವ್ಯಾಪಿಸಿ, ಹಬ್ಬಿ, ಅನಾಹುತ ಮಾಡುವುದೇ ಈ ರೋಗದ ಒಂದು ವಿಶೇಷ ಲಕ್ಷಣ.

ರೋಗದ ಲಕ್ಷಣಗಳು: ಕುರಿಗಳು ರೋಗದ ಪ್ರಾರಂಭಕ್ಕೆ ಸುಂದಾಗಿ ಮಂದೆಯನ್ನು ಬಿಟ್ಟು, ಮೇಯದೆ ಒಂಟಿಯಾಗಿ ನಿಲ್ಲುತ್ತವೆ. ದೇಹದಲ್ಲಿ ವಿಶೇಷ ಜ್ವರ ಕಾಣಿಸಿ ಕೊಳ್ಳುವುದು. ದೇಹದ ಉಷ್ಣತೆ 105° ರಿಂದ 107° Fವರೆಗೆ ಇರುತ್ತದೆ. ಶರೀರದ ತುಪ್ಪಟವಿಲ್ಲದ ಸ್ಥಳಗಳಲ್ಲಿ ಅಂದರೆ ಕಂಕುಳ ಸಂದಿನಲ್ಲಿ ಮುಂಗಾಲು ಪಕ್ಕೆಯ ಒಳಭಾಗ, ತೊಡೆಗಳ ಒಳಭಾಗದಲ್ಲಿ ಮತ್ತು ಹೊಟ್ಟೆಯ ಮೇಲಿನ ಭಾಗ, ಬಾಯಿ, ತುಟಿ, ಮೂಗುಗಳ ಮೇಲೆ ಗುಲಾಬಿ ಬಣ್ಣದಂತೆ ಕೆಂಪಾಗಿರುತ್ತದೆ. ಸೊಳ್ಳೆಗಳ ಕಡಿತದಿಂದ ಮೈಮೇಲೆ ಕೆಂಪಾದ ಗಾದರಿಗಳು ಎದ್ದಂತೆ ಕಾಣುತ್ತಿರುತ್ತದೆ.

ಹೀಗಾದ 4 ದಿವಸಗಳ ನಂತರ ಮೈಮೇಲೆ ಕೆಂಪಾದ ಸಣ್ಣ ಸಣ್ಣ ಬೊಕ್ಕೆಗಳು ಕಂಡುಬರುತ್ತವೆ. ಈ ಬೊಕ್ಕೆಗಳು ಮೂಗು, ಕಿವಿ, ಬಾಯಿ ಮೇಲೆ ಸಹ ಕಾಣಿಸಿ ಕೊಳ್ಳುತ್ತವೆ. ಕಣ್ಣು ಮತ್ತು ಮೂಗಿನೊಳಗಿನಿಂದ ತಿಳಿಯಾದ ನೀರು ಸೋರುತ್ತಿರುತ್ತದೆ. ಬರಬರುತ್ತ ಈ ನೀರು ಗಟ್ಟಿಯಾಗಿ ಕೀವಿನಿಂದ ಕೂಡಿರುತ್ತದೆ. ಇದು ಗಟ್ಟಿಯಾಗಿ ಮೂಗಿನಹೊಳ್ಳೆಗಳಿಗೂ ಕಣ್ಣಿನ ರೆಪ್ಪೆಗಳಿಗೂ ಮೆತ್ತಿಕೊಂಡಿರುತ್ತದೆ.

ಇದಾದ ಮೂರು ದಿವಸಗಳ ನಂತರ ಈ ಸಣ್ಣ ಸಣ್ಣ ಕೆಂಪಾದ ಬೊಕ್ಕೆಗಳು ಮೊದಲು ತಿಳಿಯಾದ ನೀರಿನಿಂದ ತುಂಬಿಕೊಂಡು, ಕಡಲೆ ಕಾಳಿನಷ್ಟು ದಪ್ಪವಾದ ಗುಳ್ಳೆಗಳಾಗಿ ಪರಿವರ್ತನೆ ಹೊಂದುತ್ತವೆ. ತಿಳಿಯಾದ ನೀರು ಒಗ್ಗಡವಾಗಿ ಈ ಗುಳ್ಳೆಗಳು ಶರೀರದ ಮೇಲೆ ಮುತ್ತಿನಮಣಿಗಳಂತೆ ಕಾಣುತ್ತಿರುತ್ತವೆ. ಆದುದರಿಂದಲೇ ಈ ರೋಗವನ್ನು ಕುರಿಗಳ 'ಬೊಬ್ಬೆ ರೋಗ' ಎಂದು ಕರೆಯಲಾಗಿದೆ. ಈ ಗುಳ್ಳೆಗಳು $\frac{1}{8}$ ಅಂಗುಲದಿಂದ ಹಿಡಿದ $\frac{1}{8}$ ಅಂಗುಲದಷ್ಟು ಉಬ್ಬಿಕೊಂಡಿರುತ್ತವೆ. ಇವುಗಳ ಮೇಲಿನ ಭಾಗವು ಮಾತ್ರ ಚಪ್ಪಟೆಯಾಗಿರುತ್ತದೆ. ಮನುಷ್ಯರಲ್ಲಿ ಈ ಸಿಡುಬುರೋಗದ ಗುಳ್ಳೆಗಳ ಮೇಲಿನ ಭಾಗವು ಶಂಖದ ಆಕಾರವಾಗಿಯೂ, ದನಗಳಲ್ಲಿ ಮಧ್ಯದಲ್ಲಿ ತಗ್ಗಾಗಿ ಅಂದರೆ ಅಡಿಕೆ ಬೆಟ್ಟದಂತೆ ಕಾಣುತ್ತಿರುತ್ತದೆ.

ಮುಂದೆ 3 ಅಥವಾ 4 ದಿವಸಗಳ ಮೇಲೆ ಈ ಗುಳ್ಳೆಗಳು ಕೀವಿನಿಂದ ತುಂಬಿಕೊಂಡು ದೊಡ್ಡ ಗುಳ್ಳೆಗಳಾಗುತ್ತವೆ. ಈ ಗುಳ್ಳೆಗಳು ಒಣಗಿ ಅವುಗಳ ಮೇಲೆ ಕಪ್ಪಾದ ಹಕ್ಕಳೆ ಕಟ್ಟಿಕೊಳ್ಳುತ್ತದೆ. ಈ ಗುಳ್ಳೆಗಳು ಪೂರ್ಣವಾಗಿ ಒಣಗಿದ ಮೇಲೆ ಅವುಗಳ

ಮೇಲಿನ ಪಕ್ಕಳೆಯು ಉದುರಿಬೀಳುತ್ತದೆ. ಹಕ್ಕಳೆಯು ಉದುರಿದ ನಂತರ ಆ ಭಾಗವು ಕೆಂಪಾಗಿ ಮಧ್ಯದಲ್ಲಿ ತಗ್ಗಾಗಿ ತೊಗರಿಬೇಳೆಯಂತೆ ಕಾಣುತ್ತಿರುತ್ತದೆ.

ಈ ರೋಗವು ಸೌಮ್ಯರೂಪದಲ್ಲಿಯೂ ಮತ್ತು ಉಗ್ರರೂಪದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಸೌಮ್ಯರೂಪದಲ್ಲಿ ಕುರಿಗಳು 3 ರಿಂದ 4 ವಾರದವರೆಗೆ ರೋಗದಿಂದ ನರಳುತ್ತವೆ ಮತ್ತು ನೂರಕ್ಕೆ 10 ರಷ್ಟು ಬದುಕುವ ಸಂಭವವುಂಟು. ಹೀಗೆ ಬದುಕಿದ ಕುರಿಗಳಿಗೆ ಪುನಃ ಈ ರೋಗ ಬರುವುದಿಲ್ಲ. ಉಗ್ರರೂಪದಲ್ಲಿ ಕುರಿಗಳ ಮೈಯಲ್ಲಿ ಜ್ವರವು ಬಹಳ ಹೆಚ್ಚಾಗಿರುತ್ತದೆ. ಹೆಚ್ಚಿನ ಜ್ವರದ ತಾಪದಿಂದ ಕುರಿ ಬಹಳ ಸುಂದಾಗಿ ನಿಲ್ಲಲು ತ್ರಾಣವಿಲ್ಲದಂತಾಗುತ್ತದೆ. ಶರೀರದ ಮೇಲೆ ಗುಳ್ಳೆಗಳು ಕಾಣಿಸಿಕೊಳ್ಳುವುದು ಕಡಮೆ. ಅವು ಶರೀರದಲ್ಲಿಯೇ ಇಂಗಿಹೋಗುತ್ತವೆ. ಕುರಿಗಳು ಕಣ್ಣು ಕಳೆದುಕೊಳ್ಳುತ್ತವೆ. ಮೈಮೇಲಿನ ಉಣ್ಣೆಯು ಉದುರಿಹೋಗುತ್ತದೆ. ಚರ್ಮವು ಒಡೆದು ಬಿರುಕು ಬಿರುಕಾಗಿ ಕಾಣಿಸಿಕೊಳ್ಳುತ್ತದೆ. ಮೂಗಿನಲ್ಲಿ ಗಟ್ಟಿಯಾದ ಹೊಲಸಾದ ಸಿಂಬಳ ತುಂಬಿರುತ್ತದೆ. ಕೆಲವು ವೇಳೆ ಈ ರೋಗದ ಸೋಂಕು ಹೊಟ್ಟೆ ಮತ್ತು ಕರುಳುಗಳಿಗೂ ಹಬ್ಬುವುದುಂಟು. ಇಂಥ ಸಂದರ್ಭದಲ್ಲಿ ಕುರಿಗಳು ತೆಳ್ಳಗೆ ನೀರಾಗಿ ಉಚ್ಚೆಕೊಳ್ಳುತ್ತವೆ. ತುಂಬ ಗಬ್ಬವಾಗಿದ್ದ ಕುರಿಗಳು ಕಂದು ಹಾಕುತ್ತವೆ (ಗರ್ಭಪಾತವಾಗುತ್ತದೆ). ಈ ಉಗ್ರರೂಪದ ಮೈಲಿಬೇನೆಯಿಂದ ಕುರಿಗಳು ಬದುಕುವ ಸಂದರ್ಭ ಬಹಳ ಕಡಮೆ.

ಉಪಚಾರ: ಈ ರೋಗವನ್ನು ಗುಣಪಡಿಸುವಂತಹ ಔಷಧಿ ಇನ್ನೂ ಕಂಡುಬಂದಿಲ್ಲ. ಅಲ್ಲದೆ ಈ ರೋಗಬಂದ ಕುರಿಗಳು ಬೇರೆ ನಿರೋಗಿ ಕುರಿಗಳಿಗೆ ರೋಗ ಹಬ್ಬುವುದಕ್ಕೆ ಕಾರಣವಾಗುತ್ತದೆ. ರೋಗಬಂದ ಕುರಿಗಳನ್ನು ಬೇರ್ಪಡಿಸಿ ಅವುಗಳ ಮೈಗೆ ಬೇವಿನ ಸೊಪ್ಪು ಮತ್ತು ಅರಸಿನಪುಡಿ ಸೇರಿಸಿ ಚೆನ್ನಾಗಿ ಅರೆದು ಹಚ್ಚಬೇಕು. ಹೀಗೆ ಮಾಡಿದಾಗ್ಯೂ ಸಹ ಅವು ಬದುಕುವುದು ಬಹಳ ಕಡಮೆ ಎಂದು ಹೇಳಬಹುದು. ಆದ್ದರಿಂದ ಈ ರೊಗಕ್ಕೆ ಔಷಧೋಪಚಾರ ಮಾಡುವುದಕ್ಕಿಂತ ರೋಗವು ಬಾರದಂತೆ ಮುಂಚಿತವಾಗಿಯೇ ಎಲ್ಲ ಕುರಿಗಳಿಗೆ ಪಶುವೈದ್ಯರಿಂದ ಮೈಲಿಕೆಗಿಸಿ ಕುರಿಗಳನ್ನು ಕಾಪಾಡುವುದೊಂದೇ ಸುಲಭ ಮತ್ತು ಉತ್ತಮ ಮಾರ್ಗ. ಕುರಿಯ ಮರಿಗಳಿಗೆ 3 ತಿಂಗಳಾದ ಕೂಡಲೇ ಮಕ್ಕಳಿಗೆ ಮೈಲಿಹಾಕಿಸುವಂತೆ ಇವುಗಳಿಗೆ ಮೈಲಿ ತೆಗೆಸಿದಲ್ಲಿ ಈ ರೋಗಕ್ಕೆ ಅಂಜುವ ಕಾರಣವಿಲ್ಲ.

2) ನರಡಿ ಅಥವಾ ಲದ್ದಿಬೇನೆ (ಅಂಥ್ರಾಕ್ಸ್)

ಇದು ಕುರಿಗಳಲ್ಲಿ ಬಹಳ ಹಾನಿಯನ್ನು ಮಾಡುವ ಇನ್ನೊಂದು ಕುಟ್ಟು ರೋಗ.

ಈ ಆಂಥ್ರ್ಯಾಕ್ಸ್ ರೋಗವು ಒಂದು ವಿಶಿಷ್ಟ ಜಾತಿಯ ಅತಿ ಸೂಕ್ಷ್ಮವಾದ ಏಕಾಣು ಜೀವಿಯಿಂದ ಹುಟ್ಟುತ್ತದೆ. ಈ ಸೂಕ್ಷ್ಮ ಅಣುಕ್ರಿಮಿ ಕುರಿಗಳ ಶರೀರದೊಳಗೆ ಸೇರಿ, ಅವರ ರಕ್ತದಲ್ಲಿ ತಾಡತೋಪತಾಡವಾಗಿ ಬಹಳ ಬೇಗನೆ ವೃದ್ಧಿಹೊಂದಿ, ಬೆಳೆದು, ರಕ್ತವನ್ನೆಲ್ಲ ಕೆಡಿಸಿ ವಿಷಮಯ ಮಾಡಿ ಶರೀರವೊಳಗೆಲ್ಲಾ ವ್ಯಾಪಿಸಿ ಕುರಿಗಳನ್ನು ಬಹಳ ಬೇಗನೆ ಕೊಂದುಬಿಡುತ್ತವೆ. ಈ ರೋಗಕ್ಕೆ ಕಾರಣೀಭೂತವಾದ ಬ್ಯಾಸಿಲಸ್ ಆಂಥ್ರೇಸಿಸ್ ಏಕಾಣು ಜೀವಿಯನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಿದರೆ ಅದು ಕಬ್ಬಿನ ಗಣಿಕೆಯ ಆಕಾರದಂತೆ ಕಾಣಿಸುತ್ತದೆ ಅಥವಾ ಎರಡು, ಮೂರು, ಒಂದರ ಕೆಳಗೆ ಒಂದು ಸೇರಿಕೊಂಡು ಒಂದು ಸಣ್ಣ ಸರಪಳಿಯ ಆಕಾರದಂತೆ ಕಾಣುತ್ತದೆ. ಈ ಏಕಾಣುಗಳು ಕುರಿಯ ಶರೀರದಿಂದ ಹೊರಗೆ ಬಂದ ಮೇಲೆ ಸರಿಯಾದ ವಾತಾವರಣ ಸಿಕ್ಕಿದಲ್ಲಿ ಅವುಗಳ ರೂಪವೇ ಬದಲಾಗುತ್ತದೆ. ಇಂಥ ಸಂದರ್ಭಗಳಲ್ಲಿ ಇವು ತೆಳುವಾದ ಪೊರೆಯ ಮೇಲು ಕವಚವನ್ನು ಹೊಂದುತ್ತವೆ. ಆಗ ಇವುಗಳನ್ನು ನಾಶ ಮಾಡುವುದು ಬಹಳ ಕಷ್ಟವಾಗುತ್ತದೆ ಮತ್ತು ಅವು ಈ ಸ್ಥಿತಿಯಲ್ಲಿ ಭೂಮಿಯಲ್ಲಿ ಬಹುಕಾಲ ಜೀವಂತ ಉಳಿಯುತ್ತವೆ. ಹೀಗಾಗಿ ಈ ನರಡೀ ರೋಗವು ಆಗಾಗ ಕುರಿಗಳಲ್ಲಿ ಕಾಣಿಸಿಕೊಳ್ಳುತ್ತಾ ಇರುತ್ತದೆ. ಈ ಏಕಾಣುಜೀವಿ ಗ್ರ್ಯಾಮ್ ಬಣ್ಣ ಹೊಂದುತ್ತದೆ. ಅದರ ಶರೀರ ನೇರಳೆ ಬಣ್ಣ ಹಾಗೂ ಹೊರಕವಚ ಗುಲಾಬಿ ಬಣ್ಣ ಧರಿಸುತ್ತದೆ.

ಈ ಅಣುಕ್ರಿಮಿಗಳು ರೋಗದಿಂದ ಬಳಲುತ್ತಿರುವ ಕುರಿಗಳ ಮಲಮೂತ್ರ, ಜೊಲ್ಲು, ಸಿಂಬಳದ ಮೂಲಕ ಅವು ಮೇಯುತ್ತಿದ್ದ ಹುಲ್ಲುಗಾವಲು ಮತ್ತು ಓಡಾಡಿದ ಸ್ಥಳವನ್ನು ದೂಷಿತಮಾಡುತ್ತವೆ. ಇಂಥ ದೂಷಿತ ಪ್ರದೇಶಗಳಲ್ಲಿ ಬೇರೆ ನಿರೋಗಿ ಕುರಿಗಳು ಮೇಯಲು ಬಂದಾಗ ಅವುಗಳ ಆಹಾರ, ನೀರು ಅಥವಾ ಸಣ್ಣ ಪುಟ್ಟ ಗಾಯಗಳ ಮೂಲಕ ಶರೀರದಲ್ಲಿ ಪ್ರವೇಶಿಸಿ ರೋಗವನ್ನುಂಟು ಮಾಡುತ್ತವೆ. ನರಡೀ ಜಾಡ್ಯದಿಂದ ಸತ್ತ ಕುರಿಗಳ ಚರ್ಮವನ್ನು ಸುಲಿಯುವಾಗ ಅಥವಾ ಅದರ ತೊಗಲನ್ನು ಹದ ಮಾಡುವಾಗ ಕೈಯಲ್ಲಿಯ ಗಾಯದ ಮೂಲಕ ಅವರಿಗೂ ಹಬ್ಬುತ್ತದೆ. ಈ ರೋಗದಿಂದ ಸತ್ತ ಕುರಿಗಳ ಉಣ್ಣೆಯಲ್ಲಿಯೂ ಸಹ ಈ ರೋಗದ ಕ್ರಿಮಿಗಳು ಒಣಗಿದ ಕೃಶವಾಗಿ ಸೇರಿಕೊಂಡಿರುತ್ತವೆ. ಇಂಥ ಉಣ್ಣೆಯನ್ನು ಬಡಿದು ಝಾಡಿಸುವಾಗ ಏಳುವ ಧೂಳಿನೊಂದಿಗೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಶ್ವಾಸಕೋಶದೊಳಗೆ ಸೇರುವ ಸಂಭವವುಂಟು. ಇದಕ್ಕೆ 'ಉಣ್ಣೆ ವಿಂಗಡಿಸುವವರ ರೋಗ' ಎಂದೂ ಕರೆಯುತ್ತಾರೆ. ಹೀಗೆ ಈ ನರಡಿ ರೋಗ ದೂಷಿತ ಆಹಾರ, ನೀರು, ಮೇವು, ಗಾಳಿ, ಮಾಂಸ ಇತ್ಯಾದಿಗಳ ಮೂಲಕ ಗಾಯಗಳ ಮೂಲಕ ಹುಟ್ಟುತ್ತದೆ.

ರೋಗದ ಲಕ್ಷಣಗಳು: ಈ ರೋಗದ ಮುಖ್ಯ ಲಕ್ಷಣಗಳೆಂದರೆ—ರೋಗಪೀಡಿತ

ವಾದ ಕುರಿಗಳು ಬಹಳ ತೀವ್ರವಾಗಿ ಸಾಯುತ್ತವೆ; ಬೆಳಿಗ್ಗೆ ಮೇಯಲುಹೋದ ಕುರಿ ಅಡವಿಯಿಂದ ತಿರುಗಿಬಂದು, ರಾತ್ರಿಯಲ್ಲಿ ದೊಡ್ಡಿಯಲ್ಲಿ ಕೂಡಿಹಾಕಿದರೆ ಬೆಳಿಗ್ಗೆ ನೋಡುವಾಗ ಸತ್ತು ಬಿದ್ದಿರುತ್ತದೆ. ಬೇನೆಯ ಲಕ್ಷಣಗಳಾಗಲೀ ಅಥವಾ ಔಷಧೋಪಚಾರ ಮಾಡ.ವುದಕ್ಕಾಗಲಿ ಸಮಯವೇ ಸಿಗುವುದಿಲ್ಲ. ಅಷ್ಟು ಬೇಗನೆ ಕುರಿಗಳು ಇದ್ದಕ್ಕಿದ್ದ ಹಾಗೆ ಬಿದ್ದು, ಕಾಲುಗಳನ್ನು ಝಾಡಿಸಿ, ಸೆಟೆಸಿಕೊಂಡು ಸಾಯುತ್ತವೆ. ಕೆಲವು ವೇಳೆ ತಕ್ಷಣ ಸಾಯದಿದ್ದಲ್ಲಿ ಕಂಡುಬರುವ ರೋಗದ ಲಕ್ಷಣವೆಂದರೆ ಕುರಿಗಳು ಸುಂದಾಗಿ ಜೋಲಿ ಹೊಡೆಯುತ್ತ ತಲೆ ಕೆಳಗೆ ಹಾಕಿಕೊಂಡು ಸುಮ್ಮನೆ ನಿಲ್ಲುತ್ತವೆ. ಉಸಿರಾಡುವುದು ಬಹಳ ತೊಂದರೆಯಾಗುತ್ತದೆ. ಜ್ವರದಿಂದ ಮೈಸುಡುತ್ತಿರುತ್ತದೆ. ಕುತ್ತಿಗೆ ಮತ್ತು ಎದೆಯ ಕೆಳಭಾಗದಲ್ಲಿ ಬಾವು ಬಂದಿರುತ್ತದೆ. ಈ ಬಾವು ಮೆತ್ತಗಿದ್ದು, ನೋವು ಇಲ್ಲದಾಗಿರುತ್ತದೆ. ಸಾಯುವುದಕ್ಕೆ ಸ್ವಲ್ಪ ಮುಂಚೆ ಬಾಯಿ, ಮೂಗು, ಗುದದ್ವಾರ ಮತ್ತು ಜನನೇಂದ್ರಿಯಗಳಿಂದ ರಕ್ತಮಿಶ್ರಿತವಾದ ನೀರಿನಿಂದ ಕೂಡಿದ ರಸ ಸೋರುತ್ತಿರುತ್ತದೆ.

ಈ ರೋಗದಿಂದ ಸತ್ತ ಕುರಿಗಳು ಬೇಗನೆ ಸೆಟೆಯುವುದಿಲ್ಲ. ಅಂದರೆ, ಮಾಂಸಗಳು ಬೇಗನೆ ಬಿಗಿಯಾಗುವದಿಲ್ಲ. ಸತ್ತ ಕುರಿಗಳು ಬೇಗನೆ ಬಾಯುತ್ತವೆ. ರಕ್ತ ಬೇಗನೆ ಹೆಪ್ಪುಕಟ್ಟುವುದಿಲ್ಲ. ಕಪ್ಪಾಗಿ ಮಿಂಚುತ್ತಿರುತ್ತದೆ. ಇದರ ಗುಲ್ಮ ಅಥವಾ ಪ್ಲೀಹ ಬಹಳ ದೊಡ್ಡದಾಗಿ ಬಾತಿರುತ್ತದೆ.

ರೋಗ ಬಂದಮೇಲೆ ಪೇಚಾಡುವುದಕ್ಕಿಂತ ರೋಗಬಾರದಂತೆ ಮುಂಜಾಗ್ರತೆವಹಿಸಿ ರೋಗಪ್ರತಿಬಂಧಕ ವ್ಯಾಲಿಯನ್ನು ಎಲ್ಲ ಹಿಂಡಿನ ಕುರಿಗಳಿಗೆ ತೆಗೆಸುವುದೊಂದೇ ಉತ್ತಮ ಸುಲಭ ಉಪಾಯ.

3) ಕರುಳಿನ ವಿಷಬೇನೆ

ಕುರಿಗಳ ಕರುಳಿನ ವಿಷಬೇನೆಯು ಕ್ಲಾಸ್ಟ್ರೀಡಿಯಂ ಪರ್‌ಫಿನ್‌ಜನ್ಸ್ ರೋಗಾಣು ಕ್ರಿಮಿಗಳ ಗುಂಪಿಗೆ ಸೇರಿದ D ಮತ್ತು C ಎಂಬ ಸೂಕ್ಷ್ಮ ಅಣುಕ್ರಿಮಿಗಳಿಂದ ಉಂಟಾಗುತ್ತದೆ. ಈ ರೋಗದಿಂದ ಕುರಿಗಳು ಅಧಿಕ ಸಂಖ್ಯೆಯಲ್ಲಿ ಸಾಯುತ್ತಿರುವುದು ಕಂಡು ಬಂದಿದೆ. ಇದು ಸಾಮಾನ್ಯವಾಗಿ ಹುಲ್ಲು ಚೆನ್ನಾಗಿ ಬೆಳೆದ ಪ್ರದೇಶಗಳಲ್ಲಿ ಉತ್ಪನ್ನವಾಗುವುದು. ಉತ್ತಮ ಆರೋಗ್ಯ ಸ್ಥಿತಿಯಲ್ಲಿದ್ದ ಕುರಿಗಳು ಇದಕ್ಕೆ ಬಹು ಬೇಗನೆ ತುತ್ತಾಗುತ್ತವೆ. ಈ ಅಣುಕ್ರಿಮಿಗಳು ನೆಲದಲ್ಲಿ ಹುಲ್ಲಿನ ಬುಡದಲ್ಲಿ ಸೇರಿಕೊಂಡಿರುತ್ತವೆ. ಕುರಿಗಳು ಹುಲ್ಲುಗಾವಲಿನಲ್ಲಿ (ಅಡವಿಯಲ್ಲಿ) ಮೇಯುವಾಗ ಈ ವಿಷಕ್ರಿಮಿಗಳು

ಹುಲ್ಲಿನೊಂದಿಗೆ ಕುರಿಗಳ ಕರುಳಿನಲ್ಲಿ ಹೋಗಿ ಸೇರಿಕೊಳ್ಳುತ್ತವೆ. ಅಲ್ಲಿ ಈ ವಿಷಕ್ರಿಮಿಗಳು ಕೊಳೆಯಲು ಪ್ರಾರಂಭಿಸಿ, ಒಂದು ತರಹದ ನಂಜನ್ನು (ವಿಷವನ್ನು) ಉತ್ಪಾದಿಸುತ್ತವೆ. ಈ ವಿಷವು ರಕ್ತದ ಮೂಲಕ ಕರುಳಿನಿಂದ ಕುರಿಯ ಮೂತ್ರ ಜನಕಾಂಗಗಳಿಗೆ ಹೋಗಿ ಸೇರುತ್ತದೆ. ತತ್ಪರಿಣಾಮವಾಗಿ ಮೂತ್ರಪಿಂಡವು ಬಾತು, ಮೃದುವಾಗುತ್ತದೆ. ಇಷ್ಟೆಲ್ಲ ಪರಿವರ್ತನೆ ಮಿಂಚಿನಂತೆ ಬಹು ಶೀಘ್ರಗತಿಯಿಂದಾಗಿ ಕುರಿಯು ಸಾಯುತ್ತದೆ. ಇದಕ್ಕಾಗಿ ಈ ರೋಗವನ್ನು 'ಪಲ್ಪೀಕಿಡ್ನಿ' ಎಂದು ಕರೆಯುವರು.

ಈ ರೋಗದ ಕುರಿಗಳಿಗೆ ಔಷಧೋಪಚಾರ ಮಾಡುವುದಕ್ಕೂ ಆಸ್ಪದ ಉಳಿಯದಂತೆ ಶೀಘ್ರದಲ್ಲಿ ಅವು ಸತ್ತು ಹೋಗುತ್ತವೆ. ಅಲ್ಲದೆ ಈ ರೋಗಕ್ಕೆ ಪರಿಣಾಮಕಾರಿಯಾದ ಔಷಧಿಯೂ ಇಲ್ಲ. ಆದ್ದರಿಂದ ರೋಗ ಬಾರದಂತೆ ಮುಂಚಿತವಾಗಿಯೇ ರೋಗ ಪ್ರತಿಬಂಧಕ ವ್ಯಾಲಿ ತೆಗೆಸಿಕೊಂಡು ಕುರಿಗಳನ್ನು ಕಾಪಾಡಿಕೊಳ್ಳುವುದೊಂದೇ ಇದಕ್ಕೆ ಉತ್ತಮ ಉಪಾಯ. ಮರಿಗಳಿಗೆ ಮೊದಲನೆಯ ಸಲ ಲಸಿಕೆಯನ್ನು ಕೊಟ್ಟ ಎರಡು ವಾರದ ನಂತರ ಎರಡನೆಯ ಸಲ ಲಸಿಕೆಯನ್ನು ಕೊಡಿಸಬೇಕು.

4) ಕುರಿಗಳ ಹೊಟ್ಟೆಯಲ್ಲಿ ಸೇರಿಕೊಂಡು ರೋಗವನ್ನುಂಟುಮಾಡುವ ಪರಪುಷ್ಟ ಜಂತುಗಳು

ಕುರಿಗಳಲ್ಲಿ ಸಾಮಾನ್ಯವಾಗಿ (1) ದುಂಡು ಜಂತುಗಳು (2) ಚಪ್ಪಟೆ ಜಂತುಗಳು, ಹೀಗೆ ಎರಡು ತೆರನಾದ ಪರಪುಷ್ಟ ಜಂತುಗಳ ಬಾಧೆ ತೋರಿಬರುತ್ತದೆ.

ಅ) ದುಂಡು ಜಂತುಗಳು: ದುಂಡು ಜಂತುಗಳಲ್ಲಿ (I) ಹೇಮಾಂತಸ್ ಕೊಂಟಾರ್ಟಸ್ (II) ಈಸಾಫೇಗಸ್ ಕೊಲಂಬಿಯಾನಂ, ಹೀಗೆ ಎರಡು ವಿಧಗಳು.

(I) ಹೇಮಾಂತಸ್ ಕೊಂಟಾರಟಸ್ ದುಂಡು ಜಂತುಗಳು: ಕುರಿಗಳ ನಾಲ್ಕನೆಯ ಹೊಟ್ಟೆಯಲ್ಲಿ (ಕುರಿಗಳ ಹೊಟ್ಟೆಯು ನಾಲ್ಕು ಹೊಟ್ಟೆಗಳಾಗಿ ವಿಂಗಡಗೊಂಡಿರುತ್ತದೆ). ಈ ಜಂತುಗಳು ವಾಸವಾಗಿರುತ್ತವೆ. ಇವು ಸೇವಿಗೆ ಎಳೆಯಂತೆ ಕಾಣುತ್ತಿರುತ್ತವೆ. ಬಿಳಿಯ ಉದ್ದ ಸಣ್ಣ ತಂತಿಯಂತೆ ಕಾಣುವುದರಿಂದಲೂ ಮತ್ತು ಇವುಗಳಿಂದ ಉಂಟಾಗುವ ರೋಗಕ್ಕೆ 'ಹೊಟ್ಟೆಯೊಳಗಿನ ತಂತಿಯ ಜಂತುಗಳ ರೋಗ'ವೆಂದು ಕರೆಯಲಾಗಿದೆ. ಗಂಡುಜಂತು ¾ ಅಂಗುಲದಷ್ಟು ಉದ್ದವಾಗಿರುತ್ತದೆ. ಹೆಣ್ಣುಜಂತುಗಳು ಒಂದು ಅಂಗುಲದಷ್ಟು ಉದ್ದವಿದ್ದು, ಬಾಲದ ತುದಿಯಲ್ಲಿ ಒಂದು ಸಣ್ಣ ಗಂಟಿನಿಂದ ಕೂಡಿರುತ್ತದೆ. ಹೆಣ್ಣು ಜಂತುಗಳು ವರ್ಷಾನುಕಾಲ ಬಿಡದೆ ತತ್ತಿಗಳನ್ನು ಹಾಕುತ್ತ ಹೋಗುತ್ತವೆ. ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚು ತತ್ತಿಗಳನ್ನು ಹಾಕುತ್ತವೆ. ಸ ಮಾರು

100 ಹೆಣ್ಣು ಜಂತುಗಳು ದಿನಕ್ಕೆ 7,50,000 ತತ್ತಿಗಳನ್ನು ಹಾಕುತ್ತವೆ. ಈ ಜಂತುಗಳು ತಮ್ಮ ಬಾಯಿಯಲ್ಲಿರುವ ಒಂದು ಚೂಪಾದ ಆಯುಧದಂತಿರುವ ಅವಯುವ ಸಹಾಯದಿಂದ ಕುರಿಗಳ ಹೊಟ್ಟೆಯೊಳಗಿನ ತೆಳ್ಳನೆಯ ಪೊರೆಗೆ ಗಾಯಮಾಡಿ ರಕ್ತವನ್ನು ಹೀರಿ ಕುಡಿಯುತ್ತವೆ. 1000 ದಿಂದ 1500 ಹೆಣ್ಣು ಜಂತುಗಳು ದಿನಕ್ಕೆ 40 ರಿಂದ 60 ಮಿಲಿಲೀಟರ್ ರಕ್ತವನ್ನು ಕುಡಿಯುತ್ತವೆ. ಹೀಗೆ ಅವು ರಕ್ತಕುಡಿದು ಬಿಟ್ಟಮೇಲೆ ಉಂಟಾದ ಗಾಯದಿಂದ 7 ನಿಮಿಷಗಳವರೆಗೆ ರಕ್ತವು ಸೋರುತ್ತಿರುತ್ತದೆ. ತತ್ಪರಿಣಾಮವಾಗಿ ಈ ರೋಗದಿಂದ ಕುರಿಗಳು ದಿನದಿನಕ್ಕೆ ನವೆದು (ಸೊರಗಿ) ರಕ್ತಕ್ಷೀಣತೆಯಿಂದ ಕೂಡಿ ನಿಃಶ್ಯಕ್ತಿಯಿಂದ ಬಳಲುತ್ತವೆ.

ಈ ಜಂತುಗಳ ಜೀವನವನ್ನು ಮೊದಲನೆಯದಾಗಿ ಅದರ ಹೊರಗಿನ ಜೀವನವೆಂದೂ ಮತ್ತು ಕುರಿಗಳ ಜಠರದಲ್ಲಿಯ ಜೀವನವನ್ನು ಎರಡನೆಯ ಜೀವನವೆಂದೂ ವಿಂಗಡಿಸಬಹುದು. ಇವುಗಳ ಹೊರಗಿನ ಜೀವನವು (ಮೊದಲನೆಯದು) ಈ ಜಂತುಗಳ ತತ್ತಿಗಳು ಕುರಿಯ ಮಲದೊಂದಿಗೆ ಹೊರಬೀಳುವುದರಿಂದ ಪ್ರಾರಂಭವಾಗುತ್ತದೆ. ಈ ತತ್ತಿಗಳು ಹೊರಗೆಬಿದ್ದ 24 ಗಂಟೆಗಳ ಕಾಲದಲ್ಲಿ ಅನುಕೂಲ ಹವೆ ಮತ್ತು ಆರ್ದ್ರತೆಗಳು ದೊರಕಿದಲ್ಲಿ ತತ್ತಿಯೊಳಗಿನ ಕೀಟವು ಬೆಳೆಯುತ್ತದೆ. ಈ ಕೀಟವು ಮುಂದೆ ತನ್ನ ಮೇಲಿನ ಸೂಕ್ಷ್ಮವಾದ ಪೊರೆಯ ಕವಚವನ್ನು ಎರಡು ಸಾರಿ ಕಳಚಿಕೊಂಡ ಮೇಲೆ ಹುಲ್ಲುಗರಿಗಳಿಗೆ ಅಂಟಿಕೊಂಡಿರುತ್ತದೆ. ಕುರಿಗಳು ಇಂಥ ಹುಲ್ಲನ್ನು ಮೇಯುವಾಗ ಈ ಕೀಟವು ಹುಲ್ಲಿನ ಜೊತೆಗೆ ಕುರಿಗಳ ಹೊಟ್ಟೆಯೊಳಗೆ ಹೋಗಿ ಸೇರಿಕೊಳ್ಳುತ್ತದೆ. ಕುರಿಗಳು ಸ್ವಾಭಾವಿಕವಾಗಿ ನೆಲಕ್ಕೆ ಹತ್ತಿದ ಚಿಗುರು ಹುಲ್ಲು ಮೇಯುವುದರಿಂದ, ಭೂಮಿಯೊಳಗೆ ಹುದುಗಿದ್ದ ಮೇಲೆ ಒಂದು ಕವಚದಿಂದ ಆವರಿಸಲ್ಪಟ್ಟ ಜಂತುಗಳ ತತ್ತಿಗಳು ಹೊಟ್ಟೆಯೊಳಗೆಸೇರಿ, ಕ್ರಮೇಣ ದೊಡ್ಡ ಜಂತುಗಳಾಗಿ ಪರಿವರ್ತಿಸಿ, ಬೆಳೆದು ಕುರಿಗಳ ಜೀವಕ್ಕೆ ಅಪಾಯವನ್ನು ತಂದೊಡ್ಡುತ್ತವೆ. ಇದಕ್ಕಾಗಿಯೇ ಒಂದು ಕುರಿ ಇನ್ನೊಂದು ಕುರಿಗೆ ವೈರಿ ಎಂದು ಹೇಳುವುದು.

ಈ ಸೂಕ್ಷ್ಮಕೀಟವು ಕುರಿಯ ಜಠರದಲ್ಲಿ ಸೇರಿದ ಮೇಲೆ ಅದರ ಎರಡನೆಯ ಜೀವನ ಪ್ರಾರಂಭವಾಗುತ್ತದೆ. ಈ ಕುರಿಯ ಹೊಟ್ಟೆಯೊಳಗೆ ಸೇರಿದ ಮೇಲೆ ಪುನಃ ತನ್ನ ಮೇಲಿನ ಸೂಕ್ಷ್ಮವಾದ ಪೊರೆಯ ಕವಚವನ್ನು ಮತ್ತೆ ಎರಡು ಸಾರಿ ಕಳಚಿಕೊಂಡು ಬೆಳೆಯುತ್ತದೆ. ಹೀಗೆ ಅಲ್ಲಿ 14 ದಿವಸಗಳಲ್ಲಿ ಪೂರ್ಣವಾಗಿ ಬೆಳೆದು, ದೊಡ್ಡವಾದ ಮೇಲೆ ಹೆಣ್ಣು, ಗಂಡು ಜಂತುಗಳು ಸಂಯೋಗವಾಗುತ್ತವೆ. ನಂತರ ಹೆಣ್ಣು ಜಂತುಗಳು ತತ್ತಿಗಳನ್ನಿಡಲು ಪ್ರಾರಂಭಿಸುತ್ತವೆ. ಈ ತತ್ತಿಗಳು ಕುರಿಯ ಹಿಕ್ಕೆಯೊಂದಿಗೆ ಹೊರಬೀಳುತ್ತವೆ. ಇದು ಅವುಗಳ ಜೀವನ ಚಕ್ರ. ಇದು ಮುಂದಿನ ಪುಟದಲ್ಲಿನಂತಿರುತ್ತದೆ.

ಹೇಮಾಂತಸ್ ಕೊಂಟಾರ್ಟಸ್

ಗಂಡು ಜಂತುಗಳು

ಹೆಣ್ಣು ಜಂತುಗಳು
(1) ಗಂಡಿಗಿಂತ ಸ್ವಲ್ಪ ಹೆಚ್ಚು ಉದ್ದವಾಗಿರುತ್ತವೆ.
(2) ಬಾಲದ ತುದಿಯಲ್ಲಿ ಸ್ವಲ್ಪ ಉಬ್ಬಿಕೊಂಡಿರುತ್ತದೆ.

ಗಂಡುಹೆಣ್ಣುಗಳ ಸಂಯೋಗದಿಂದ ಹೆಣ್ಣು ಜಂತು ಕುರಿಯ ನಾಲ್ಕನೆಯ ಹೊಟ್ಟೆಯಲ್ಲಿ ತತ್ತಿಹಾಕುತ್ತವೆ.

ಬೇಸಿಗೆಯ ಕಾಲದಲ್ಲಿ ಚಳಿಗಾಲಕ್ಕಿಂತ ಹೆಚ್ಚು ತತ್ತಿಗಳನ್ನಿಡುತ್ತವೆ.

ಈ ತತ್ತಿಗಳು ಕುರಿಯ ಮಲದೊಡನೆ ಹೊರಬೀಳುತ್ತವೆ.

ತತ್ತಿಯೊಳಗಿಂದ ಸೂಕ್ಷ್ಮಕೀಟವು ಬೆಳೆದು ಹೊರಗೆ ಬಂದು ಹುಲ್ಲಿಗೆ ಅಂಟಿಕೊಂಡಿರುತ್ತವೆ.

ಇಂಥ ಹುಲ್ಲನ್ನು ಕುರಿಗಳು ತಿಂದಾಗ ಕೀಟವು ಕುರಿಯ ಹೊಟ್ಟೆಯೊಳಗೆ ಸೇರಿಕೊಳ್ಳುತ್ತದೆ.

ಕುರಿಗಳ ಹೊಟ್ಟೆಯಲ್ಲಿ ಬೆಳೆದು ಗಂಡು ಹೆಣ್ಣು ಸಂಯೋಗವಾಗಿ ತತ್ತಿಗಳನ್ನಿಡುತ್ತವೆ.

ತತ್ತಿಗಳು ಕುರಿಯ ಮಲದೊಡನೆ ಹೊರಬೀಳುತ್ತವೆ.

(II) **ಇಸಾಫೆಗಸ್ ಕೊಲಂಬಿಯೋನಂ ದುಂಡು ಜಂತುಗಳು:** ಇವು ಸಾಮಾನ್ಯವಾಗಿ ಕುರಿಗಳ ಕರುಳಿನಲ್ಲಿ ವಾಸವಾಗಿರುತ್ತವೆ. ಇವು ತಮ್ಮ ಬಾಯಿಯಲ್ಲಿರುವ ಚೂಪಾದ ಅವಯುವದಿಂದ ಕುರಿಗಳ ಕರುಳಿನ ತೆಳುವಾದ ಪೊರೆಗೆ ಅಂಟಿಕೊಂಡು, ಗಾಯಮಾಡಿ, ರಕ್ತವನ್ನು ಕುಡಿದು ಬೆಳೆಯುತ್ತವೆ. ಕರುಳಿನ ಉದ್ದಕ್ಕೂ ಮೆತ್ತನೆಯ ಗಂಟುಗಳನ್ನು ಮಾಡಿ ಅದರಲ್ಲಿ ತತ್ತಿಗಳನ್ನಿಡುತ್ತವೆ. ಅದಕ್ಕಾಗಿ ಇದನ್ನು 'ನೊಡ್ಯುಲರ್ ರೋಗ' ಎಂದು ಕರೆಯುತ್ತಾರೆ. ತತ್ತಿಗಳು ಬೆಳೆದು ದೊಡ್ಡ ಜಂತುಗಳಾಗಿ ಗಂಟಿನಿಂದ ಹೊರಗೆ ಬಂದು ಕರುಳಿನಲ್ಲಿದ್ದುಕೊಂಡು ರಕ್ತಕುಡಿಯುತ್ತ ಬೆಳೆಯುತ್ತವೆ ಮತ್ತು ತತ್ತಿಗಳನ್ನು ಹಾಕುತ್ತವೆ. ಈ ತತ್ತಿಗಳು ಕುರಿಯ ಮಲದೊಡನೆ ಹೊರಬೀಳುತ್ತವೆ. ಇವುಗಳ ಜೀವನವೂ ಸಹ ಮೇಲೆ ಹೇಳಿದ ಜಠರದ ಜಂತುಗಳಂತೆಯೇ ಇರುತ್ತದೆ.

ರೋಗದ ಲಕ್ಷಣಗಳು: ಕುರಿಗಳು ದಿನದಿನಕ್ಕೆ ನಿಃಶ್ಯಕ್ತಿಯಾಗುತ್ತವೆ. ಸರಿಯಾಗಿ ಮೇಯುವುದಿಲ್ಲ. ರಕ್ತ ಕ್ಷೀಣವಾದಂತೆ ಕಣ್ಣುಮೂಗಿನಲ್ಲಿಯ ಸೂಕ್ಷ್ಮ ಪೊರೆಗಳು ನಿಸ್ತೇಜವಾಗಿ ಬಿಳುಪಾಗಿ ಕಾಣುತ್ತವೆ. ಗದ್ದದ ಕೆಳಗೆ ತಣ್ಣಗಾದ ಮೆತ್ತನೆ ಬಾವು

ಕಾಣಿಸಿಕೊಳ್ಳುತ್ತದೆ. ಕುರಿಗಳು ರಕ್ತಮಿಶ್ರಿತವಾದ ಭೇದಿಯನ್ನು ಮಾಡುತ್ತವೆ. ಕುರಿಗಳು ಸೊರಗಿ ಬೆನ್ನಿನ ಎಲುಬುಗಳು ಎದ್ದುಕಾಣುತ್ತವೆ. ಹೊಟ್ಟೆ ದಪ್ಪವಾಗಿ ಗಡಿಗೆಯಂತೆ ಕಾಣುತ್ತದೆ. ನಿಶ್ಶಕ್ತಿಯಿಂದ ಬಳಲಿ ಕುರಿಗಳು ಸಾಯುತ್ತವೆ.

ಜಂತುನಾಶಕ ಔಷಧಿಗಳು:

I) **ಹೊಗೆಸೊಪ್ಪು (ತಂಬಾಕು) ತುತ್ತೆಯ ಮಿಶ್ರಣ:** ಒಂದು ನೂರು ಕುರಿಗಳಿಗೆ ಒಂದು ಸೇರು ತಂಬಾಕದ ನೀರಿಗೆ ($\frac{1}{2}$ ಪೌಂಡು ತಂಬಾಕು 2 ಪಿಂಟ್ ನೀರಿನಲ್ಲಿ) ಒಂದು ಔನ್ಸ್ ತುತ್ತೆಯ ನೀರನ್ನು ಸೇರಿಸಿ. ಕೈಯಾಡಿಸಿ. ಒಂದು (ಅರ್ಧ ಔನ್ಸ್‌ನಿಂದ ಒಂದು ಔನ್ಸ್‌ವರೆಗೆ) ಕಪ್ಪು ಔಷಧಿಯನ್ನು ಕುರಿಗಳು ಮೇಯುವುದಕ್ಕೆ ಹೋಗುವ ಮುಂಚೆ ಕುಡಿಸಬೇಕು.

ಔಷಧಿ ತಯಾರಿಸುವ ವಿಧಾನ: ಒಂದು ಸೇರು (200ಗ್ರಾಂ) ತಂಬಾಕನ್ನು ರಾತ್ರಿ ನೀರಿನಲ್ಲಿ ನೆನೆಯಿಡಬೇಕು. ಬೆಳಿಗ್ಗೆ ಚೆನ್ನಾಗಿ ತಂಬಾಕನ್ನು ಕಿವಿಚಿ, ಹಿಂಡಿ ಚರಟವನ್ನು ತೆಗೆದುಹಾಕಬೇಕು. ಈ ತಂಬಾಕದ ನೀರಿಗೆ ಒಟ್ಟು 100 ಕಪ್ಪು ಆಗುವಷ್ಟು ನೀರನ್ನು ಸೇರಿಸಬೇಕು. ಇದಕ್ಕೆ ಒಂದು ಔನ್ಸ್ ತುತ್ತೆಯ ನೀರನ್ನು ಸೇರಿಸಿ, ಚೆನ್ನಾಗಿ ಕೈಯಾಡಿಸಿ, ಒಂದು ಕುರಿಗೆ ಒಂದು ಕಪ್ಪು ಕುಡಿಸಬೇಕು.

(II) **ಫಿನೋಥಿಯಾಜಿನ್:** ಇದು ಒಂದು ಹಸುರು ಪುಡಿ. ಇವನ್ನು ಒಂದು ಔನ್ಸ್ ನೀರಿನಲ್ಲಿ ಒಂದು ಕುರಿಗೆ 10 ಗ್ರಾಮಿನಷ್ಟು ಕರಗಿಸಿ ಕುಡಿಸಬೇಕು. ಈ ಔಷಧಿಯನ್ನು ಕುಡಿಸುವ ಮೊದಲು ಶೇಕಡಾ 1 ಭಾಗ ತುತ್ತೆಯ ನೀರನ್ನು ಒಂದು ಚಮಚದಿಂದ ಕುಡಿಸುವುದೊಳ್ಳೆಯದು. ಇದರಿಂದ ಔಷಧಿಯು ನೇರವಾಗಿ 4ನೇ ಜಠರಕ್ಕೆ ಹೋಗುತ್ತದೆ.

ಕುರಿಗಳ ಆಹಾರದಲ್ಲಿ ಉಪ್ಪುಸೇರಿಸಿ ತಿನ್ನಿಸಬೇಕು. $\frac{1}{8}$ ಔನ್ಸಿನಷ್ಟು ಉಪ್ಪನ್ನು ಒಂದು ಕಪ್ಪು ನೀರಿನಲ್ಲಿ ಕರಗಿಸಿ ಕುಡಿಸಬೇಕು. ಇದರಿಂದ ಕುರಿಗಳಿಗೆ ಜಂತುಗಳ ಬಾಧೆಯು ಕಡಮೆಯಾಗುತ್ತದೆ.

2) ಚಪ್ಪಟೆ ಜಂತುಗಳು

ಚಪ್ಪಟೆ ಜಂತುಗಳಿಂದ ಕಾರಲು ರೋಗ ಅಥವಾ ಜಿಗಳಿರೋಗ ಬರುತ್ತದೆ.

ಫಾಸಿಯೋಲಾ ಜೆಗಾಂಟಿಕ್ ಚಪ್ಪಟೆ ಆಕಾರದ ಜಂತುಗಳಿಂದ ಈ ರಕ್ತಕ್ಷೀಣ ರೋಗವು ಕುರಿಗಳಲ್ಲಿ ಉಂಟಾಗುತ್ತದೆ. ಸಾಧಾರಣವಾಗಿ ಈ ಜಂತುಗಳು ಕುರಿಗಳ ಪಿತ್ತಾಶಯದಲ್ಲಿ ಇರುತ್ತವೆ. ಬೇರೆ ಅವಯವಗಳಲ್ಲಿಯೂ ಸಿಗಬಹುದು.

ಈ ಜಂತುಗಳ ಜೀವನವು ಬಹಳ ವಿಚಿತ್ರವಿರುತ್ತದೆ. ಈ ಬೇನೆಯಿಂದ ಬಳಲುತ್ತಿರುವ ಕುರಿಗಳ ಮಲವನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ಪರೀಕ್ಷಿಸಿದಲ್ಲಿ ಅದು ಹಳದಿ ತತ್ತಿಗಳಿಂದ ತುಂಬಿರುವುದು ಕಂಡು ಬರುತ್ತದೆ. ಈ ತತ್ತಿಗಳು ಕುರಿಯ ಮಲದೊಡನೆ ಹೊರಗೆ ಭೂಮಿಗೆ ಬಂದು ಸೇರುತ್ತವೆ. ಅನುಕೂಲ ಹವ ಮತ್ತು ಆರ್ದ್ರತೆ ಇದ್ದಲ್ಲಿ ಈ ತತ್ತಿಗಳಲ್ಲಿಯ ಕೀಟವು ಹತ್ತು ದಿವಸಗಳಲ್ಲಿ ಬೆಳೆದು ತತ್ತಿಯಿಂದ ಹೊರಬೀಳುತ್ತದೆ. ಮುಂದೆ ಈ ಸೂಕ್ಷ್ಮ ಕೀಟವು ಅದರ ಮುಂದಿನ ಬೆಳವಣಿಗೆಗಾಗಿ ಹಳ್ಳ, ಕೆರೆ, ಕೊಳ್ಳಗಳ ಅಂಚಿನಲ್ಲಿರುವ ಶಂಖಿದ ಅಥವಾ ಬಸವನ ಹುಳುವಿನೊಳಗೆ ಪ್ರವೇಶಿಸಿ ಅಲ್ಲಿ ಬೆಳೆಯುತ್ತದೆ. ಇದಕ್ಕೆ 'ರೇಡಿಯಾ' ಎನ್ನುತ್ತಾರೆ. ಮುಂದೆ ಇವು ಬಾಲದ ಕ್ರಿಮಿಗಳಾಗಿ ಬೆಳೆಯುತ್ತವೆ. ಇವುಗಳನ್ನು 'ಸರ್‌ಕೇರಿಯಾ' ಎನ್ನುತ್ತಾರೆ. ಈ ಅವಸ್ಥೆಯಲ್ಲಿದ್ದಾಗ ಈ ಸೂಕ್ಷ್ಮಕ್ರಿಮಿಗಳು ಶಂಖಿದ ಅಥವಾ ಬಸವನ ಹುಳುವಿನಿಂದ ಹೊರಬಿದ್ದು ನೀರಿನಲ್ಲಿ ಸ್ವೇಚ್ಛೆಯಾಗಿ ತೇಲುತ್ತ ನಿಂತನೀರಿನ ಅಂಚಿನಲ್ಲಿ ಬೆಳೆದಿರುವ ಹುಲ್ಲು, ಸೊಪ್ಪು, ಜೊಂಡಿನ ಗರಿಗಳಿಗೆ ಅಂಟಿಕೊಂಡಿರುತ್ತವೆ. ಕುರಿಗಳು ಇಂಥ ಹುಲ್ಲು, ಸೊಪ್ಪು ತಿನ್ನುವಾಗ, ನೀರು ಕುಡಿಯುವಾಗ, ಹುಲ್ಲು ಅಥವಾ ನೀರಿನ ಜೊತೆಯಲ್ಲಿ ಈ ಸೂಕ್ಷ್ಮಕ್ರಿಮಿಗಳೂ ಸಹ ಕುರಿಗಳ ಹೊಟ್ಟೆಯೊಳಗೆ ಸೇರಿಕೊಳ್ಳುತ್ತವೆ. ಅಲ್ಲಿಂದ ಮುಂದೆ ಕುರಿಗಳ ಯಕೃತ್ತಿನಲ್ಲಿ ಮತ್ತು ಪಿತ್ತಾಶಯದಲ್ಲಿದ್ದುಕೊಂಡು ಬೆಳೆದು ಅಲ್ಲಿ ತಮ್ಮ ಸಂತತಿಯನ್ನು ಬೆಳೆಸುತ್ತ, ತತ್ತಿಗಳನ್ನು ಹಾಕುತ್ತವೆ. ಈ ತತ್ತಿಗಳು ಪಿತ್ತಾಶಯದಿಂದ ರಕ್ತದೊಡನೆ ಹರಿದು ಕರುಳಿಗೆ ಬಂದು ಮುಟ್ಟುತ್ತವೆ. ಅಲ್ಲಿಂದ ಮುಂದೆ ಕುರಿಯ ಮಲದೊಡನೆ ಹೊರಬೀಳುತ್ತವೆ. ಈ ಜಂತುಗಳು ಆಕಾರದಲ್ಲಿ ನೋಡಲು ಬೇವಿನ ಎಲೆಯಂತೆ ಕಾಣುತ್ತವೆ. ಇವು $\frac{1}{2}$" ದಿಂದ 1"ದವರೆಗೆ ಉದ್ದವಿರುತ್ತವೆ ಮತ್ತು ಇದರ ಅರ್ಧದಷ್ಟು ಅಗಲವಿರುತ್ತದೆ. ಇದಕ್ಕೆ ಎರಡು ಬಾಯಿಗಳು. ಒಂದು ತಲೆಯ ತುದಿಗೆ, ಮತ್ತೊಂದು ತಲೆ ಮತ್ತು ಶರೀರ (ಕುತ್ತಿಗೆ) ಸೇರಿರುವ ತಳಭಾಗದಲ್ಲಿ ಇದನ್ನು 'ವೆಂಟ್ರಲ್ ಸಕ್ಕರ್' ಎಂದು ಕರೆಯುತ್ತಾರೆ. ಇದಕ್ಕೆ ಎರಡು ಬಾಯಿ ಇರುವುದರಿಂದ ಇದನ್ನು 'ಡಿಸ್ಟೋಮಮ್' ಎಂದೂ ಕರೆಯುತ್ತಾರೆ.

ರೋಗದ ಲಕ್ಷಣಗಳು: ಕುರಿಗಳು ಆಹಾರವನ್ನು ಸರಿಯಾಗಿ ತಿನ್ನುವುದಿಲ್ಲ. ದಿನದಿನಕ್ಕೆ ಅಶಕ್ತವಾಗಿ ಸೊರಗುತ್ತ ಹೋಗುತ್ತವೆ. ರಕ್ತಕ್ಷೀಣತೆಯಾಗಿ ಗದ್ದದ ಕೆಳಗಿನ ಮೆತ್ತನೆಯ ಬಾವು ಬರುತ್ತದೆ. ಕಾಲುಗಳು ಸಣ್ಣವಾಗಿ, ಹೊಟ್ಟೆ ದಪ್ಪವಾಗಿ ಗಡಿಗೆಯಂತೆ ಕಾಣುತ್ತದೆ. ಕುರಿಗಳು ನೀರುನೀರಾಗಿ ಉಚ್ಚಿಕೊಳ್ಳುತ್ತವೆ. ಕಣ್ಣು ಮತ್ತು ಮೂಗಿನ ಪೊರೆಗಳು ಹಳದಿ ಬಣ್ಣದಿಂದ ಕೂಡಿರುತ್ತವೆ. ಕುರಿಯು ಬಹಳ ನಿಶ್ಶಕ್ತವಾಗಿ ಸಾಯುತ್ತದೆ.

ಔಷಧೋಪಚಾರ: ಒಂದು ಸಿಸಿ ಕಾರ್ಬನ್ ಟೆಟ್ರಾಕ್ಲೋರೈಡ್ ಜಂತುನಾಶಕ ಔಷಧಿಯನ್ನು 4 ಸಿಸಿ ಲಿಕ್ವಿಡ್ ಪ್ಯಾರಫಿನ್ ಅಥವಾ ಮೊಸರಿನಲ್ಲಿ ಸೇರಿಸಿ ಕುಡಿಸಬೇಕು; ಇಲ್ಲವೆ 4–5 ಗ್ರಾಮ್ ಹೆಕ್ಸಾಕ್ಲೋರೇಥಿನ್ ಅವಲೋತೇನ್ ಔಷಧಿಯನ್ನು ಅರ್ಧ ಔನ್ಸಿನಷ್ಟು ನೀರಿನಲ್ಲಿ ಸೇರಿಸಿ ಕುಡಿಸಬೇಕು.

ಈ ಔಷಧಿಯನ್ನು ವರ್ಷಕ್ಕೆ ನಾಲ್ಕು ಸಲ ಅಂದರೆ ಮೊದಲನೆಯ ಸಲ ಮಳೆಗಾಲದ ಪ್ರಾರಂಭಕ್ಕೆ, ನಂತರ ಮಳೆಗಾಲದ ಮಧ್ಯದಲ್ಲಿ, ಆಮೇಲೆ ಮಳೆಗಾಲ ಮುಗಿದ ಕೂಡಲೆ ಮತ್ತು ಮಳೆಗಾಲ ನಿಂತು ಒಂದು ತಿಂಗಳ ನಂತರ, ಹೀಗೆ ವರ್ಷದಲ್ಲಿ ನಾಲ್ಕು ಸಾರಿ ಈ ಔಷಧಿಯನ್ನು ಕುಡಿಸಿದಲ್ಲಿ ಕುರಿಗಳು ಈ ರೋಗದ ಬಾಧೆಯಿಂದ ದೂರಾಗುತ್ತವೆ.

ವಿಶೇಷ ಸೂಚನೆ

ದುಂಡು ಮತ್ತು ಚಪ್ಪಟೆ ಎರಡೂ ಜಂತುಹುಳುಗಳು ಸೇರಿಕೊಂಡಿದ್ದರೆ ಫಿನೋವಿಸ್ 5 ಗ್ರಾಮ್, ಅವಲೋತೇನ್ 5 ಗ್ರಾಮ್ ಹಾಗೂ ಚರ್ನ್ 5 ಗ್ರಾಮ್ ಒಟ್ಟಿಗೆ ನೀರಿನಲ್ಲಿ ಸೇರಿಸಿ ಕುರಿಗಳು ಮೇಯುವುದಕ್ಕೆ ಹೋಗುವುದಕ್ಕಿಂತ ಮೊದಲು ಕುಡಿಸಿದಲ್ಲಿ ಹುಳುಗಳ ಬಾಧೆಯು ಕಡಮೆಯಾಗುತ್ತದೆ.

ಅಧ್ಯಾಯ 8

ಕುರಿ ಸಾಕಣೆಗಾರರಿಗೆ ಕೆಲವು ಸೂಕ್ತ ಸಲಹೆಗಳು

1) ಮಂದೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಒಂದೇ ಗಾತ್ರ ಮತ್ತು ವಯಸ್ಸಿನ, ಬಿಳಿಯ ಬಣ್ಣದ ಒಳ್ಳೆಯ ತುಪ್ಪಟವಿರುವ (ಹೆಣ್ಣು) ಕುರಿಗಳನ್ನು ಆರಿಸಿಕೊಳ್ಳಬೇಕು.
2) ಒಳ್ಳೆಯ ಟಗರು ಅಂದರೆ ಅರ್ಧ ಹಿಂಡು ಇದ್ದ ಹಾಗೆ. ಟಗರು ಉತ್ತಮವಾದ ಉಣ್ಣೆಯ ತಳಿಯದಾಗಿರಬೇಕು. ಅಚ್ಚ ಬಿಳಿಯದಾಗಿರಬೇಕು. ಬೇರೆ ಬಣ್ಣದ ಕೂದಲು ಒಂದೂ ಇರಕೂಡದು. ತುಪ್ಪಟ ಒತ್ತಾಗಿ ನಯವಾಗಿರಬೇಕು ದೇಹ ದಾರ್ಢ್ಯ ಚೆನ್ನಾಗಿರಬೇಕು. ಮಾಂಸ ಮಿತಿಮೀರಿ ಬೆಳೆದಿರದೆ ಸಮತೂಕವಾಗಿರಬೇಕು. ಒಂದು ಟಗರು 50 ಕುರಿಗಳಿಗೆ ಸಾಕಾಗುತ್ತದೆ.
3) ಟಗರು ಅಚ್ಚ ಬಿಳಿಯದಾದರೆ, ಇದರ ಸಂಪರ್ಕದಿಂದ ಹಲವು ವರ್ಷಗಳಲ್ಲಿಯೇ ಹಿಂಡಿನ ಬಣ್ಣ, ಬಣ್ಣಬಣ್ಣವಾಗಿರುವುದು ಹೋಗಿ ಬಿಳಿಯ ಅಂಶವೇ ಹೆಚ್ಚಾಗುವುದಕ್ಕೆ ಸಾಧ್ಯವಿದೆ ಎಂಬುದನ್ನು ನೆನಪಿನಲ್ಲಿಡಬೇಕು.
4) ಕುರಿಗಳು ವರ್ಷವೆಲ್ಲ ಮರಿಹಾಕುವುದಕ್ಕಿಂತ ಸಾಧ್ಯವಾದ ಮಟ್ಟಿಗೂ ಒಂದು ಕಾಲದಲ್ಲಿ ಎಂದರೆ ಮಳೆಗಾಲಕ್ಕೆ ಮೊದಲು ಆದಷ್ಟು ಸ್ವಲ್ಪ ದಿವಸಗಳೊಳಗಾಗಿ ಎಲ್ಲವೂ ಮರಿ ಹಾಕುವಂತೆ ಏರ್ಪಾಡು ಮಾಡಬೇಕು. ಹೀಗೆ ಮಾಡಬೇಕಾದರೆ ಟಗರನ್ನು ವರ್ಷವೆಲ್ಲ ಮಂದೆಯೊಂದಿಗೆ ಬಿಡಬಾರದು.
5) ಮರಿಗಳನ್ನು ದೊಡ್ಡ ಕುರಿಗಳಿಂದ ಪ್ರತ್ಯೇಕಿಸಿ ಮೇಯಿಸಬೇಕು. ಅವಕ್ಕೂ ಮೇವು ಚೆನ್ನಾಗಿ ಸಿಗುತ್ತದೆ. ಕುರಿಗಳಿಗೆ ಮೇಯುವಾಗ ಮರಿಗಳ ಕಾಟ ತಪ್ಪುತ್ತದೆ.
6) ಎಳೆಯ ಪ್ರಾಣಿಗಳನ್ನು ಬಹಳ ಎಚ್ಚರಿಕೆಯಿಂದ ಅವು ಚೆನ್ನಾಗಿ ಬೆಳೆದು ಬೇಗನೆ ಪ್ರಾಯಕ್ಕೆ ಬರುವಂತೆ ಆರೈಕೆಮಾಡಿ, ಮೇವು ಸಿಗದ ಕಾಲದಲ್ಲಿ ಸ್ವಲ್ಪ ಕಾಳು, ತವಡು (ಬೂಸಾ) ಕೊಡಬೇಕು.
7) ಅಂಟುರೋಗಾದಿ ಉಪದ್ರವಗಳು ಕಾಣಿಸಿದ ಕೂಡಲೇ ಎಲ್ಲ ಕುರಿಗಳಿಗೆ ಮೈಲಿ ತೆಗೆಸಿ ಕಾಪಾಡಿಕೊಳ್ಳಬೇಕು.

8) ಕುರಿಗಳು ದೊಡ್ಡ ಮೈಕಟ್ಟು ಉಳ್ಳವುಗಳಾಗಿದ್ದು, ಆ ಮೈಗೆ ತಕ್ಕಹಾಗೆ ಒತ್ತಾಗಿ ಶ್ರೇಷ್ಠವಾದ ತುಪ್ಪಟದಿಂದ ಕೂಡಿರಬೇಕು ಎಂಬುದೇ ಕುರಿಗಳ ತಳಿ ಅಭಿವೃದ್ಧಿಯ ಗುರಿಯಾಗಿರಬೇಕು.

9) ತಳಿಯ ಸಂವರ್ಧನೆಗೆ ಬೇಕಾದ ಗಂಡುಮರಿಗಳಿಗೆಲ್ಲ ಹುಟ್ಟಿದ ಒಂದು ವರ್ಷದಲ್ಲಿ ಕಸಿಮಾಡಿಸದೆ ಇಡಬಾರದು. ಕಸಿ ಮಾಡಿಸಿ, ಕೊಬ್ಬಿಸಿ ಮಾರಿ ಬಿಡಬೇಕು.

10) ಕುರಿಗಳನ್ನು ಹರಿಯುವ ನೀರಿನಲ್ಲಿ ಚೆನ್ನಾಗಿ ತೊಳೆಯದೆ ತುಪ್ಪಟವನ್ನು ಕತ್ತರಿಸಬಾರದು. ತೊಳೆಯುವುದಕ್ಕೂ ತುಪ್ಪಟ ಕತ್ತರಿಸಿಕೊಳ್ಳುವುದಕ್ಕೂ ನಡುವೆ 4- 5ದಿನಗಳಿಗಿಂತ ಹೆಚ್ಚು ಬಿಡುವಿರಬಾರದು.

11) ಹೊಟ್ಟೆಯ ಕೆಳಗಿನ ಮತ್ತು ಕಾಲುಗಳ ಮೇಲಿನ ತುಪ್ಪಟನ್ನು ಶರೀರದ ಇತರ ಭಾಗಗಳಿಂದ ಬಂದ ತುಪ್ಪಟದೊಂದಿಗೆ ಬೆರೆಸಬಾರದು. ತುಪ್ಪಟವನ್ನು ಚೊಕ್ಕಟವಾದ ತನುವಿಲ್ಲದ ಕಡೆ ಶೇಖರಿಸಿಡಬೇಕು.

12) ಮಾರಾಟಕ್ಕೆ ಮೊದಲು ತುಪ್ಪಟವನ್ನು ವಿಂಗಡಿಸಲು ಮರೆಯಬಾರದು. ಬಣ್ಣ, ಎಳೆ ನೋಡಿ ವಿಂಗಡಿಸಿ, ಹಿಕ್ಕೆ ಕಸವನ್ನೆಲ್ಲ ತೆಗೆದುಹಾಕಿ, ಚೊಕ್ಕಟವಾಗಿ ವಿಂಗಡಿಸಿದ ತುಪ್ಪಟಕ್ಕೆ ಬೆಲೆ ಹೆಚ್ಚು ಬರುತ್ತದೆ.

13) ಹೇನು ಹಾಗೂ ಚಿಗಟ ಮುಂತಾದ ಚರ್ಮರೋಗಗಳನ್ನು ನಿವಾರಿಸಿಕೊಳ್ಳುವುದಕ್ಕೂ, ತುಪ್ಪಟ ಚೆನ್ನಾಗಿ ಆಗುವುದಕ್ಕೂ ಹಿಂಡನ್ನು ವರ್ಷಕ್ಕೆ ಒಂದು ಸಲವಾದರೂ ಔಷಧದ ನೀರಿನಲ್ಲಿ ಅದ್ದಲು ಮರೆಯಬಾರದು.

14) ಮಂದೆಯನ್ನು ತಗ್ಗಿನಲ್ಲಿರುವ ಜೌಗು ನೆಲದಲ್ಲಿಯೂ, ಕೆರೆ ಅಂಗಳದಲ್ಲಿಯೂ ಮೇಯಲು ಹೊಡೆಯಬಾರದು. ಜಂತುಗಳ ರೋಗವನ್ನು ತಂದು ಕೊಡುವುದಕ್ಕೆ ಈ ಸ್ಥಳಗಳೇ ಮುಖ್ಯ ಕಾರಣ.

ಅಧ್ಯಾಯ 9

ಉಣ್ಣೆ

ಉಣ್ಣೆಗಾಗಿ ಕುರಿಗಳ ಆಯ್ಕೆ

ಕುರಿಗಳ ಹಿಂಡಿನಲ್ಲಿ ಕೆಲವು ಕುರಿಗಳು ಉಳಿದ ಕುರಿಗಳಿಗಿಂತ ಉತ್ತಮ ಉಣ್ಣೆಯನ್ನು ಕೊಡುತ್ತವೆ. ಕೆಲವು ಹಿಂಡುಗಳು ಉಳಿದ ಹಿಂಡುಗಳಿಗಿಂತ ಉತ್ತಮವಾದ ಹೆಚ್ಚು ಉಣ್ಣೆಯನ್ನು ಕೊಡುತ್ತವೆ. ಉತ್ತಮ ಮತ್ತು ಹೆಚ್ಚು ಉಣ್ಣೆಯನ್ನು ಕೊಡುವ ಕುರಿಗಳನ್ನು ಆರಿಸಿ, ಮುಂದಿನ ಹಿಂಡಿನ ಬೆಳವಣಿಗೆಗಾಗಿ ಕಾದಿಟ್ಟುಕೊಳ್ಳಬೇಕು. ಆಗಾಗ ಕೀಳುದರ್ಜೆಯ ಕುರಿಗಳನ್ನು ಹಿಂಡಿನಿಂದ ತೆಗೆದುಹಾಕಬೇಕು.

ಕುರಿಗಳ ಹಿಂಡಿನಲ್ಲಿ ಉತ್ತಮ ತರಗತಿಯ ಉಣ್ಣೆ ಉತ್ಪತ್ತಿಗಾಗಿ ಸುಧಾರಿಸಿ ಬಿಳಿಯ ಬಣ್ಣದ ಟಗರನ್ನು ಬಿಡಬೇಕು. ಇದರಿಂದ ಕೆಲವು ಕಾಲದಲ್ಲಿಯೇ ಇಡಿ ಹಿಂಡಿನ ಬಣ್ಣವು ಏಕರೂಪವಾಗುವುದಲ್ಲದೆ ಅದರ ಉಣ್ಣೆಯು ಹೆಚ್ಚು ಬೆಲೆಯುಳ್ಳದ್ದಾಗುವುದು. ಇಂಥ ಹಿಂಡು ಮೊದಲಿಗಿಂತ ಹೆಚ್ಚು ಉಣ್ಣೆಯನ್ನು ಕೊಡುತ್ತದೆ.

ಕೆಂಪು ಮೂಗಿನ ಕೆಂಪು ಗೊರಸಿನ ಹಾಗೂ ಸಂಪೂರ್ಣ ಬೆಳ್ಳಗಿರುವ ಕುರಿಗಳು ಸಾಮಾನ್ಯವಾಗಿ ಮೆತ್ತನೆಯ ಸ್ವಭಾವದವು ಹಾಗೂ ದುರ್ಬಲವಾಗಿರುತ್ತವೆ. ಆದ್ದರಿಂದ ಸಾಕುವುದರ ಸಲುವಾಗಿ ಬಿಳಿಯ ಉಣ್ಣೆಯು ಮತ್ತು ಕಪ್ಪು ಚರ್ಮದ, ಕಪ್ಪು ಗೊರಸುಗಳುಳ್ಳ ಕುರಿಗಳನ್ನು ಆರಿಸಬೇಕು. ಒಂದು ವೇಳೆ ಕರಿಯ ಮುಖವುಳ್ಳ ಕುರಿಯನ್ನು ಆರಿಸಬೇಕಾದಲ್ಲಿ ಅದರ ಮುಖವು ಮಾತ್ರ ಕಪ್ಪು ಬಣ್ಣದ್ದಾಗಿರಬೇಕು. ಈ ಕಪ್ಪು ಬಣ್ಣ ಕೇವಲ ಮುಖಕ್ಕೆ ಮಾತ್ರ ಸೀಮಿತವಾಗಿರಬೇಕೇ ಹೊರತು ಬೇರೆ ಕಡೆಗೆ ಹರಡಿರಬಾರದು. ಮುಖ ಮತ್ತು ತಲೆಯ ಮೇಲಿನ ಕೂದಲುಗಳು ಆ ಕುರಿಯು ಎಂಥ ಉಣ್ಣೆಯನ್ನು ಕೊಡಬಲ್ಲದು ಎಂಬುದನ್ನು ಸೂಚಿಸುತ್ತವೆ. ಆದ್ದರಿಂದ ಮುಖದ ಮೇಲೆ ಮತ್ತು ತಲೆಯ ಮೇಲೆ ಸಣ್ಣದಾದ, ನಯವಾದ, ರೇಶ್ಮೆಯಂತೆ ಮಿಂಚುತ್ತಿರುವ

ಕೂದಲುಗಳುಳ್ಳ ಕುರಿಗಳನ್ನು ಆರಿಸಬೇಕು. ಇಂಥ ಕುರಿಗಳು ಹೆಚ್ಚು ಉತ್ತಮ ಉಣ್ಣೆಯನ್ನು ಉತ್ಪಾದಿಸಬಲ್ಲವು. ಕುತ್ತಿಗೆ ಮತ್ತು ಬೆನ್ನಿನ ಮೇಲೆ (ಡುಬ್ಬದ ಮೇಲೆ) ಉಂಗುರು ಉಂಗುರಾದ ಉಣ್ಣೆಯುಳ್ಳ ಕುರಿಯು ಹೆಚ್ಚು ಮತ್ತು ಮೆತ್ತನೆಯ ಉಣ್ಣೆಯನ್ನು ಕೊಡುತ್ತದೆ. ಪಕ್ಕೆಲುಬುಗಳ ಮೇಲೆ ಉದ್ದವಾದ ಕೂದಲುಗಳಿಂದ ಕೂಡಿದ ಕುರಿಗಳನ್ನು ಆರಿಸಬಾರದು. ಇದು ಉತ್ತಮ ಉಣ್ಣೆಯ ಕುರಿಯ ಲಕ್ಷಣವಲ್ಲ. ಉತ್ತಮ ಜಾತಿಯ ಕುರಿಗಳಿಗೆ ಕಾಲಿನ ತುದಿಯವರೆಗೆ ಉಣ್ಣೆ ದಟ್ಟವಾಗಿ ಬೆಳೆದಿರುತ್ತದೆ. ಸಧ್ಯಕ್ಕೆ ಇಂಥ ಉತ್ತಮ ದರ್ಜೆಯ ಕುರಿಗಳನ್ನು ಉತ್ಪಾದಿಸಲು ಸಾಧ್ಯವಾಗದಿದ್ದರೂ ಈ ಲಕ್ಷಣಗಳುಳ್ಳ ಕುರಿಗಳನ್ನು ಆದರ್ಶವಾಗಿಟ್ಟುಕೊಂಡು ಉತ್ತಮ ಉಣ್ಣೆಯನ್ನು ಬೆಳೆಸಬೇಕೆಂಬ ಉದ್ದೇಶದಿಂದ ಕುರಿಗಳನ್ನು ಸಾಕಬೇಕು.

ನಿರ್ವಾಹವಿಲ್ಲದೆ ಹೋದರೆ ಕಪ್ಪು, ಬೂದು ಮುಂತಾದ ಬಣ್ಣದ ಮಿಶ್ರಿತವಿರುವ ಕುರಿಯನ್ನು ಮುಂದಿನ ಶುದ್ಧ ತಳಿ ಆಯ್ಕೆಗಾಗಿ ಅಂಗೀಕರಿಸಬಹುದಾದರೂ ಕಂದು ಬಣ್ಣದ ಮಿಶ್ರವಿರುವ (ಇದನ್ನು ಉತ್ತರ ಕರ್ನಾಟಕದಲ್ಲಿಯ ಕುರುಬರು 'ದೆವ್ವ ನೀಲ ಕುರಿ' ಎಂದು ಕರೆಯುತ್ತಾರೆ.) ಕುರಿಗಳನ್ನು ಎಂದಿಗೂ ಆರಿಸಿಕೊಳ್ಳಬಾರದು. ಪರೀಕ್ಷೆ ಮಾಡಿ ನೋಡಿದಲ್ಲಿ ಈ ಕಂದು ಬಣ್ಣದ ದೋಷ ವಂಶಪರಂಪರೆಯಾಗಿ ಬಿಟ್ಟೂ ಬಿಡದೆ ಮೊಂಡು ಬಿದ್ದು ಸಾಗಿಬರುವಂತೆ ಮತ್ತೊಂದು ಬಣ್ಣ ಮೊಂಡು ಬೀಳುವುದಿಲ್ಲ. ಆದುದರಿಂದ ಆಯ್ಕೆಗೆ ಕಂದು ಬಣ್ಣದ ಕುರಿಯನ್ನು ಎಂದಿಗೂ ಒಪ್ಪತಕ್ಕದ್ದಲ್ಲ. ಈ ಪ್ರಕಾರ ಕಟ್ಟುನಿಟ್ಟಾಗಿ ತಳಿ ಶುದ್ಧಗೊಳಿಸುವ ನಿಯಮವನ್ನು ಪಾಲಿಸುತ್ತ, ಬಣ್ಣದ ದೋಷವಿರುವ ಕುರಿಗಳನ್ನು ಕಾಲಕಾಲಕ್ಕೆ ತೆಗೆದುಹಾಕುತ್ತ ಬಂದಲ್ಲಿ ಕೆಲವು ಕಾಲವಲ್ಲಿಯೇ ಶುದ್ಧ ಬಿಳಿಯ ಕುರಿಗಳ ಮಂದೆಯನ್ನು ಪಡೆದುಕೊಳ್ಳಬಹುದು.

ಕುರಿಸಾಕುವವರು ಉಣ್ಣೆಯ ಸುಧಾರಣೆಯ ಮಾರ್ಗದಲ್ಲಿ ಒಂದು ಮುಖ್ಯವಾದ ಗುರಿಯನ್ನು ಸಾಧಿಸಬೇಕು. ಕುರಿ ಸಾಧ್ಯವಿದ್ದಷ್ಟು ಅಚ್ಚ ಬಿಳಿಯ ಬಣ್ಣದ್ದೂ, ಸದೃಢ ಮೈಕಟ್ಟಿನಿಂದ ಕೂಡಿದ ಮತ್ತು ಮೈತುಂಬ ದಟ್ಟವಾಗಿ ಒಂದೇ ಸಮನಾಗಿ ಬೆಳೆದ ತುಪ್ಪಟದಿಂದ ಕೂಡಿರಬೇಕು. ಕುರಿಯ ಮೈಮೇಲಿನ ತುಪ್ಪಟವು ಅಂಗುಲ ಅಂಗುಲವಾಗಿ ಬೆಳೆಯದೆ ಒತ್ತಾಗಿ ಬೆಳೆದಿರಬೇಕು. ಈ ಒಂದು ಘನತರವಾದ ತುಪ್ಪಟವನ್ನು ಪಡೆಯಲು ಮೇಲೆ ಹೇಳಿದ ಗುಣಗಳಿಲ್ಲದ ಕುರಿಗಳನ್ನು ಮಂದೆಯಿಂದ ತೆಗೆದುಹಾಕುತ್ತಿರಬೇಕಲ್ಲದೆ ಅಂತಹ ಮಂದೆಗೆ ದೃಢಕಾಯದ, ಸೊಗಸಾಗಿ ಮತ್ತು ದಟ್ಟವಾಗಿ ಬೆಳೆದ ಬಿಳಿಯ ತುಪ್ಪಟವನ್ನುಳ್ಳ ಟಗರನ್ನು ಮುಂದಿನ ಸಂತಾನಾಭಿವೃದ್ಧಿಗೆ ಇಟ್ಟುಕೊಳ್ಳುವುದು ಅತಿ ಅಗತ್ಯ. ಈ ಪ್ರಕಾರ ಮುತುವರ್ಜಿವಹಿಸಿ, ಒಂದೇ ರೀತಿಯ ಬಿಳಿಯ ಕುರಿಗಳ ಮಂದೆಯನ್ನು ಸಾಧಿಸಿದ ನಂತರ ಮಂದೆಯನ್ನು ಮತ್ತಷ್ಟು ಉತ್ತಮ

ಗೊಳಿಸುವುದಕ್ಕಾಗಿ ಉತ್ತಮ ವರ್ಗದ ಮೆರಿನೋ ಜಾತಿಯ ಕುರಿಗಳ ರಕ್ತಸಂಬಂಧವುಳ್ಳ ಟಗರನ್ನು ಸಂವರ್ಧನೆಗಾಗಿ ಉಪಯೋಗಿಸಬೇಕು. ಅನಂತರ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲು ಕುರಿಯ ಹಿಂದಿನ ಮುಂದಿನ ಪೀಳಿಗೆಗಳನ್ನು ಶುದ್ಧ ರಕ್ತದ ಶ್ರೇಷ್ಠ ಜಾತಿಯ ಮೆರಿನೋ ಟಗರುಗಳನ್ನು ಉಪಯೋಗಿಸಬೇಕು.

ಉಣ್ಣೆ ಕತ್ತರಿಸಿ ವಿಂಗಡಿಸುವಿಕೆ

ವರ್ಷಕ್ಕೆ ಎರಡು ಸಾರಿ ಅಂದರೆ ಆರು ತಿಂಗಳಿಗೊಮ್ಮೆ ಉಣ್ಣೆಯನ್ನು ಕತ್ತರಿಸುತ್ತಾರೆ. ಜೂನ್ ತಿಂಗಳಲ್ಲಿ ಮತ್ತು ಡಿಸೆಂಬರ್ ತಿಂಗಳಲ್ಲಿ ಹೀಗೆ ಎರಡು ಸಲ ಉಣ್ಣೆಯನ್ನು ಕತ್ತರಿಸುವುದು ನಮ್ಮಲ್ಲಿಯ ಪದ್ಧತಿ. ಇದರಲ್ಲಿ ಜೂನ್ ತಿಂಗಳಲ್ಲಿ ಕತ್ತರಿಸುವ ಉಣ್ಣೆಯು ಡಿಸೆಂಬರ್ ತಿಂಗಳಲ್ಲಿ ಕತ್ತರಿಸುವ ಉಣ್ಣೆಗಿಂತ ಉತ್ತಮವಾದುದೂ ಮತ್ತು ತೂಕದಲ್ಲಿ ಸ್ವಲ್ಪ ಹೆಚ್ಚಿನದಾಗಿರುತ್ತದೆ. ಏಕೆಂದರೆ, ಆ ಕಾಲದಲ್ಲಿ (ಜೂನ್ ತಿಂಗಳಲ್ಲಿ) ಕುರಿಗಳಿಗೆ ಮೇವು, ಆಹಾರ ಹೆಚ್ಚಾಗಿ ಸಿಗುವ ಕಾಲವದು. ಒಕ್ಕಲುತನದ ಸುಗ್ಗಿಯು ಆದೇ ತಾನೆ ಮುಗಿದಿದ್ದು ಕುರಿಗಳಿಗೆ ಮೇಯಲು ಹತ್ತಿ ಮತ್ತು ಜೋಳದ ಹಕ್ಕಲು ಜಮೀನಿನಲ್ಲಿ ಮೇವು ಮತ್ತು ರವದಿ ಸಿಗುತ್ತದೆ. ಅಲ್ಲದೆ ಹತ್ತಿ ತಪ್ಪಲ, ಹತ್ತಿಕಾಯಿ, ಕುಳೀದ ಸೊಪ್ಪೆ ಮತ್ತು ಕುಸುಬಿ ಹೊಲದಲ್ಲಿ ಬಡಿದು ಬಿಟ್ಟ ಸಿಡಿಗಳು ಸಿಗುತ್ತವೆ. ಮೇಯಲು ಜಾಲಿಕಾಯಿ ಸಿಗುವ ಕಾಲವದು. ಈ ಪ್ರಕಾರವಾಗಿ ಉತ್ತಮ ಪೌಷ್ಟಿಕ ಆಹಾರ ಸಾಕಷ್ಟು ಸಿಗುವುದರಿಂದ ಸಹಜವಾಗಿ ಉಣ್ಣೆಯೂ ಸಹ ಉತ್ತಮ ಗುಣವುಳ್ಳದ್ದಾಗಿರುತ್ತದೆ.

ಕರ್ನಾಟಕದ ಜವಾರಿ (ಡೆಕ್ಕನಿ) ಜಾತಿಯ ಕುರಿಗಳಿಗೆ ತಲೆ, ಎದೆ, ಹೊಟ್ಟೆ ಮತ್ತು ಕುತ್ತಿಗೆಯ ಕೆಳಭಾಗದಲ್ಲಿ ಉಣ್ಣೆ ಬೆಳೆದಿರುವುದಿಲ್ಲ. ಶರೀರದ ಈ ಭಾಗಗಳು ಒರಟು ಕೂದಲುಗಳಿಂದ ತುಂಬಿಕೊಂಡಿರುತ್ತದೆ. ಹಿಂಗಾಲು ಚಪ್ಪೆಯ ಮೇಲಿನ ಉಣ್ಣೆಯು ಅಷ್ಟು ಉತ್ತಮ ತರಗತಿಯದಿರುವುದಿಲ್ಲ. ತೋಳಿನ ಮೇಲಿನ ಮತ್ತು ಬೆನ್ನಿನ ಮೇಲಣ ತುಪ್ಪಟವು ಮೃದುವಾಗಿ ಉತ್ತಮವಾಗಿರುತ್ತದೆ. ಕಾಲು ಮತ್ತು ಹೊಟ್ಟೆಯ ಮೇಲಿನ ಉಣ್ಣೆಯು ಒರಟು ಮತ್ತು ಮೇಲು ತರಗತಿಯದಲ್ಲ. ಕುರುಬರು ಕುರಿಗಳ ಉಣ್ಣೆಯನ್ನು ಕತ್ತರಿಸುವಾಗ ಉಣ್ಣೆ, ಕೂದಲುಗಳನ್ನು ಕೂಡಿಸಿ ಕತ್ತರಿಸುತ್ತಾರೆ. ಅವರು ಉಣ್ಣೆ ಮತ್ತು ಕೂದಲುಗಳನ್ನು ಬೇರೆಬೇರೆಯಾಗಿ ಇಡುವುದರ ಕಡೆಗೆ ಲಕ್ಷ್ಯ ಕೊಡುವದಿಲ್ಲ. ಹೀಗೆ ಉಣ್ಣೆ ಮತ್ತು ಕೂದಲನ್ನು ಮಿಶ್ರಮಾಡುವುದರಿಂದ ಏನೂ ಲಾಭವಿಲ್ಲ. ಪ್ರತಿಯೊಂದು ಕತ್ತರಿಗೆ ಸರಾಸರಿ 14 ತೊಲ (.175 ಗ್ರಾಮ್) ಉಣ್ಣೆಯ ಉತ್ಪಾದನೆಯಲ್ಲಿ 2 ತೊಲ (25 ಗ್ರಾಮ್) ಕೂದಲುಗಳ ಭಾಗವನ್ನು ಕೂಡಿಸುವುದರಿಂದ ಉಣ್ಣೆಯ ಪ್ರಮಾಣದಲ್ಲಿ ಏನೂ ಗಳಿಕೆಯಾಗುವುದಿಲ್ಲ. ಕನಿಷ್ಠ ತರಗತಿಯ

ಹಿಂಗಾಲು ಚಪ್ಪೆಯ ಮೇಲಿನ ಉಣ್ಣೆಯು ಒಟ್ಟು ಉಣ್ಣೆಯ ಆರನೇ ಭಾಗಕ್ಕಿಂತ ಎಂದೂ ಹೆಚ್ಚಾಗಿರುವುದಿಲ್ಲ. ಕೊನೆಯದಾಗಿ ಕುರಿಗಳನ್ನು ಆದಷ್ಟು ಸಣ್ಣದಾಗಿ ಚರ್ಮಕ್ಕೆ ಹೊಂದಿ ಕತ್ತರಿಸಬೇಕು. ಕತ್ತರಿಯು ಕುರಿಯ ಚರ್ಮಕ್ಕೆ ಸಮೀಪವಿದ್ದಷ್ಟು ಸರಳವಾಗಿ ಮತ್ತು ಸುಗಮವಾಗಿ ಚಲಿಸುವುದರಿಂದ ಒಂದೇ ಸಮವಾಗಿ ಕತ್ತರಿಸುವುದಕ್ಕೆ ಅನುಕೂಲವಾಗುತ್ತದೆ. ಕುರಿಗಳ ಉಣ್ಣೆಯನ್ನು ಸಣ್ಣಾಗಿ ಕತ್ತರಿಸದಿದ್ದರೆ ಈ ಬೆಲೆಯುಳ್ಳ ಜಿನಗಾದ ಉಣ್ಣೆಯ ತಂತುಗಳು ಕುರಿಗಳ ಮೈಮೇಲೆಯೇ ಉಳಿದು, ಹೊರಟ ಉಣ್ಣೆಯ ಬೆಲೆ ಕಡಮೆಯಾಗುತ್ತದೆ. ಕತ್ತರಿಸಿದ ಉಣ್ಣೆಯನ್ನು ಮತ್ತೆ ಮತ್ತೆ ತುಂಡರಿಸಿದಂತೆ ಬಿಡಿಸಿ ಕತ್ತರಿಸಬೇಕು. ಹಿಂಡಿನಲ್ಲಿ ತರಹ ತರಹದ ನಮೂನೆಯ ಮತ್ತು ಬಣ್ಣದ ಉಣ್ಣೆಯನ್ನು ವಿಂಗಡಿಸಿ, ಬೇರೆಬೇರೆಯಾಗಿ ಇಡುವ ಪದ್ಧತಿ ಬಹಳ ಉತ್ತಮ ಪದ್ಧತಿ.

ಉಣ್ಣೆಯನ್ನು ಕತ್ತರಿಸುವುದಕ್ಕಿಂತ 4 ದಿವಸ ಮೊದಲು ಕುರಿಗಳನ್ನು ತಪ್ಪದೇ ಹರಿಯುವ ಸ್ವಚ್ಛವಾದ ತಿಳಿನೀರಿನಲ್ಲಿ ತೊಳೆಯಬೇಕು. ಸಾಧ್ಯವಾದಲ್ಲಿ ಹರಿಯುವ ನೀರಿನಲ್ಲಿ ಅವುಗಳನ್ನು ತೊಳೆದರೆ ಸಾಧ್ಯವಾದಷ್ಟು ಶುದ್ಧವಾದ ಉಣ್ಣೆ ದೊರೆಯುತ್ತದೆ. ಉಣ್ಣೆ ಕತ್ತರಿಸಿದ ನಂತರ ಮೈಗೆ ಎಳ್ಳೆಣ್ಣೆಯನ್ನು ಸವರಬೇಕು. ಒಂದು ವೇಳೆ ಚರ್ಮ ರೋಗ ಕಂಡುಬಂದಲ್ಲಿ ಅಂಥವುಗಳ ಮೈಗೆ ಬೇವಿನ ಎಣ್ಣೆ ಅಥವಾ ಹೊಂಗೆ ಎಣ್ಣೆ (ಹುಲಗಲ ಎಣ್ಣೆ) ಮತ್ತು ಗಂಧಕದ ಪುಡಿ ಕೂಡಿಸಿ ಹಚ್ಚಬೇಕು.

ತುಪ್ಪಟವನ್ನು ಯಂತ್ರದ ಸಹಾಯದಿಂದ ಕತ್ತರಿಸಿಕೊಳ್ಳುವುದು ಮೇಲು. ಹೀಗೆ ಮಾಡಿದಲ್ಲಿ ಉಣ್ಣೆಯನ್ನು ಒಂದೇ ಸಮನೆ ಬುಡಕ್ಕೆ ಹತ್ತಿ ಕತ್ತರಿಸಿಕೊಳ್ಳಬಹು ದಲ್ಲದೆ ದಿನವೊಂದಕ್ಕೆ ಹೆಚ್ಚು ಕುರಿಗಳ ತುಪ್ಪಟವನ್ನು ಕತ್ತರಿಸಬಹುದು.

ಉಣ್ಣೆ ಕೈಗಾರಿಕೆ

ಉಣ್ಣೆಯ ಬಟ್ಟೆಗಳಿಗೆ ಕುರಿಗಳೇ ಮೂಲಾಧಾರ. ಭಾರತದಲ್ಲಿ ಕುರಿಸಾಕು ವುದು ಮತ್ತು ಉಣ್ಣೆಯಿಂದ ನೂಲುತೆಗೆದು ವಸ್ತ್ರಗಳನ್ನು ತಯಾರಿಸುವಿಕೆಯು ಪ್ರಾಚೀನ ಕಾಲದಿಂದ ಸಾಗಿ ಬಂದ ಕಲೆ. ನಮ್ಮ ಪುರಾತನ ಗ್ರಂಥಗಳಲ್ಲಿ ಉಣ್ಣೆಯ ಬಗ್ಗೆ ಉಲ್ಲೇಖನಗಳಿರುವುದೇ ಇದಕ್ಕೆ ಸಾಕ್ಷಿ. ಕುರಿಸಾಕುವವರನ್ನು ಕುರುಬರೆಂದೂ ಉಣ್ಣೆಯಿಂದ ನೂಲುತೆಗೆದು ಉಣ್ಣೆಯ ಬಟ್ಟೆಗಳನ್ನು ನೇಯುವವರನ್ನು ನೇಕಾರ ರೆಂದು ಕರೆಯಲಾಯಿತು. ಈ ನೇಕಾರರನ್ನು 'ಜಾಡರು' ಎಂದು ಕರೆಯುವುದುಂಟು. ಯಾರು ಜಾಡಿಗಳನ್ನು ತಯಾರಿಸುವರೋ ಅವರನ್ನು 'ಜಾಡರು' ಎಂದು ಕರೆಯುವುದು ವಾಡಿಕೆಯಾಗಿ ಬಂದಿದೆ. ಇವರು ದೇವಾಂಗದ ಜನಾಂಗದವರೆಂದು ಸುಪ್ರಸಿದ್ಧ ರಾಗಿದ್ದಾರೆ. 'ದೇವಾಂಗ ಪುರಾಣ'ವೆಂಬ ಪುರಾತನ ಗ್ರಂಥದಲ್ಲಿ ಈ ಜನಾಂಗದ

ಪರಂಪರೆಯನ್ನು ಹೇಳಲಾಗಿದೆ. ಉಣ್ಣೆಯ ಕೆಲಸವನ್ನು ಮಾಡುವವರನ್ನು ಉಣ್ಣೆಯ ಕಂಕಣದವರೆಂದು, ಹತ್ತಿಯ ಕೆಲಸ ಮಾಡುವವರನ್ನು ಹತ್ತಿ ಕಂಕಣದವರೆಂದು ಕರೆಯಲಾಯಿತು. ಉಣ್ಣೆಯ ಆವಿಷ್ಕಾರ ಇತ್ತೀಚಿನದಲ್ಲ. ನಮ್ಮ ಪೂರ್ವಜರಿಗೆ ಬಹಳ ಪ್ರಾಚೀನ ಕಾಲದಿಂದ ಇದರ ಉಪಯೋಗ ಗೊತ್ತಿತ್ತು. ಮತ್ತೊಂದು ಹಳೆಯ ಗ್ರಂಥವಾದ ಭಾರತದ ರಾಜ್ಯಶಾಸ್ತ್ರ ಗ್ರಂಥಗಳಲ್ಲಿ ಅಗ್ರಸ್ಥಾನ ಪಡೆದಿರುವ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಸೂತ್ರಾಧ್ಯಕ್ಷ' ಎಂಬ ಅಧ್ಯಾಯದಲ್ಲಿ ಉಣ್ಣೆಯ ಉಲ್ಲೇಖವಿದೆ. ಸೂತ್ರಾಧ್ಯಕ್ಷನು ಉಣ್ಣೆ, ನಾರು, ಹತ್ತಿ ಮೊದಲಾದವುಗಳ ವ್ಯವಹಾರವನ್ನು ಆ ಕೆಲಸ ಮಾಡುವ ಕುಲದವರಾಗಿಯೂ, ಕುಶಲರಾಗಿಯೂ ಇರುವ ಜನರಿಂದ ಮಾಡಿಸಬೇಕು ಎಂಬುದಾಗಿ ಕೌಟಿಲ್ಯನು ಸೂತ್ರಾಧ್ಯಕ್ಷನ ಕಾರ್ಯಕಲಾಪಗಳ ವಿವರ ನೀಡಿರುವನು. ಸೂತ್ರಾಧ್ಯಕ್ಷನು ಇಷ್ಟು ನೂಲಿಗೆ ಇಷ್ಟು ಸಂಬಳವೆಂದು ಗೊತ್ತುಮಾಡಿ ಕೆಲಸ ಮಾಡಿಸಬೇಕು. ಹಿಂಜುವ ಮತ್ತು ನೂಲು ತೆಗೆಯುವ ಮತ್ತು ನೂಲುವ ಕೆಲಸದಲ್ಲಿ ಹೆಂಗಸರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕು. ಉಣ್ಣೆ ಅಥವಾ ಹತ್ತಿ ಕೊಟ್ಟದ್ದಕ್ಕಿಂತ ಕಡಮೆ ನೂಲು ತೆಗೆದುಕೊಟ್ಟಲ್ಲಿ ದಿನದ ಸಂಬಳವನ್ನು ನೂಲಿನ ಗುಣಕ್ಕನುಸರಿಸಿ ಕಡಮೆಮಾಡಬೇಕು. ಇತರರಿಗಿಂತ ಹೆಚ್ಚು ನೂಲು ಮತ್ತು ಉತ್ತಮ ಗುಣಮಟ್ಟದ ನೂಲನ್ನು ತಯಾರಿಸುವ ಕುಶಲ ಕಾರ್ಮಿಕರಿಗೆ ಪ್ರೋತ್ಸಾಹ ಧನ ಕೊಟ್ಟು, ಸುಗಂಧ ದ್ರವ್ಯಗಳು ಹೂವಿನ ಹಾರ ಹಾಕಿ ಮರ್ಯಾದೆ ಮಾಡಬೇಕು. ಇದರಿಂದ ಕುಶಲ ಕಾರ್ಮಿಕರನ್ನು ಪ್ರೋತ್ಸಾಹಿಸಿದಂತೆ ಆಗುವುದಲ್ಲದೆ ಇತರ ಕಾರ್ಮಿಕರಿಗೂ ತಮ್ಮ ಉತ್ಪಾದನೆಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರೇರಕವಾಗುತ್ತದೆ ಎಂಬುದು ಕೌಟಿಲ್ಯನ ಅಭಿಮತ. ಈ ಪದ್ಧತಿಯನ್ನು ಇಂದಿಗೂ ಕೈಗಾರಿಕಾ ವ್ಯವಸ್ಥೆಯಲ್ಲಿ ಉತ್ತೇಜನ ವೇತನ ಎಂದು ಕರೆಯುತ್ತಾರೆ. ಕೆಲಸ ಕೆಡಿಸಿದವರಿಗೆ ಮತ್ತು ಕೆಲಸ ತಪ್ಪಿಸಿದವರಿಗೆ ದಂಡ ಹಾಕಬೇಕು. ವೇತನ ತೆಗೆದುಕೊಂಡು ಕೆಲಸ ಮಾಡದೆ ತಪ್ಪಿಸಿಕೊಂಡ ಕಾರ್ಮಿಕನ ಬೆರಳನ್ನು ಕತ್ತರಿಸಬೇಕು. (ಗೃಹೀತ್ವಾ ವೇತನಂ ಕರ್ಮಾಕುರ್ವಂತ್ಯಾ ಅಂಗುಷ್ಠ ಸಂದಂಶ ದಂದಾಪಯೇತ್) ಎಂಬುದಾಗಿ ಕೌಟಿಲ್ಯನ ಅರ್ಥಶಾಸ್ತ್ರದ 'ಸೂತ್ರಾಧ್ಯಕ್ಷ'ವೆಂಬ ಅಧ್ಯಾಯದಲ್ಲಿ ಬರೆಯಲಾಗಿದೆ.

ಉಣ್ಣೆಯ ನಿರ್ಯಾತ ವ್ಯವಹಾರ

ನಮ್ಮ ದೇಶದಿಂದ ಪರದೇಶಗಳಿಗೆ ನಿರ್ಯಾತವಾಗುವ ಸಾಮಗ್ರಿಗಳಲ್ಲಿ ಉಣ್ಣೆಯೂ ಸಹ ಒಂದು. ಕ್ರಿ.ಶ. 1970–71 ರಲ್ಲಿ 2354 ಕೋಟಿ ರೂಪಾಯಿ ಬೆಲೆ

* ಪ್ರೊ. ಬಿ ಎಂ. ಪಂಡಿತ ಉಣ್ಣೆಯ ನಿರ್ಯಾತ ವ್ಯಾಪಾರ, ಹುಬ್ಬಳ್ಳಿ, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ತಾ.18-3-1974

ಯಷ್ಟು ಉಣ್ಣೆಯ ಬಟ್ಟೆಗಳನ್ನು ವಿದೇಶಗಳಿಗೆ ನಿರ್ಯಾತ ಮಾಡಲಾಯಿತು. ಕ್ರಿ.ಶ. 1967–70 ರಲ್ಲಿ ಉಣ್ಣೆಯ ನಿರ್ಯಾತ ಮೌಲ್ಯ 2250 ಕೋಟಿ ರೂಪಾಯಿಗಳಷ್ಟಿತ್ತು. ರಶಿಯಾ, ಹಂಗೇರಿ, ಪೋಲಂಡ್, ಹಾಂಗ್‌ಕಾಂಗ್, ಕೆನಡಾಗಳು ನಮ್ಮ ದೇಶದ ಉಣ್ಣೆಯ ಬಟ್ಟೆಗಳ ಮುಖ್ಯ ಗ್ರಾಹಕ ದೇಶಗಳು. ಕ್ರಿ.ಶ. 1970–71 ರಲ್ಲಿ ರಶಿಯಾ ದೇಶವೊಂದೇ ಸುಮಾರು 8·21 ಕೋಟಿ ರೂಪಾಯಿಗಳ ಉಣ್ಣೆಯನ್ನು ಭಾರತದಿಂದ ಆಮದು ಮಾಡಿಕೊಂಡಿತು. ವಿದೇಶೀ ಪೇಟೆಗಳಲ್ಲಿ ಭಾರತದ ಉಣ್ಣೆಯ ಜಮಖಾನ, ರತ್ನಗಂಬಳಿಗಳಿಗೆ ಮಾತ್ರ ಬೇಡಿಕೆಯಿದೆ. ಕಾಶ್ಮೀರ, ಜಯಪುರ, ಬಿಕಾನೇರ್, ಆಗ್ರಾ, ವಾರಂಗಲ್‌ಗಳು ಉಣ್ಣೆಯ ಜಮಖಾನೆ, ರತ್ನಗಂಬಳಿಗಳಿಗೆ ಪ್ರಸಿದ್ಧವಾಗಿವೆ, ವರ್ಷಕ್ಕೆ ಉತ್ಪಾದನೆಯಲ್ಲಿಯ ಅರ್ಧದಷ್ಟು (50%) ಉಣ್ಣೆ ಸುಮಾರು ಉಣ್ಣೆಯ ನೂಲು ನಮ್ಮ ದೇಶದಿಂದ ರಫ್ತಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಉಣ್ಣೆಯ ನಿರ್ಯಾತ ವ್ಯವಹಾರ ಕಡಮೆಯಾಗುವುದು ಕಂಡುಬಂದಿದೆ. ಅಲ್ಲದೆ ಬೇರೆ ದೇಶಗಳೊಂದಿಗೆ ಉಣ್ಣೆಯ ನಿರ್ಯಾತ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಉಣ್ಣೆಯ ಉತ್ಪಾದನೆಯ ವೆಚ್ಚ ಹೆಚ್ಚುತ್ತಿರುವುದು ಇದಕ್ಕೆ ಒಂದು ಕಾರಣವಾಗಿದೆ. ಕುರಿಗಳ ಪಾಲನೆ, ಪೋಷಣೆ ಹಾಗೂ ಸಂವರ್ಧನೆಗಳನ್ನು ಸುಧಾರಿಸಿದ ಆಧುನಿಕ ವೈಜ್ಞಾನಿಕ ತಳಹದಿಯ ಮೇಲೆ ನಡೆಸಿ, ಹೆಚ್ಚು ಉತ್ತಮ ಉಣ್ಣೆಯನ್ನು ಉತ್ಪಾದನೆಮಾಡಿದಲ್ಲಿ ಈ ಉಣ್ಣೆಯ ನಿರ್ಯಾತ ವ್ಯವಹಾರವನ್ನು ಪುನರುಜ್ಜೀವನಗೊಳಿಸಬಹುದು.

ಪ್ರಪಂಚದಲ್ಲಿ ಇಂದು ಸುಮಾರು 70 ಕೋಟಿಗಿಂತ ಮಿಗಿಲಾಗಿ ಜಾತಿಯ ಕುರಿಗಳಿವೆ ಎಂದು ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯವರು ಅಂದಾಜು ಮಾಡಿದ್ದಾರೆ. ಕುರಿಗಳ ಜಾತಿಗೆ ತಕ್ಕಂತೆ ಸಂಗ್ರಹಿಸಿದ ಉಣ್ಣೆಯನ್ನು ಅವರ ಗುಣಕ್ಕನುಗುಣವಾಗಿ ಉತ್ತಮ, ಮಧ್ಯಮ ಮತ್ತು ಇತರ ವರ್ಗಕ್ಕೆ ಸೇರಿದುದೆಂದು ಉಣ್ಣೆಯ ವಿಷಯದಲ್ಲಿ ಮಾಹಿತಿಯುಳ್ಳ ಅನುಭವಿಗಳು ಬೇರ್ಪಡಿಸುತ್ತಾರೆ. ಉತ್ತಮ ವರ್ಗದ ಉಣ್ಣೆ ಉದ್ದದಲ್ಲಿ ಚಿಕ್ಕದಿದ್ದು 1½–5 ಅಂಗುಲವಿದ್ದು, ಬಲು ಮೃದುವಾಗಿರುತ್ತದೆ. ಅದರ ಉದ್ದ ಹೆಚ್ಚಿದಂತೆಲ್ಲ ಉಣ್ಣೆಯ ನಯ, ಲಕ್ಷಣ ಮತ್ತು ಹುರಿಕಟ್ಟು ಕಡಮೆಯಾಗುತ್ತ ಹೋಗುತ್ತದೆ. ಚೀನ, ತುರ್ಕಿ, ಸೈಬೇರಿಯಾ, ಆಸ್ಟ್ರೇಲಿಯಾ, ಇಂಗ್ಲಂಡ್, ಸ್ಪೇನ್, ಅಮೇರಿಕಾ, ಜರ್ಮನಿ, ದ.ಆಫ್ರಿಕಾ ಹಾಗೂ ನ್ಯೂಜಿಲಂಡ್ ದೇಶಗಳು ಉಣ್ಣೆಯ ಉತ್ಪತ್ತಿಯಲ್ಲಿ ಹೆಚ್ಚಿನ ಆಸಕ್ತಿಹೊಂದಿರುವ ದೇಶಗಳು. ಚೀನ, ಏಷ್ಯಾಮೈನರ್, ಭಾರತ ಮತ್ತು ದಕ್ಷಿಣ ಅಮೇರಿಕಾ ದೇಶಗಳು ಉಣ್ಣೆಯ ಜಮಖಾನೆ, ಹಾಸುಗಂಬಳಿ, ರತ್ನಗಂಬಳಿಗಳ ತಯಾರಿಕೆಗೆ ಪ್ರಸಿದ್ಧಿ ಪಡೆದಿವೆ.

ಆಧಾರ ಗ್ರಂಥಗಳ ಪಟ್ಟಿ

1. BAWA, H. S., *Livestock Products.* New Delhi : I.C.A.R. No. 17, 1957.

2. BELCHNER, H. G., *Sheep Management and Diseases.* Sydney and London : Angus and Robertson, Second Edition, 1951.

3. BHATIA, S. S., *Feeding of Goats for Milk Production.* New Delhi : Director of Extension, Farm Bulletin No. 52, May 1959.

4. HANDA, B. N., and D. L. DATTA, *Goat Breeding (Jumnapari) at the Government Cattle Farm Hissar.* Lahore : Govt. Printing Press, Punjab, 1935.

5. HICKEY, S. G. M. (Captain)., *Sheep Breeding Experiments.* Allahabad : Govt. Press. United Provinces, 1930.

6. KELLY, ERNEST, and C. E. ELEMENT, *Market Milk.* New Yark : John Villey and Sons, 1923.

7. KHOTT, S. S., *Sheep and Wool in India.* New Delhi : I. C. A. R. New Delhi, Bulletin No. 16, January. 1957.

8. MILLER, WILLIAM Co., and GEOFFREY P. WEST., *Black's Veterinary Dictionary.* London : Adam and Charles Black. 3rd Edition, 1955.

9. RYDER, M. L., *The Zoology of Sheep* London : Publication of the International Wool Secretariate.

10. SMITH, L. W., and MUMTAZ HUSSAIN. *Sheep Breeding at the Government Cattle Farm, Hissar.* Lahore : Govt. Printing press, Punjab, 1935.

11. *Brief Report on the Importance of Sheep in Mysore.* Bangalore: Department of Agriculture in Mysore (Livestock Section) 1935.

ಪಾರಿಭಾಷಿಕ ಶಬ್ದಕೋಶ

	ಅ	
ಅಣುಜೀವಿ		Microbe
ಅವಶೇಷ		Fossil
	ಆ	
ಆರ್ದ್ರತೆ		Humudity
ಆದಿನಿವಾಸಿ		Aborig'n
ಆಡು (ಮೇಕೆ) ಜಾತಿ		Caprine
ಆಯ್ದು ಸಂಗೋಪನೆ		Selective breeding
	ಉ	
ಉಪಕಸುಬು		Subsidiary occupation
ಉಣ್ಣೆಯ ಎಳೆಯ ಪೊಳ್ಳಾದ ಭಾಗ		Kemp
ಉಣ್ಣೆ ವಿಂಗಡಿಸುವವರ ರೋಗ		Wool sorter disease
	ಎ	
ಎಳೆ		Staple
	ಕ	
ಕಂಬಳಿ		Wool blanket
ಕಸಿ ಮಾಡುವಿಕೆ		Castration
ಕರಕಿ ಹುಲ್ಲು		Cynodon dectilon
ಕರುಳಿನ ವಿಷಬೇನೆ		Entere toxaemia
ಕಾರಲು ರೋಗ		Liver fluke
ಕುರಿ ಜಾತಿ		Ovine
ಕುರಿ ಮರಿ		Eve lamb
ಕುರಿ ಸಾಕಣೆ		Sheep husbandary
ಕುಳೇದ ಸೊಪ್ಪು		Ratoon fodder
	ಗ	
ಗ್ರಂಥಿ		Gland
ಗುಳ್ಳೆಗಳು		Blebs
ಗೋಮಾಳ		Grazing land
ಗೊರಸು		Hoof

	ಜ
ಜಂತುನಾಶಕ	Anthelmentic
ಜವಾರಿ ತಳಿ	Local breed
ಜಿಡ್ಡು	Grease
	ಟ
ಟಗರು	Ram
	ಡ
ಡುಬ್ಬ	Buck
	ತ
ತಡಿಕೆಗೋಡೆ	Thatched wall
ತತ್ತ್ರಿಯೊಳಗಿನ ಕೀಟ	Carcase
ತಳಿ ಉತ್ತಮೀಕರಣ	Verietal upgrading
ತಳಿ ಸಂವರ್ಧನೆ	Breed development
ತುಪ್ಪಟ	Wool
	ದ
ದೊಡ್ಡಿ	Pen
	ನ
ನಂಜು	Virus
ನರಡಿ ಬೇನೆ	Antharax
ನಿಸ್ಸಾರ	Non-fertile
ನೆಣ	Tallow
	ಪ
ಪಕ್ಕೆಲುಬು	Rib
ಪರಪುಷ್ಟ ಜಂತು	Parasite
ಪರ್ವತ ಸೀಮೆ	Hilly tract
ಪಿತ್ತಜನಕಾಂಗ	Liver
ಪಿತ್ತನಳಿಕೆ	Bile duct
ಪಿತ್ತಾಶಯ	Gall bladder
	ಬ
ಬೆದೆ ಕಾಲ	Heat or estrus p
ಬಸರಿ	Ficus

ಬಗ್ಗಡ	Sediment
ಬಸವನ ಹುಳ	Snail
ಬೀಜದ ಟಗರು	Breedingram

ಭ

ಭೂಗರ್ಭಶಾಸ್ತ್ರ	Geology

ಮ

ಮಧ್ಯವರ್ತಿ (ದಲ್ಲಾಳಿ)	Commission agent
ಮೃದು ರೋಮ	Down
ಮಿಶ್ರತಳಿ	Cross-breed
ಮೈಲಿಬೇನೆ (ಟೊಟ್ಟೆ ರೋಗ)	Sheep pox
ಮೈಲಿ ತೆಗೆಯುವುದು	Vaccination

ರ

ರವದಿ	Straw
ರಸವತ್ತಾದ	Succulent
ರೋಮ	Hair

ಲ

ಲಡಿ	Hank

ಸ

ಸಂದು	Joint
ಸಂವರ್ಧನೆ	Breeding
ಸ್ವಾದಿಷ್ಟ	Palatable
ಸಿದ್ಧ ಮಾಂಸ	Dressed earcass
ಸೆಟೆ	Stiffness
ಸೊಂಟ	Lumbar

ಶ

ಶಿಲಾಯುಗ	Stone age
ಶುದ್ಧ ತಳಿ	Pure breed
ಶುಷ್ಕ ಹವಾಮಾನ	Dry climate

ಹ

ಹುರಿ ಮಾಡಿದ	Corded
ಹುಲ್ಲುಗಾವಲು	Grassland
ಹೊಕ್ಕಳ	Navel
ಹೋತದ ಕೊರಳಲ್ಲಿಯ ಮಲೆಗಳು	Tussels or watles

ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	2–00
2.	ಪೀಡೆ ನಿರ್ವಹಣೆ	"	5–00
3.	ಕೀಟಗಳ ವಿಂಗಡಣೆ	"	15–00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)	12–50
5.	ಸಾಕು ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ—ಭಾಗ 1		6–25
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)	12–50
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	(ಸಾದಾ ಪ್ರತಿ)	5–00
		(ಕ್ಯಾಲಿಕೊ ಪ್ರತಿ)	6–25
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾ ಪ್ರತಿ)	15–00
		(ಕ್ಯಾಲಿಕೊ ಪ್ರತಿ)	19–00
9.	ರೈತರ ನೆಚ್ಚುಮೆಚ್ಚಿನ ಮರಗಳು	(ಸಾದಾ ಪ್ರತಿ)	15–00
		(ಕ್ಯಾಲಿಕೊ ಪ್ರತಿ)	19–00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ 2	(ಸಾದಾ ಪ್ರತಿ)	11–25
11.	ಮೈಸೂರು ರಾಜ್ಯದಲ್ಲಿ ಕೃಷಿ	(ಪ್ರತಿಗಳು ತೀರಿವೆ)	15–00
12.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾ ಪ್ರತಿ)	15–00
		(ಕ್ಯಾಲಿಕೊ ಪ್ರತಿ)	19–00
13.	ಮಣ್ಣು	(ಸಾದಾ ಪ್ರತಿ)	11–25
		(ಕ್ಯಾಲಿಕೊ ಪ್ರತಿ)	15–00
14.	ಕೃಷಿ ಸಹಕಾರ	(ಸಾದಾ ಪ್ರತಿ)	6–25
		(ಕ್ಯಾಲಿಕೊ ಪ್ರತಿ)	10–00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾ ಪ್ರತಿ)	15–00
		(ಕ್ಯಾಲಿಕೊ ಪ್ರತಿ)	19–00
16.	ಗೋಸಂಪತ್ತು	(ಸಾದಾ ಪ್ರತಿ)	6–25
		(ಕ್ಯಾಲಿಕೊ ಪ್ರತಿ)	10–00
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾ ಪ್ರತಿ)	17–50
		(ಕ್ಯಾಲಿಕೊ ಪ್ರತಿ)	21–25
19.	ಪಶುವೈದ್ಯಕೀಯ ವಿಜ್ಞಾನ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–25
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	(ಸಾದಾ ಪ್ರತಿ)	8–25
		(ಕ್ಯಾಲಿಕೊ ಪ್ರತಿ)	12–00

21.	ಟ್ರ್ಯಾಕ್ಟರುಗಳ ಹಾಗೂ ಅವುಗಳನ್ನು	(ಸಾದಾ ಪ್ರತಿ)	7–50
	ಸುಸ್ಥಿತಿಯಲ್ಲಿಡುವ ಕ್ರಮಗಳು	(ಕ್ಯಾಲಿಕೊ ಪ್ರತಿ)	12–50
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 3	(ಸಾದಾ ಪ್ರತಿ)	10.00
		(ಕ್ಯಾಲಿಕೊ ಪ್ರತಿ)	15-00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾ ಪ್ರತಿ)	11-25
		(ಕ್ಯಾಲಿಕೊ ಪ್ರತಿ)	16-25
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	19-00
25.	ಸಸ್ಯ ವರ್ಗೀಕರಣಶಾಸ್ತ್ರ	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	20-00
26.	ಪೌಷ್ಟಿಕ ಆಹಾರ	(ಸಾದಾ ಪ್ರತಿ)	9-00
		(ಕ್ಯಾಲಿಕೊ ಪ್ರತಿ)	14-00
27.	ಕಡಲ ಮೀನುಗಾರಿಕೆ	(ಸಾದಾ ಪ್ರತಿ)	5-00
		(ಕ್ಯಾಲಿಕೊ ಪ್ರತಿ)	10-00
28.	ಧಾನ್ಯದ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-70
29.	ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4-00
30.	ಶಿಶುವಿಹಾರ (ದ್ವಿತೀಯ ಮುದ್ರಣ)		6-00
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7-00
32.	ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	(ಸಾದಾ ಪ್ರತಿ)	9-00
		(ಕ್ಯಾಲಿಕೊ ಪ್ರತಿ)	14-00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾ ಪ್ರತಿ)	9–50
		(ಕ್ಯಾಲಿಕೊ ಪ್ರತಿ)	13–25
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12-50
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		16–25
36.	'ಕ್ಯಾನಿಂಗ್' – ಆಹಾರ ಜೋಪಾಸನೆಯ	(ಸಾದಾ ಪ್ರತಿ)	16–25
	ಒಂದು ಆಧುನಿಕ ವಿಧಾನ	(ಕ್ಯಾಲಿಕೊ ಪ್ರತಿ)	21–25
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–75
38.	ಜೀವಕೋಶ ಕ್ರಿಯಾ ಶಾಸ್ತ್ರ ಮತ್ತು ಜೀವ	(ಸಾದಾ ಪ್ರತಿ)	20-00
	ರಸಾಯನ ಶಾಸ್ತ್ರ	(ಕ್ಯಾಲಿಕೊ ಪ್ರತಿ)	25-00

39. ಎಲುಬು ಶಾಸ್ತ್ರ	(ಸಾದಾ ಪ್ರತಿ)	11–25
	(ಕ್ಯಾಲಿಕೊ ಪ್ರತಿ)	16–25
40. ಕಡಲೆಕಾಯಿ (ಶೇಂಗಾ)	(ಸಾದಾ ಪ್ರತಿ)	10–00
	(ಕ್ಯಾಲಿಕೊ ಪ್ರತಿ)	15–00
41. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ–1)	(ಸಾದಾ ಪ್ರತಿ)	25–00
	(ಕ್ಯಾಲಿಕೊ ಪ್ರತಿ)	30–00
42. ತೆಂಗು, ಅಡಿಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		9–00
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12-00
44. ಭಾರತದಲ್ಲಿ ಕೋಳಿಸಾಕಣೆ	(ಸಾದಾ ಪ್ರತಿ)	22–50
	(ಕ್ಯಾಲಿಕೊ ಪ್ರತಿ)	27–50
45. ಕಲ್ಲುನಾರು (ಭೂತಾಳೆ) ಗಿಡಗಳು		5–00
46. ಎಣ್ಣೆ ಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7–50
47. ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–00
48. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		5–00
49. ಮಾದಕ (ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3–75
50. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4–00
51. ಸಸ್ಯ ಸಾಮ್ರಾಜ್ಯ	(ಸಾದಾ ಪ್ರತಿ)	25–00
	(ಕ್ಯಾಲಿಕೊ ಪ್ರತಿ)	30–00
52. ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ	(ಸಾದಾ ಪ್ರತಿ)	8–25
	(ಕ್ಯಾಲಿಕೊ ಪ್ರತಿ)	13–25
53. ಮೀನುಗಾರಿಕೆ	(ಸಾದಾ ಪ್ರತಿ)	10–00
	ಕ್ಯಾಲಿಕೊ ಪ್ರತಿ	15–00
54. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ-2)	(ಸಾದಾ ಪ್ರತಿ)	20–00
	(ಕ್ಯಾಲಿಕೊ ಪ್ರತಿ)	25–00

55. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	(ಸಾದಾ ಪ್ರತಿ)	12-50
	(ಕ್ಯಾಲಿಕೊ ಪ್ರತಿ)	17-50
56. ಭಾರತದಲ್ಲಿ ಜೇನುಸಾಕಣೆ	(ಸಾದಾ ಪ್ರತಿ)	20-00
	(ಕ್ಯಾಲಿಕೊ ಪ್ರತಿ)	25-00
57. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು	(ಸಾದಾ ಪ್ರತಿ)	7-50
	(ಕ್ಯಾಲಿಕೊ ಪ್ರತಿ)	12-50
58. ದೊಡ್ಡರೋಗ		5-00
59. ಮೂಲ ಅರ್ಥಶಾಸ್ತ್ರ	(ಸಾದಾ ಪ್ರತಿ)	19-00
	(ಕ್ಯಾಲಿಕೊ ಪ್ರತಿ)	24-00
60. ಜೇನುಸಾಕಣೆ	(ಸಾದಾ ಪ್ರತಿ)	17-50
	(ಕ್ಯಾಲಿಕೊ ಪ್ರತಿ)	22-50
61. ಕೃಷಿ ರಸಾಯನಶಾಸ್ತ್ರ		3-25
62. ತರಕಾರಿ ಬೆಳೆಗಳ ಕೀಟನಿಯಂತ್ರಣ	(ಸಾದಾ ಪ್ರತಿ)	12-50
	(ಕ್ಯಾಲಿಕೊ ಪ್ರತಿ)	19-00
63. ಹುಲಿ—ಭಾರತದ ರಾಷ್ಟ್ರೀಯ ಮೃಗ	(ಸಾದಾ ಪ್ರತಿ)	20-00
	(ಕ್ಯಾಲಿಕೊ ಪ್ರತಿ)	24-00
64. ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ	(ಕ್ಯಾಲಿಕೊ ಪ್ರತಿ)	125-00
65. ಪ್ರಾಣಿಗಳ ವರ್ತನೆ	(ಸಾದಾ ಪ್ರತಿ)	17-00
	(ಕ್ಯಾಲಿಕೊ ಪ್ರತಿ)	22-00
66. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	(ಸಾದಾ ಪ್ರತಿ)	20-00
	(ಕ್ಯಾಲಿಕೊ ಪ್ರತಿ)	25-00
67. ಸಸ್ಯತಳಿ ಅಭಿವೃದ್ಧಿ ವಿಧಾನಗಳು	(ಕ್ಯಾಲಿಕೊ ಪ್ರತಿ)	60-00
68. ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಪಡೆದಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ-1)		8-50
69. ರೇಖಾತ್ಮಕ ಬೀಜಗಣಿತ	(ಸಾದಾ ಪ್ರತಿ)	30-00
	(ಕ್ಯಾಲಿಕೊ ಪ್ರತಿ)	35-00
70. ಕುರಿ ಸಾಕಣೆ	(ಸಾದಾ ಪ್ರತಿ)	8-00
	(ಕ್ಯಾಲಿಕೊ ಪ್ರತಿ)	13-00

ಅಚ್ಚಿನಲ್ಲಿರುವ ಪ್ರಕಟಣೆಗಳು

71. ಸಾವಯುವ ರಸಾಯನಶಾಸ್ತ್ರ ಪ್ರವೇಶಿಕೆ
72. ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ
73. ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು
74. ಸಹಕಾರಿ ಬೇಸಾಯ
75. ಸಂಸ್ಕೃತಿಯ ರೂಪಿಕೆಗಳು
76. ನೀರಾವರಿ ತತ್ವ ಮತ್ತು ಪದ್ಧತಿಗಳು
77. ಮಣ್ಣು ಶಿಲೀಂಧ್ರ ಕೈಪಿಡಿ
78. ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ
79. ಕೆಲವು ಸಸ್ಯಗಳ ವೈಜ್ಞಾನಿಕ ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು
80. ಬೀಜಗಣಿತ ಪರಿಚಯ
81. ಆಧುನಿಕ ಹೈನಾಗಾರ ದನಗಳ ನಿರ್ವಹಣೆ
82. ಜೋಳ
83. ಹಂದಿಯ ಭ್ರೂಣಶಾಸ್ತ್ರ
84. ಮೀನು ಮತ್ತು ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ
85. ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ
86. ಮತ್ಸ್ಯಶಾಸ್ತ್ರ
87. ಹಣ್ಣು ಮತ್ತು ತರಕಾರಿ ಸಂಸ್ಕರಣ
88. ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ
89. ತೆಂಗು
90. ಕೋಶ